ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 ಸಂಚಿಕೆ 3 | ಜನವರಿ 15–21, 2018 | ಪುಟ 24 | ರೂ. 10/-

web: www.janashakthi.co.in e-mail: js_weekly@yahoo.com



'ಆಧಾರ್' ಸುರಕ್ಷಿತತೆ ಬಯಲು ಮಾಡಿದ 'ಟ್ರಿಬ್ಯುನ್' ವರದಿಗಾರ್ತಿ

ರಚನಾ ಖೈರಾ

ವಿಶೇಷ ಸಂಚಿಕೆ





ನವ ಕರ್ನಾಟಕ ನಿರ್ಮಾಣದ ಜನಪರ ಪರ್ಯಾಯಕ್ಕೆ ಕರೆ



ದೇಶ ಮಾರುವ FDI ನೀತಿ

ಭ್ರಷ್ಟಾಚಾರ ಕಾನೂನುಬದ್ಧಗೊಳಿಸುವ ಚುನಾವಣಾ ಬಾಂಡ್



ಆಧಾರ್ ಜೋಡಣೆ ಕಡ್ಡಾಯ ಬೇಡ



ಕಾರ್ಮಿಕರ ಈ ಸಾವು ನ್ಯಾಯವೇ?

SFI ನಾಯಕಿಗೆ 'ಲವ್ ಜಿಹಾದ್' ಕಿರುಕುಳ

ಪ್ರೀತಿ ಪದಗಳ ಪಯಣ

ಸೌಹಾರ್ದತೆಯೆಡೆಗೆ ನಮ್ಮ ನಡಿಗೆ

ನಮ್ಮ ಸಂವಿಧಾನ ನಮ್ಮ ಹೆಮ್ಮೆ

ರಾಜ್ಯ ಸಮಾವೇಶ



ದಯವಿಟ್ಟು ಬನ್ನಿ, ನಡೆಯಲ್ಲಿ ಪಾಲ್ಗೊಳ್ಳಿ





ಎಪ್ರಿಲ್18ರಿಂದ 22ರ ವರೆಗೆ ಹೈದರಾಬಾದಿನಲ್ಲಿ ನಡೆಯಲಿರುವ ಸಿಪಿಐ(ಎಂ)ನ 22ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯಸಮ್ಮೇಳನ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ಜನವರಿ 2ರಿಂದ 5ರ ವರೆಗೆ ಯಶಸ್ವಿಯಾಗಿ ನಡೆದಿದೆ. ಇನ್ನು ಐದು ತಿಂಗಳೊಳಗೆ ವಿಧಾನಸಭಾ ಚುನಾವಣೆಗಳನ್ನು ಎದುರಿಸಲಿರುವ ನಮ್ಮ ರಾಜ್ಯದಲ್ಲಿ ಒಂದೆಡೆಯಲ್ಲಿ ಐದು ವರ್ಷಗಳ ಹಿಂದೆ ಅಧಿಕಾರ ಗಳಿಸಿದ ಕಾಂಗ್ರೆಸ್ ದೇಶದ ಎಲ್ಲೆಡೆಗಳಲ್ಲಿ ಕಂಡಿರುವ ಬೆಳವಣಿಗೆಗಳ ನಂತರವೂ ಕಾರ್ಪೊರೇಟ್–ಪರ, ಜನ–ವಿರೋಧಿ ನವ–ಉದಾರವಾದಿ ಧೋರಣೆಗಳನ್ನೇ ಮುಂದುವರೆಸಿದ್ದರೆ, ಕೇಂದ್ರದಲ್ಲಿ ಇವೇ ಧೋರಣೆಗಳನ್ನು ಇನ್ನಷ್ಟು ತೀವ್ರವಾಗಿ ಅನುಸರಿಸುತ್ತಿರುವ ಬಿಜೆಪಿ ಮತ್ತೆ ಇಲ್ಲಿ ಅಧಿಕಾರ ಪಡೆಯಲು ಕೋಮು ಧ್ರುವೀಕರಣದ ಮಾರ್ಗವನ್ನು ಹಿಡಿದಿದೆ. ಹೀಗೆ ಈ ಎರಡು ಪಕ್ಷಗಳು ಅಧಿಕಾರ ಪಡೆಯಲು ಪರಸ್ಪರ ಬೈದಾಟಗಳಲ್ಲೇ ಮಗ್ನವಾಗಿರುವಾಗ, ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕರು, ರೈತರು ಮತ್ತು ಜನಸಾಮಾನ್ಯರ ಮೂರ್ತ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟ ನಡೆಸಿರುವ ಸಿಪಿಐ(ಎಂ) ಈ ಹೋರಾಟಗಳ, ತನ್ನ ಸಾಧನೆ–ಕೊರತೆಗಳ ಪರಾಮರ್ಶೆ ನಡೆಸಿ ಮುಂದಿನ ಮೂರು ವರ್ಷಗಳಲ್ಲಿ ನಿರ್ವಹಿಸಬೇಕಾದ ಕೆಲಸ–ಕಾರ್ಯಗಳ ರೂಪುರೇಷೆಯನ್ನು ನಿರ್ಧರಿಸಿದೆ.

ಇದರ ಒಂದು ಚಿತ್ರವನ್ನು ಈ ವಿಶೇಷ ಸಂಚಿಕೆಯ ಪುಟ 2, 4ರಿಂದ 14,23 ಮತ್ತು 24ರಲ್ಲಿ ಪ್ರಕಟಿಸಿರುವ ವರದಿಗಳು ನಮ್ಮ ಓದುಗರ ಮುಂದಿಡುತ್ತಿವೆ. ಈ ಪುಟದಿಂದ ಪುಟ 9 ರವರೆಗೆ ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿದ 17 ನಿರ್ಣಯಗಳನ್ನು ಕೊಡಲಾಗಿದೆ. ಪುಟ 11ರಲ್ಲಿ ಸಮ್ಮೇಳನದ ಬಹಿರಂಗ ಸಭೆ ಮತ್ತು ಅದರ ಮೊದಲು ನಡೆದ ರ್‍ಯಾಲಿಯ ವರದಿ ಇದೆ. ಪುಟ 13ರಲ್ಲಿ ಸಮ್ಮೇಳನದ ಕಲಾಪಗಳ ವರದಿಯಿದೆ. ಮತ್ತು ಇತರ ವಿವರಗಳು ಪುಟ 23 ಮತ್ತು 24ರಲ್ಲಿವೆ.

ನವ ಕರ್ನಾಟಕ ನಿರ್ಮಾಣದ ಜನಪರ ಪರ್ಯಾಯ

ನವ ಕರ್ನಾಟಕದ ಎಂಬ ಹೆಸರು ಕರ್ನಾಟಕದ ಮೂರು ಪ್ರಮುಖ ಮೂರು ಪಕ್ಷಗಳೂ ಬಹಳ ಆಸಕ್ತಿ ವಹಿಸಿದಂತೆ ತೋರ್ಪಡಿಸಿಕೊಳ್ಳುತ್ತಿವೆ. ಬಿಜೆಪಿ ರಾಜ್ಯಾದ್ಯಂತ ತಾನು ಮಾಡುತ್ತಿರುವ ಜಾತಾಕ್ಕೆ ನವ ಕರ್ನಾಟಕ ಪರಿವರ್ತನಾ ಯಾತ್ರೆ ಎಂದು ಹೆಸರಿಸಿದ್ದರೆ, ಜನತಾ ದಳ ಕರ್ನಾಟಕ ವಿಕಾಸ ಯಾತ್ರೆ ನಡೆಸಿದೆ. ಕಾಂಗ್ರೆಸ್ ನ ರಾಜ್ಯ ಸರ್ಕಾರ ನವ ಕರ್ನಾಟಕ ನಿರ್ಮಾಣಕ್ಕೆ ಸದಾ ಸಿದ್ಧ ಎಂದು ಪುಟಗಟ್ಟಲೆ ಜಾಹೀರಾತು ನೀಡುತ್ತಿದೆ.

ಆದರೆ ಈ ಯಾವ ಪಕ್ಷಗಳೂ ತಮ್ಮ ನವ ಕರ್ನಾಟಕದ ಯೋಜನೆ, ಪರಿಕಲ್ಪನೆ ಏನು ಎಂಬುದರ ಬಗ್ಗೆ ಒಂದು ಮಾತೂ ಆಡುತ್ತಿಲ್ಲ. ಕನ್ನಡ, ಕರ್ನಾಟಕ ಎಂಬ ಬಗ್ಗೆ ಸಾಮಾನ್ಯ ಜನರಿಗೆ ಇರುವ ಭಾವನಾತ್ಮಕ ಸಂಬಂಧವನ್ನು ರಾಜಕೀಯಕ್ಕೆ ದುರ್ಬಳಕೆ ಮಾಡಿಕೊಳ್ಳುವುದನ್ನು ಬಿಟ್ಟರೆ ರಾಜ್ಯದ ಜನರ ಬದುಕನ್ನು ಉತ್ತಮ ಪಡಿಸುವ ಬಗ್ಗೆ, ರಾಜ್ಯದ ಪ್ರಮುಖ ಸಮಸ್ಯೆಗಳ ಬಗ್ಗೆ ಯಾವ ಕಾಳಜಿಯೂ ಇಲ್ಲ.

ಬಿಜೆಪಿ ಪಕ್ಷವು ನವಕರ್ನಾಟಕ ಪರಿವರ್ತನ ಯಾತ್ರೆ ನಡೆಸುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕವನ್ನು ಕೋಮುವಾದಿಕರಿಸಲು ಪ್ರಯತ್ನಿಸುತ್ತಿದೆ. ಅಸಮಾನತೆ, ತಾರತಮ್ಯ, ದ್ವೇಷ–ದಮನಕಾಂಡದ ಕೋಮುಗ್ರಸ್ಥ ಕರ್ನಾಟಕವು ನವಕರ್ನಾಟಕವಾಗಲು ಸಾಧ್ಯವೇ ಇಲ್ಲ. ಹಾಗೇಯೆ ಕೋಮುವಾದಿ ಧಾಳಿಗಳ ಎದುರಿನಲ್ಲಿ ಆ ಶಕ್ತಿಗಳನ್ನು ನಿರ್ಣಯಕವಾಗಿ ಎದುರಿಸಲು ಕಾಂಗ್ರೆಸ್ ಪಕ್ಷವು ಸಿದ್ದವಿಲ್ಲ. ಉದಾರಿಕರಣ, ಆರ್ಥಿಕ ನೀತಿಗಳು, ಮೃದು ಹಿಂದುತ್ವ ಧೋರಣೆಗಳು ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿ ಉಳಿಸಲಾರವು ಎಂದು ಸಿಪಿಐ(ಎಂ) ಸ್ಪಷ್ಟ ಪಡಿಸುತ್ತದೆ.

ಇಲ್ಲಿಯವರೆಗೆ ಈ ಮೂರೂ ಪಕ್ಷಗಳೂ ರಸ್ತೆ, ಸೇತುವೆ, ಮೇಲ್ಸೇತುವೆ, ನೀರಾವರಿ ಎಂಬ ಕೆಲವು ಭೌತಿಕ ಅಭಿವೃದ್ಧಿಯ ವಿಷಯಗಳನ್ನು ಮಾತ್ರ ಆಗಾಗ್ಗೆ ಪ್ರಸ್ತಾಪಿಸುತ್ತಿವೆ. ಕರ್ನಾಟಕದ ಜನ ಸಮುದಾಯದ ರಚನೆ, ಅವರ ಬದುಕಿನ ಬಗ್ಗೆ ಅಧ್ಯಯನಗಳ ಆಧಾರದ ಮೇಲೆ ಒಂದು ಜನಪರ ಅಭಿವೃದ್ಧಿ ಇವುಗಳ ಚಿಂತನೆಯ ಪರಿಧಿಯಲ್ಲಿಯೇ ಇಲ್ಲ. ಈ ಜಾತಾಗಳ ಸಂದರ್ಭದಲ್ಲಿ ಜನರ ಮುಖ್ಯ



ಮಂಡನೆ: ಜಿ.ಎನ್. ನಾಗರಾಜ್
ಅನುಮೋದನೆ: ಕೆ.ಎನ್. ಉಮೇಶ್

ವಿಭಾಗಗಳಾದ ರೈತರು, ಕೂಲಿಕಾರರು, ಕಾರ್ಮಿಕರು, ಮಧ್ಯಮ ವರ್ಗಗಳ ಸಮಸ್ಯೆಗಳ ಬಗ್ಗೆ ಮಾತೇ ಇಲ್ಲ. ಕೇವಲ ಕೆಟ್ಟ ಭಾಷೆಯಲ್ಲಿ ಪರಸ್ಪರರನ್ನು ದೂರುವುದಷ್ಟೇ ನಡೆದಿದೆ.

ಇಲ್ಲಿಯವರೆಗೆ ಕರ್ನಾಟಕವನ್ನು ಆಳಿದ ಪಕ್ಷಗಳು ಇಲ್ಲಿಯ ಭೂಮಾಲಕರ, ಬಂಡವಾಳಶಾಹಿಗಳ ಸಂಪತ್ತನ್ನು ಬೆಳೆಸುವುದಕ್ಕೆ ಮಾತ್ರ ಗಮನ ನೀಡಿದವು. ಎರಡು ಮೂರು ಜಿಲ್ಲೆಗಳ ಗೇಣಿ ರೈತರಿಗೆ ನೀಡಿದ ಹಕ್ಕುಗಳನ್ನು ಹೊರತುಪಡಿಸಿ ಭೂ ಸುಧಾರಣೆಯನ್ನು ಭೂಮಾಲಕರ ಕುಟುಂಬಗಳೊಳಗೆ ಪುನರ್ ಹಂಚಿಕೆ ಮಾಡುವುದಷ್ಟಕ್ಕೆ ಮಾತ್ರ ಸೀಮಿತವಾಯಿತು. ಇಂದಿಗೂ ಸಾವಿರಾರು, ನೂರಾರು ಎಕರೆ ಭೂಮಿ ಒಂದೊಂದು ಕುಟುಂಬದ ಹಿಡಿತದಲ್ಲುಳಿದಿರುವ ಪರಿಸ್ಥಿತಿ ಹಲವು ಜಿಲ್ಲೆಗಳಲ್ಲಿದೆ.

ಕೈಗಾರಿಕಾ ರಂಗದಲ್ಲಿ ರಾಷ್ಟ್ರ ಮಟ್ಟದ, ರಾಜ್ಯ ಮಟ್ಟದ ಬಂಡವಾಳಶಾಹಿಗಳ ಹಿತಗಳಿಗಾಗಿ ಕೆಲಸ ಮಾಡಿವೆ. ಶಿಕ್ಷಣ, ಆರೋಗ್ಯ, ಗಣಿ ಮೊದಲಾದ ರಂಗಗಳಲ್ಲಿ ಈ ಪಕ್ಷಗಳ ನಾಯಕರು ಮತ್ತವರ ಸಂಬಂಧಿಗಳು ದೊಡ್ಡ ಪ್ರಮಾಣದಲ್ಲಿ ಸಂಪತ್ತನ್ನು ಶೇಖರಿಸಲು ಅವಕಾಶ ಮಾಡಿಕೊಟ್ಟಿವೆ. ಅದಕ್ಕಾಗಿ ಸರ್ಕಾರಿ ಕೈಗಾರಿಕೆ, ಶಾಲೆ, ಆಸ್ಪತ್ರೆಗಳನ್ನು ಕಡೆಗಣಿಸಿದವು

ಈ ಎರಡೂ ವರ್ಗಗಳು ಸಂಪತ್ತನ್ನು ಶೇಖರಿಸಲೋಸುಗ ಅರಕ್ಷಿತ ಗೇಣಿದಾರಿಕೆ, ವಿಪರೀತ ಕಡಿಮೆ ಕೂಲಿ, ಅಘೋಷಿತ ಜೀತಗಾರಿಕೆ, ಅಭದ್ರ ಉದ್ಯೋಗಗಳ ಮೂಲಕ ಅವಕಾಶ ಮಾಡಿಕೊಟ್ಟವು.

ಜಾಗತೀಕರಣ, ಖಾಸಗೀಕರಣದ ನೀತಿಗಳನ್ನು ಜಾರಿಗೆ ತಂದ ನಂತರ ರಾಜ್ಯವನ್ನು ಆಳಿದ ಈ ಕಾಂಗ್ರೆಸ್, ಜನತಾದಳ, ಬಿಜೆಪಿ ಪಕ್ಷಗಳು ಅವುಗಳನ್ನು ಬಹು ಉತ್ಸಾಹದಿಂದಲೇ ಜಾರಿಗೊಳಿಸಿದವು. ಬಂಡವಾಳಗಾರರು ಭೂಮಿ, ಖನಿಜ ಮೊದಲಾದ ಸಾರ್ವಜನಿಕ ಸಂಪತ್ತನ್ನು ಎಗ್ಗಿಲ್ಲದೆ ಲೂಟಿ ಹೊಡೆಯಲು ಅವಕಾಶಮಾಡಿಕೊಟ್ಟವು. ಇವುಗಳ ಜೊತೆಗೆ ಜಾಗತೀಕರಣದ ಫಲವಾಗಿ ಬೆಳೆದ ಸಾಫ್ಟ್‌ವೇರ್ ಉದ್ಯಮವೂ ಸೇರಿದಂತೆ ಹೊಸ ಉದ್ಯಮಪತಿಗಳ ಉಗಮವಾಯಿತು.

ನಗರಾಸ್ತಿ ಮಿತಿ ಕಾಯಿದೆ ರದ್ದತಿ, ಬಾಡಿಗೆ ನಿಯಂತ್ರಣ ಕಾಯಿದೆ ಸಡಿಲಿಕೆಗಳಿಂದಾಗಿ ರಿಯಲ್ ಎಸ್ಟೇಟ್ ದಂಧೆಕೋರರು ಒಂದು ಕಡೆ ಕೃಷಿ ಭೂಮಿಯನ್ನು ಕಬಳಿಸುತ್ತಾ ಮತ್ತೊಂದೆಡೆ ನಿವೇಶನಗಳ ಬೆಲೆ, ಮನೆ ಬಾಡಿಗೆಗಳನ್ನು ಏರಿಸಿ ನಗರ, ಪಟ್ಟಣಗಳಲ್ಲಿ ದುಡಿವ ಜನರ ಬದುಕನ್ನು ಅಸಹನೀಯವಾಗಿಸಿದೆ. ಮತ್ತೊಂದೆಡೆ ಅಯೋಜಿತ

ಪುಟ 4 ನೋಡಿ

ಜನವರಿ 30, 2018: 'ಸೌಹಾರ್ದತೆಗಾಗಿ ಕರ್ನಾಟಕ' ಮಾನವ ಸರಪಳಿ – ಯಶಸಿಗೆ ಬೆಂಬಲಿಸಲು ನಿರ್ಧಾರ

ಆದಿ ಕವಿ ಪಂಪನಿಂದ ಆರಂಭವಾಗಿ ಇಂದಿನವರೆಗೆ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆ ಸೌಹಾರ್ದ ಪ್ರಿಯವಾಗಿದೆ. ನಾಡಿನೆಲ್ಲ ಜನರು ಶಾಂತಿ ಮತ್ತು ನೆಮ್ಮದಿಯ ವಾತವರಣದಲ್ಲಿ ಬದುಕನ್ನು ಸಾಗಿಸಲು ಬಯಸುವಂಥವರು.

ಆದರೆ ಇತ್ತೀಚಿನ ದಶಕದಲ್ಲಿ ಈ ಸೌಹಾರ್ದವನ್ನು ನಾಶ ಮಾಡಲು, ಕೋಮುದ್ವೇಷವನ್ನು ಹರಡಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸುತ್ತಿರುವುದನ್ನೂ ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನವು ಆತಂಕದಿಂದ ವ್ಯಕ್ತಪಡಿಸುತ್ತದೆ. ಈಗಾಗಲೇ ಕರಾವಳಿಯನ್ನು ತಮ್ಮ ಪ್ರಯೋಗಶಾಲೆಯಾಗಿಸಿಕೊಂಡ ಕೋಮುವಾದಿ ಶಕ್ತಿಗಳು ನಿತ್ಯವೂ ಜನರ ನೆಮ್ಮದಿಯ ಬದುಕಿಗೆ ಭಂಗ ತರುತ್ತಿದ್ದಾರೆ. ಸಮಾಜದ ನಾಗರಿಕರ ಮೇಲೆ, ವಿಶೇಷವಾಗಿ ಅಲ್ಪಸಂಖ್ಯಾತರ ಮೇಲೆ, ದಲಿತರು, ಮಹಿಳೆಯರ ಮೇಲೆ ವಿವಿಧ ನೆಪಗಳನ್ನೊಡ್ಡಿ ದೈಹಿಕ, ಮೌಖಿಕ ಧಾಳಿಗಳನ್ನು ನಡೆಸಲಾಗುತ್ತಿದೆ. ನಾಡಿನ ಸಂಸ್ಕೃತಿಕ, ವೈಚಾರಿಕ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದ ಹಿರಿಯ ಸಂಶೋಧಕರಾದ ಪ್ರೊ. ಎಂ.ಎಂ. ಕಲಬುರ್ಗಿ, ಪತ್ರಕರ್ತೆಗೌರಿ ಲಂಕೇಶರ ಕೊಲೆಗಳು ನಾಡಿನ ಜನರನ್ನು ಬೆಚ್ಚಿ ಬೀಳಿಸಿವೆ.

ಇದೇ ಸಮಯದಲ್ಲಿ ದೇಶದಲ್ಲಿನ ವಾತವರಣ



ಮಂಡನೆ : ಎಸ್.ವೈ. ಗುರುಶಾಂತ್
ಅನುಮೋದನೆ : ಕೆ.ಎಸ್. ವಿಮಲಾ

ಮತ್ತಷ್ಟು ಹದಗೆಡುತ್ತಿದೆ. ಶಿಕ್ಷಣದ ಉನ್ನತ ಸಂಸ್ಥೆಗಳಾದ ವಿಶ್ವವಿದ್ಯಾಲಯಗಳ ಮೇಲೆ ದಾಳಿ, ಸಾಹಿತಿ, ಚಿಂತಕರ ಮೇಲೆ ಅಸಹ್ಯಕರ ಬೈಗುಳುಗಳ ದಾಳಿಗಳು ಹತ್ಯೆಗೈಯುವ ದಾಳಿ ಸಾಮಾನ್ಯವಾಗಿ ಬಿಟ್ಟಿವೆ. ಹಿಂಸೆ, ದ್ವೇಷದ ವಾತಾವರಣ ವಿಷಗಾಳಿಯಂತೆ ಹಬ್ಬುತ್ತಿದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕೆಲಸ, ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ನಾಶ ಮಾಡುವ ಪ್ರಯತ್ನಗಳು ಎಡೆಬಿಡದೆ ಸಾಗುತ್ತಿವೆ. ದೇಶದ ಹಲವು ರಾಜ್ಯಗಳನ್ನು ಆವರಿಸಿದ ಈ ಶಕ್ತಿಗಳು ನಮ್ಮ ರಾಜ್ಯವನ್ನು ಕಬಳಿಸುವ ಹುನ್ನಾರ ಮಾಡುತ್ತಿರುವುದನ್ನೂ ಸಮ್ಮೇಳನವು ಗಂಭೀರವಾಗಿ ಪರಿಗಣಿಸುತ್ತದೆ.

ಇಂತಹ ಅಪಾಯಕಾರಿ ಸನ್ನಿವೇಶವನ್ನು ನಾಡಿನೆಲ್ಲಾ ಜನರು ಒಟ್ಟಾಗಿ ಎದುರಿಸಬೇಕಾಗಿದೆ. ಕರ್ನಾಟಕದ ಜನರ ಬದುಕಿನ ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ರಾಜ್ಯದ ಹಲವೆಡೆಗಳಲ್ಲಿ ವಿಚಾರ ಸಂಕಿರಣಗಳು, ಸಮಾವೇಶಗಳು, ಬಹಿರಂಗ ಸಭೆಗಳು ಮೊದಲಾದ ಹಲವು ರೀತಿಯ ಚಟುವಟಿಕೆಗಳು ನಡೆದಿವೆ. ಆದರೂ ಶಾಂತಿ, ನೆಮ್ಮದಿ ಕದಡುವ, ಸೌಹಾರ್ದತೆ ಕೆಡಿಸುವ, ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ಶಕ್ತಿಗಳ ದಾಳಿಯ ವೇಗ ಮತ್ತು ಬಿರುಸಿಗೆ ಇವು ಸಾಲದಾಗಿದೆ. ಆದ್ದರಿಂದ ಈ ಮಹತ್ತರ ಅಪಾಯದ ಬಗ್ಗೆ ಕರ್ನಾಟಕದ ಲಕ್ಷಾಂತರ, ಕೋಟ್ಯಾಂತರ ಜನರನ್ನು ಜಾಗೃತಿಸುವ ಬೃಹತ್ ಪ್ರಯತ್ನ ಇಂದು ಅತಿ ತುರ್ತಿನದಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮ್ಮೇಳನವು ಅಭಿಪ್ರಾಯ ಪಡುತ್ತದೆ.

ಕರ್ನಾಟಕದ ಸೌಹಾರ್ದಮಯ ಬದುಕನ್ನು, ನಮ್ಮ ವೈವಿಧ್ಯಮಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ

ಪುಟ 4 ನೋಡಿ

ಸಂಪಾದಕೀಯ

ಕಾರ್ಮಿಕರ ಈ ಸಾವು ನ್ಯಾಯವೇ?

ಈ ವಾರ ಬೆಂಗಳೂರಿನಲ್ಲಿ ನಡೆದ ಎರಡು ದಾರುಣ ಪ್ರಕರಣಗಳಲ್ಲಿ 8 ಜನ ಕಾರ್ಮಿಕರು ಸಾವನ್ನಪ್ಪಿದ್ದಾರೆ. ಈ ಎರಡೂ ಪ್ರಕರಣಗಳನ್ನು ಪರಿಶೀಲಿಸಿದರೆ ಒಂದನೆಯದಾಗಿ ಇದು ತಡೆಯಬಹುದಾಗಿದ್ದ ಸಾವುಗಳು. ಎರಡನೆಯದು ಇಂತಹ ಪ್ರಕರಣಗಳು ಪದೇ ಪದೇ ಮರುಕಳಿಸುತ್ತಿರುವುದನ್ನು ನೋಡಿದರೆ ಇವನ್ನು ಸಂಘಟಿತ ಕೊಲೆಗಳು ಎನ್ನಬೇಕಾಗುತ್ತದೆ. ಬಡ ಕಾರ್ಮಿಕರ ಜೀವಕ್ಕೆ ಬೆಲೆಯೇ ಇಲ್ಲವೆಂಬಂತಿದೆ.

ಮೊದಲನೆಯದು ಎಚ್‌ಎಸ್ ಆರ್ ಲೇಔಟ್ ಬಳಿಯ ಬಂಡೆಪಾಳ್ಯದ ಸೋಮಸಂದ್ರಪಾಳ್ಯದ ಎನ್.ಡಿ.ಸಫಲ್ ಅಪಾರ್ಟ್‌ಮೆಂಟ್‌ನ ತ್ಯಾಜ್ಯ ನೀರು ಸಂಸ್ಕರಣಾ ಘಟಕ(ಎಸ್.ಟಿ.ಪಿ) ಸ್ವಚ್ಛಗೊಳಿಸುವ ವೇಳೆ ಮೂವರು ಕಾರ್ಮಿಕರು ಮೃತಪಟ್ಟ ಪ್ರಕರಣ. ಎರಡನೆಯದು ಕೃಷ್ಣರಾಜ ಮಾರುಕಟ್ಟೆ ಸಮೀಪದ 'ಕೈಲಾಶ್ ಬಾರ್ ಅಂಡ್ ರೆಸ್ಟೋರೆಂಟ್'ನಲ್ಲಿ ನಡೆದಿರುವ ಅಗ್ನಿ ಅನಾಹುತದಲ್ಲಿ ಬಾಗಿಲು ಹಾಕಿಕೊಂಡು ಬೀಗ ಹಾಕಿಕೊಂಡು ಮಲಗಿದ್ದ ಐವರು ಕಾರ್ಮಿಕರು ಬಲಿಯಾಗಿದ್ದಾರೆ. ಈ ಎರಡೂ ಘಟನೆಗಳು ನಮ್ಮ ಪೌರವ್ಯವಸ್ಥೆಯಲ್ಲಿ ಕಾರ್ಮಿಕರ ಜೀವಗಳ ಕುರಿತು ದಿವ್ಯ ನಿರ್ಲಕ್ಷ್ಯ ಇರುವುದನ್ನು ಮತ್ತೆ ಸಾಬೀತುಪಡಿಸುವಂತಿದೆ.

ಮೊದಲ ಪ್ರಕರಣದಲ್ಲಿ ಓರ್ವ ಸ್ವಚ್ಛತಾ ಮೇಲ್ವಿಚಾರಕ ಹಾಗೂ ಕೂಲಿ ಕಾರ್ಮಿಕರಿಬ್ಬರು ಸಾವಿಗೀಡಾಗಿದ್ದಾರೆ. ವಿಷಯುಕ್ತ ಗಾಳಿ ಸೇವನೆಗೆ ಮೂವರೂ ಬಲಿಯಾಗಿರುವುದು ಸುರಕ್ಷತಾ ಕ್ರಮಗಳಲ್ಲಿ ಲೋಪವಾಗಿರುವುದನ್ನು ಸ್ಪಷ್ಟವಾಗಿ ತೋರಿಸುವಂತಿದೆ. ಎಸ್.ಟಿ.ಪಿ ಹಾಗೂ ಮ್ಯಾನ್ಹೋಲುಗಳಲ್ಲಿ ಅನಿರೀಕ್ಷಿತ ಅಪಾಯಗಳು ಎದುರಾಗುವುದು ಸಹಜ. ಹಾಗಾಗಿಯೇ ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಕಾನೂನು ಹೇಳುತ್ತದೆ. ವಾಸ್ತವ ಹೀಗಿದ್ದರೂ ಸುರಕ್ಷತೆಯನ್ನು ಮತ್ತೆ ಮತ್ತೆ ನಿರ್ಲಕ್ಷಿಸಲಾಗುತ್ತದೆ. ಬಡಪಾಯಿ ಕಾರ್ಮಿಕರ ಜೀವಗಳೊಂದಿಗಿನ ಚೆಲ್ಲಾಟ ಮುಂದುವರೆದೇ ಇದೆ. ಪ್ರಸಕ್ತ ಪ್ರಕರಣದಲ್ಲಂತೂ ಯಾವುದೇ ಮುನ್ನೆಚ್ಚರಿಕೆಯನ್ನು ವಹಿಸಿದಂತಿಲ್ಲ. ಎಸ್.ಟಿ.ಪಿ ಗೆ ಇಳಿದಿರುವ ಕಾರ್ಮಿಕ ಉಸಿರಾಟದ ತೊಂದರೆಯಿಂದ ಕೂಗಿಕೊಂಡಾಗ, ಮೇಲೆ ಇದ್ದ ಉಳಿದಿಬ್ಬರು ಟ್ಯಾಂಕ್ನೊಳಗೆ ಇಳಿದಿದ್ದಾರೆ. ಮೂವರೂ ವಿಷಗಾಳಿ ಸೇವಿಸಿ ಟ್ಯಾಂಕಿನೊಳಗೆ ಜೀವ ಕಳೆದುಕೊಂಡಿದ್ದಾರೆ. ಈ ಮೂವರ ಸಾವಿನ ಕ್ಷಣಗಳ ಬೊಬ್ಬೆಯನ್ನು ಅಪಾರ್ಟ್‌ಮೆಂಟ್ ನಿವಾಸಿಗಳು ಕಿಟಕಿಗಳಿಂದ ನೋಡುತ್ತಿದ್ದರು. ಸಕಾಲಿಕ ನೆರವು ದೊರೆತಿದ್ದಲ್ಲಿ ಮೂವರಲ್ಲಿ ಒಬ್ಬಿಬ್ಬರಾದರೂ ಉಳಿದುಕೊಳ್ಳುತ್ತಿದ್ದರು ಎನ್ನಲಾಗಿದೆ. ನಮ್ಮ ನಗರಗಳಲ್ಲಿ ಸ್ವಚ್ಛಗೊಳಿಸದೆ ಕೊಳಚೆಗುಂಡಿಗಳು ಮಾತ್ರವಲ್ಲ ಮನುಷ್ಯ ಸಂಬಂಧಗಳೂ ಕೊಳೆತು ನಾರುತ್ತಿರುವುದನ್ನು ಈ ಘಟನೆ ಸೂಚಿಸುವಂತಿದೆ.

ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ದುರಸ್ತಿ ಕಾರ್ಯಕ್ಕೆ ಗುತ್ತಿಗೆ ನೀಡಿದ ಆರೋಪದ ಮೇಲೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ನ ಪದಾಧಿಕಾರಿಗಳನ್ನು ನಿರ್ಲಕ್ಷ್ಯ ಆರೋಪದಡಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಮೇಲ್ವಿಚಾರಕ ಗುತ್ತಿಗೆ ತೆಗೆದುಕೊಂಡು ಯಾವುದೇ ಸುರಕ್ಷಿತ ಕ್ರಮಗಳನ್ನು ತೆಗೆದುಕೊಳ್ಳದಿರುವುದರಿಂದ ಆತನ ಮೇಲೂ ಕೇಸು ಹಾಕಲಾಗಿದೆ. ಆದರೆ ಇದರಲ್ಲಿ ಸಂಬಂಧಪಟ್ಟ ಬಿ.ಬಿ.ಎಂ.ಪಿ., ಜಲ ಪೂರೈಕೆ ಮತ್ತು ಕೊಳಚೆ ನಿರ್ಮೂಲನ ಮಂಡಳಿ ಮತ್ತು ಕರ್ನಾಟಕ ಪರಿಸರ ಬೋರ್ಡಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಯಾವುದೇ ಜವಾಬ್ದಾರಿ ಇಲ್ಲವೇ? ಅವರ ಮೇಲೆ ಯಾವ ಕ್ರಮಗಳೂ ಇಲ್ಲವೇ? ಅಪಾರ್ಟ್‌ಮೆಂಟ್ ಎಸ್.ಟಿ.ಪಿ.ಗಳಲ್ಲಿ ತಕ್ಕ ನಿರ್ವಹಣೆ ನಡೆದಿದೆಯೇ ಎಂಬುದರ ಬಗ್ಗೆ ಮೇಲ್ವಿಚಾರಣೆಯ ಅವರ ಜವಾಬ್ದಾರಿ ಅಲ್ಲವೇ?

ಕಳೆದ ಹತ್ತು ವರ್ಷಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 31 ಕಾರ್ಮಿಕರು ಎಸ್.ಟಿ.ಪಿ. ಹಾಗೂ ಮ್ಯಾನ್ಹೋಲುಗಳಲ್ಲಿ ಜೀವ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ. ಪ್ರತಿ ಸಾರಿ ದುರಂತ ಸಂಭವಿಸಿದಾಗಲೂ ಕಾರ್ಮಿಕರ ಸುರಕ್ಷತೆಯ ಬಗ್ಗೆ ಆತಂಕ ವ್ಯಕ್ತವಾಗುತ್ತದೆ. ಪರಿಹಾರ ಕೊಟ್ಟು ಕೈತೊಳೆದುಕೊಳ್ಳುವ ಕೆಲಸ ನಡೆಯುತ್ತದೆ, ಯಥಾಸ್ಥಿತಿ ಮುಂದುವರೆಯುತ್ತದೆ. ಘಟನೆಗಳಿಗೆ ಸಂಬಂಧಿಸಿದಂತೆ ಈವರೆಗೆ ಯಾರೊಬ್ಬರಿಗೂ ಕಠಿಣ ಶಿಕ್ಷೆಯಾಗಿಲ್ಲ. 'ಒಳಚರಂಡಿ ಸುರಕ್ಷತಾ ಕೈಪಿಡಿ ಕರಡು–2012'ರ ನಿಯಮಗಳ ಪ್ರಕಾರ, ಪರ್ಯಾಯ ಮಾರ್ಗ ಇಲ್ಲದ ಸಂದರ್ಭದಲ್ಲಷ್ಟೇ ಮ್ಯಾನ್ಹೋಲ್ ಅಥವಾ ಎಸ್.ಟಿ.ಪಿ. ಗೆ ಕಾರ್ಮಿಕರು ಇಳಿಯಬಹುದು. ಅಂತಹ ಸಂದರ್ಭದಲ್ಲಿ ಆಮ್ಲಜನಕ ಪೂರೈಕೆ ಕಡ್ಡಾಯವಾಗಿರುತ್ತದೆ. ಕಾರ್ಮಿಕರು ಗುಂಡಿಗಿಳಿಯುವ ಮುನ್ನ ಕೈಗವಸು, ಬೂಟು ಹಾಗೂ ಮಾಸ್ಕ್ ಧರಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಪ್ರತಿ ಮೂರು ನಿಮಿಷಕ್ಕೊಮ್ಮೆ ಸಹಾಯಕರೊಬ್ಬರು ಅನಿಲ ಪರೀಕ್ಷೆ ನಡೆಸಬೇಕು. ಇವೆಲ್ಲ ನಿಯಮಗಳ ಪಾಲನೆಯಾದರೆ ಅನಾಹುತಗಳನ್ನು ನಿಯಂತ್ರಿಸುವುದು ಸಾಧ್ಯವಿದೆ. ಆದರೆ, ಕಾನೂನಿನ ಅರಿವಿದ್ದೂ ಅವುಗಳನ್ನು ನಿರ್ಲಕ್ಷಿಸುವ ಕಾರಣದಿಂದಾಗಿ ಅಮಾಯಕ ಜನ ಸಾಯುತ್ತಿದ್ದಾರೆ. ಸುರಕ್ಷತಾ ಕ್ರಮಗಳನ್ನು ಖಚಿತಪಡಿಸುವ ಯಾವುದೇ ವ್ಯವಸ್ಥೆಯೂ ನಮ್ಮಲ್ಲಿಲ್ಲ. ದುರಂತ ನಡೆದಾಗ ಬಿಬಿಎಂಪಿ ಹಾಗೂ ಜಲಮಂಡಳಿಗಳು ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವ ನಾಟಕವಾಡುತ್ತವೆ. ಒಂದಿಷ್ಟು ದಂಡ ವಸೂಲು ಮಾಡುವ ಮೂಲಕ ಪ್ರಕರಣಗಳು ತಣ್ಣಗಾಗುತ್ತವೆ.

ಅಪಾರ್ಟ್‌ಮೆಂಟ್ ಮಾಲಿಕರ ಸಂಘದ ಪದಾಧಿಕಾರಿಗಳು ಜವಾಬ್ದಾರರು ಮತ್ತು ಅವರ ಮೇಲೆ ಕೇಸು ಹಾಕುವುದು ಸರಿ. ಆದರೆ ಅವರಿಗೆ ಎಸ್.ಟಿ.ಪಿ. ನಿರ್ವಹಣೆಯ ನಿಯಮಿತ ದುರಸ್ತಿಯ ತಾಂತ್ರಿಕತೆ ಬಗ್ಗೆ ತಿಳಿದಿರುತ್ತದೆಯೇ? ಎಸ್.ಟಿ.ಪಿ.ಗಳು ಹಲವು ತಂತ್ರಜ್ಞಾನಗಳನ್ನು ಬಳಸುತ್ತಿದ್ದು ಪ್ರತಿಯೊಂದು ವಿಧದ ಎಸ್.ಟಿ.ಪಿ.ಗೆ ನಿರ್ವಹಣೆ ಹಾಗೂ ನಿಯಮಿತ ದುರಸ್ತಿಯ ಬಗ್ಗೆ ಬಿಬಿಎಂಪಿ, ಜಲಮಂಡಳಿ ಮತ್ತು ಪರಿಸರ ಬೋರ್ಡುಗಳು ಸುರಕ್ಷತಾ ಕೈಪಿಡಿಗಳನ್ನು ತಯಾರಿಸಿ ಅಪಾರ್ಟ್‌ಮೆಂಟ್ ಮಾಲಿಕರ ಸಂಘದ ಪದಾಧಿಕಾರಿಗಳಲ್ಲಿ ಆ ಬಗ್ಗೆ ಅರಿವು ಮೂಡಿಸಿ ಅದರ ಜಾರಿಗೆ ಗಮನ ವಹಿಸಬೇಡವೇ? ಇಂತಹ ಯಾವುದೇ ಸುರಕ್ಷತಾ ಕೈಪಿಡಿಯೂ ಇಲ್ಲ. ಜಾರಿಗೆ ವ್ಯವಸ್ಥೆಯೂ ಇಲ್ಲ ಎನ್ನಲಾಗಿದೆ. ಎಸ್.ಟಿ.ಪಿ. ನಿರ್ವಹಣೆಯ ನಿಯಮಿತ ದುರಸ್ತಿಯ ಕೆಲಸಗಳಲ್ಲಿ ತರಬೇತಿ ಅನುಭವ ಹೊಂದಿರುವ ಕಾರ್ಮಿಕರನ್ನು ತಯಾರು ಮಾಡುವುದು ಮತ್ತು ಅವರನ್ನೇ ಈ ಕೆಲಸಗಳಿಗೆ ಬಳಸಬೇಕು ಎಂಬುದನ್ನು ಯಾರು ಜಾರಿ ಮಾಡಬೇಕು?

ಎಸ್.ಟಿ.ಪಿ. ಹಾಗೂ ಮ್ಯಾನ್ಹೋಲುಗಳಲ್ಲಿ ಕಾರ್ಮಿಕರನ್ನು ಇಳಿಸುವುದು ಅನಿವಾರ್ಯ ಎನ್ನುವ ಸ್ಥಿತಿಯಲ್ಲಿ ಇದ್ದೇವೆ. ಕೊಳಕು ಬಳಿಯುವ ಕೆಲಸವನ್ನು ಆದಷ್ಟು ಬೇಗ ಮನುಷ್ಯರಿಂದ ಯಂತ್ರಗಳಿಗೆ ವರ್ಗಾಯಿಸುವ ಕೆಲಸ ಪೂರ್ಣ ಪ್ರಮಾಣದಲ್ಲಿ ಜಾರಿಗೊಳ್ಳಬೇಕಾಗಿದೆ. ಅಲ್ಲಿಯವರೆಗೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಕಾರ್ಮಿಕರ ಜೀವವನ್ನು ರಕ್ಷಿಸುವ ಕೆಲಸ ನಡೆಯಬೇಕಾಗಿದೆ. ಜೀವನೋಪಾಯಕ್ಕಾಗಿ ದುಡಿಯುವವರು ಸುರಕ್ಷತಾ ಕ್ರಮಗಳನ್ನು ಒತ್ತಾಯಿಸುವ ಸ್ಥಿತಿಯಲ್ಲಿರುವುದಿಲ್ಲ. ಅಂಥ ಕಾರ್ಮಿಕರಿಗೆ ಸೂಕ್ತ ಸವಲತ್ತುಗಳನ್ನು ಒದಗಿಸುವುದು ಅವರಿಂದ ಕೆಲಸ ತೆಗೆದುಕೊಳ್ಳುವವರ ಜವಾಬ್ದಾರಿ. ಆ ಹೊಣೆಗಾರಿಕೆ ಸರಿಯಾದ ರೀತಿಯಲ್ಲಿ ನಿರ್ವಹಣೆಯಾಗುತ್ತಿದೆಯೇ ಎನ್ನುವುದನ್ನು ಗಮನಿಸುವುದು ಸರ್ಕಾರದ ಕರ್ತವ್ಯ. ಸುರಕ್ಷತೆಯ ನಿರ್ಲಕ್ಷ್ಯದ ಘಟನೆಗಳು ವರದಿಯಾದಾಗ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು.

ಎರಡನೇ ಪ್ರಕರಣ ಸಹ ಅಷ್ಟೇ ದಾರುಣವಾದದ್ದು. ಇಂತಹ ಅಂಗಡಿ, ಹೋಟೆಲು, ಬಾರುಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ ವೇತನ ಕೊಡದೆ ಅವರು ತಮ್ಮದೇ ವಸತಿ ವ್ಯವಸ್ಥೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇರುವುದಿಲ್ಲ. ಮಾತ್ರವಲ್ಲ, ಅವರಿಗೆ ಯಾವುದೇ ಖರ್ಚು ಮಾಡದೆ ಕೆಲಸದ ಸ್ಥಳದಲ್ಲೇ ಒಂದು ಮೂಲೆಯಲ್ಲೇ ಉಳಿಯಲು ಬಿಟ್ಟರೆ ಬೆಳಿಗ್ಗೆ 6ರಿಂದ ಮಧ್ಯರಾತ್ರಿಯವರೆಗೆ ದುಡಿಸುವುದು ಸುಲಭ ಎಂಬ ಮಾಲಿಕರುಗಳ ಲೆಕ್ಕಾಚಾರವೂ ಇದೆ. ಬೆಂಕಿಯನ್ನು ಉತ್ತೇಜಿಸುವ ಸರಕು ತುಂಬಿರುವ ಅಂಗಡಿಯಲ್ಲಿ ವಾತಾನುಕೂಲ ವ್ಯವಸ್ಥೆ ಅಚ್ಚುಕಟ್ಟಾಗಿರಬೇಕು ಹಾಗೂ ಬೆಂಕಿ ಕಾಣಿಸಿಕೊಂಡಲ್ಲಿ ಅದನ್ನು ನಂದಿಸಲು ಅಗ್ನಿಶಾಮಕ ಸಲಕರಣೆಗಳನ್ನು ಸುಸಜ್ಜಿತವಾಗಿ ಇರಿಸಿಕೊಂಡಿರಬೇಕು. ಆದರೆ, ಇಂಥ ಮುನ್ನೆಚ್ಚರಿಕೆ ಕ್ರಮಗಳನ್ನು ಎಷ್ಟು ಅಂಗಡಿಗಳಲ್ಲಿ ಕಾಣಲಿಕ್ಕೆ ಸಾಧ್ಯವಿದೆ?



ಈ ಎರಡೂ ಪ್ರಕರಣಗಳಲ್ಲಿ ಸಾವಿಗೀಡಾದವರು ಹೆಚ್ಚಾಗಿ ಗ್ರಾಮೀಣ ಆರ್ಥಿಕದ ಬಿಕ್ಕಟ್ಟಿನಿಂದ ನಗರಗಳಿಗೆ ವಲಸೆ ಬಂದು ಯಾವುದೇ ಚೌಕಾಶಿ ಸಾಮರ್ಥ್ಯವಿಲ್ಲದ ಅಸಂಘಟಿತ ಕಾರ್ಮಿಕರು. ಅವರಲ್ಲಿ ಕೆಲವರು ಇತ್ತೀಚೆಗೆ ಬಂದವರು. ಇಂತಹ ಅಸಂಘಟಿತ ಕ್ಷೇತ್ರಗಳಲ್ಲಿ ಮಾತ್ರವಲ್ಲ, ಸಂಘಟಿತ ಕ್ಷೇತ್ರಗಳಲ್ಲೂ ದುಡಿಯುವ ಕಾರ್ಮಿಕರ ಕೆಲಸದ ಪರಿಸ್ಥಿತಿಯಲ್ಲಿ ಸಾಕಷ್ಟು ಅನಾಹುತಗಳು ಸಂಭವಿಸುತ್ತಲೇ ಇವೆ. ಜೀವನೋಪಾಯಕ್ಕೆ ಬೇಕಾದ ಕನಿಷ್ಟ ಕೂಲಿ ಜಾರಿ ಮಾಡುವುದಲ್ಲದೆ, ಇಂತಹ ಅನಾಹುತಗಳು ಜರುಗಿದಾಗ ಕೊಡಬೇಕಾದ ಪರಿಹಾರದ ಬಗ್ಗೆಯೂ ಸರಕಾರ ಕ್ರಮ ವಹಿಸಬೇಕು. ಇಲ್ಲವಾದರೆ ಸರಕಾರ ಈ ಕಾರ್ಮಿಕರ ಸಂಘಟಿತ ಕೊಲೆಯಲ್ಲಿ ತೊಡಗಿದೆ ಎನ್ನಬೇಕಾಗುತ್ತದೆ.

ಪ್ರೀತಿ ಪದಗಳ ಪಯಣ
ಸೌಹಾರ್ದತೆಯೆಡೆಗೆ ನಮ್ಮ ನಡಿಗೆ

ಪ್ರೀತಿ ಪದಗಳೊಂದಿಗೆ ನಮ್ಮ ಪಯಣ

ಕಡಲ ಕ್ರಿಯಾಶೀಲತೆಯನ್ನು, ಕಾಡಿನ ಗಂಭೀರತೆಯನ್ನು ಒಟ್ಟಿಗೆ ತನ್ನ ಒಡಲಿನಲ್ಲಿಯೇ ಉಳಿಸಿ, ಬೆಳೆಸಿಕೊಂಡು ಬಂದ ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಬದುಕು ರಾಜ್ಯಕ್ಕೆ ಮಾದರಿಯಾದದ್ದು, ಬುದ್ಧಿವಂತರ ಜಿಲ್ಲೆಯೆಂದೂ, ಶಾಂತಿ ಪ್ರಿಯರ ಜಿಲ್ಲೆಯೆಂದೂ ಹೊಗಳಿಸಿಕೊಳ್ಳುತ್ತಿರುವ

ನಮ್ಮ ಸಂವಿಧಾನ ನಮ್ಮ ಹೆಮ್ಮೆ
ರಾಜ್ಯ ಸಮಾವೇಶ
ದಿನಾಂಕ 13–01–2018

ಉತ್ತರ ಕನ್ನಡ ಪ್ರಕೃತಿ ಸೌಂದರ್ಯದಲ್ಲಿ ವೈವಿಧ್ಯಮಯ ಬುಡಕಟ್ಟು ಸಂಸ್ಕೃತಿಯಲ್ಲಿ, ಸಾಹಿತ್ಯ, ಸಂಸ್ಕೃತಿ, ಕಲೆ, ಶಿಲ್ಪ, ಜಾನಪದ, ರಂಗಭೂಮಿಯಲ್ಲಿ ರಾಜ್ಯದ ಗಮನ ಸೆಳೆದಿದೆ. **'ಮನುಷ್ಯ ಜಾತಿ ತಾನೊಂದೆ ವಲಂ'** ಎಂದ ಪಂಪ **ಮರಿದುಂಬಿಯಾಗಿ** ಇಲ್ಲಿಯೇ ಹುಟ್ಟುವ ಆಶಯ ವ್ಯಕ್ತಪಡಿಸಿದ್ದು ನಮ್ಮ ಹೆಮ್ಮೆಯಲ್ಲೊಂದಾಗಿತ್ತು.

ಹಾಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಆರಂಭದ ಹಂತದಲ್ಲಿ ಇರುವ ದ್ವೇಷದ ಕಿಚ್ಚಿಗೆ ಪ್ರೀತಿಯ ಮುಲಾಮನ್ನು ಹಚ್ಚಿ ದ್ವೇಷದ ಕಿಚ್ಚಿನಿಂದಾಗಿ ಆಗಿರುವ ಗಾಯವನ್ನು ವಾಸಿಮಾಡಬೇಕಾಗಿದೆ. ಇಂತಹ ಪ್ರೀತಿಯನ್ನು ಜನರ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದಲೇ **ದಿನಾಂಕ 13 ಜನೇವರಿ 2018ರಂದು ಉತ್ತರ ಕನ್ನಡ ಸಾಂಸ್ಕೃತಿಕ ಕೇಂದ್ರ ಶಿರಸಿಯಲ್ಲಿ ಬೆಳಿಗ್ಗೆ 10 ಗಂಟೆಗೆ 'ಪ್ರೀತಿ ಪದಗಳ ಪಯಣ' (ಸೌಹಾರ್ದತೆಯೆಡೆಗೆ ನಮ್ಮ ನಡಿಗೆ) ಮತ್ತು 'ನಮ್ಮ ಸಂವಿಧಾನ–ನಮ್ಮ ನಮ್ಮ ಹೆಮ್ಮೆ' ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲು ಆಯೋಜಿಸಿದ್ದೇವೆ.** ನಾಡಿನ ನೂರಕ್ಕೂ ಹೆಚ್ಚು ಲೇಖಕರು, ಕಲಾವಿದರು ಸೇರಿದಂತೆ 500 ಕ್ಕೂ ಹೆಚ್ಚು ಜನ ಪಾಲ್ಗೊಳ್ಳಲಿದ್ದಾರೆ. **ನಂತರ ದಿನಾಂಕ 30 ಜನೆವರಿ 2018 ರಂದು ಇಡೀ ಜಿಲ್ಲೆಯಲ್ಲಿ ಸಂಜೆ 4 ಗಂಟೆಗೆ ಮಾನವ ಸರಪಣಿ ಏರ್ಪಡಿಸಿ ಸೌಹಾರ್ದತೆಯ ಸಂದೇಶ ಸಾರಲಿದ್ದೇವೆ.** ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಜನರು ಪಾಲ್ಗೊಂಡು ಹಸಿರಿಗೆ, ಶಾಂತಿ ನೆಮ್ಮದಿಗಳಿಗೆ ಹೆಸರಾಗಿರುವ ಉತ್ತರ ಕನ್ನಡ ಜಿಲ್ಲೆಯ ಹಿರಿಮೆಯನ್ನು ಉಳಿಸಿಕೊಳ್ಳಲು ಸ್ವಯಂ ಪ್ರೇರಿತರಾಗಿ ಜನರು ಬರಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ.

ದಯವಿಟ್ಟು ಬನ್ನಿ

ನವ ಕರ್ನಾಟಕ ನಿರ್ಮಾಣದ ಜನಪರ ಪರ್ಯಾಯ

ಪುಟ 2 ರಿಂದ



ನಗರೀಕರಣ ಪರಿಸರ, ನಗರ ಸಾರಿಗೆ, ಕಸ ನಿರ್ವಹಣೆ ಮೊದಲಾದ ಅನೇಕ ಸಮಸ್ಯೆಗಳನ್ನು ತಂದೊಡ್ಡಿದೆ.

ರಾಜ್ಯದ ರಾಜಕೀಯ ಇಂದು ಗಣನೀಯವಾಗಿ ಗಣಿ, ರಿಯಲ್ ಎಸ್ಟೇಟ್ ದಂಧೆಕೋರರು, ಶಿಕ್ಷಣ, ಆಸ್ಪತ್ರೆ ಲಾಬಿಗಳ ಹಿಡಿತಕ್ಕೊಳಪಟ್ಟಿದೆ. ಜೊತೆಗೆ ರಾಜ್ಯ ಸರ್ಕಾರಗಳು ಐಟಿ, ಬಿಟಿ ರಂಗದ ಹೊಸ ಉದ್ಯಮಪತಿಗಳನ್ನು ಓಲೈಸುತ್ತಾ ಅವರ ದುರ್ಲಾಭಗಳಿಕೆಗೆ ಅನುಕೂಲವಾದ ನೀತಿ ನಿರೂಪಣೆ ಮಾಡುತ್ತಿವೆ. ಈ ಕಾರಣವೂ ಸೇರಿ ಇಂದು ಬೆಂಗಳೂರು ವಿಶ್ವದ ಬಹು ದೊಡ್ಡ ಕಾರ್ಪೋರೇಟ್‌ಗಳ ಆಡುಂಬೊಲವಾಗಿದೆ. ಅದರಿಂದಾಗಿ ಕಡಿಮೆ ಸಂಬಳದ ಅನಿಶ್ಚಿತ ಉದ್ಯೋಗಗಳನ್ನು ಸೃಷ್ಟಿಸಿ ದುಡಿವ ಜನರನ್ನು ಅವಿರತ ದುಡಿಸಿಕೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರದ ಒಡೆತನದ ಕೈಗಾರಿಕೆಗಳನ್ನು ಮುಚ್ಚಲಾಗಿದೆ. ಕೇಂದ್ರ ಸರ್ಕಾರದ ಒಡೆತನದ ಕೈಗಾರಿಕೆಗಳಾದ ಬಿಇಎಂಎಲ್, ಐಟಿಐ, ಎಚ್.ಎಂ.ಟಿ ಮೊದಲಾದವನ್ನು ಮುಚ್ಚಿದಾಗ ರಾಜ್ಯ ಸರ್ಕಾರಗಳು ಸಣ್ಣ ದನಿಯನ್ನೂ ಎತ್ತಲಿಲ್ಲ. ಇದರಿಂದಾಗಿ ಖಾಯಂ ಉದ್ಯೋಗವೆಂಬುದು ಮರೀಚಿಕೆಯಾಗಿದೆ.

ಜಾಗತೀಕರಣ, ಖಾಸಗೀಕರಣ ನೀತಿಗಳ ನಂತರ ಕೃಷಿ ಬಿಕ್ಕಟ್ಟು ಬಹಳ ತೀವ್ರಗೊಂಡಿತು. ಕೃಷಿಯಲ್ಲಿ ನಷ್ಟ, ಸಾಲದ ಏರಿಕೆಗಳ ಕಾರಣವಾಗಿ ಹತ್ತಾರು ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರು. ಬಹು ದೊಡ್ಡ ಸಂಖ್ಯೆಯ ರೈತರು ಬಡತನಕ್ಕೆ ದೂಡಲ್ಪಟ್ಟಿದ್ದಾರೆ. ಇಂದು ಕೃಷಿ ಕೂಲಿಕಾರರ ಸಂಖ್ಯೆ ರೈತರ ಸಂಖ್ಯೆ ಹೆಚ್ಚಾಗಿದೆ. ಗೇಣಿ/ ಲೀಸ್ ಕೃಷಿಕರು ಹೆಚ್ಚಾಗಿದ್ದಾರೆ. ಭೂಸುಧಾರಣಾ ಕಾನೂನು, ಭೂಸ್ವಾಧೀನ ಕಾನೂನು, ಇತರ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ರೈತರ ಭೂಮಿಯನ್ನು ಅತಿ ಕಡಿಮೆ ಬೆಲೆಗೆ ಬಂಡವಾಳಶಾಹಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳ ಪಾಲಾಗಿದೆ.

ಕೃಷಿ ಕೂಲಿಕಾರರ ನಿರುದ್ಯೋಗ ಅರೆ ಉದ್ಯೋಗ ಹೆಚ್ಚಿದೆ. ನಗರಗಳಿಗೆ ವಲಸೆ ಹೆಚ್ಚಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರ ಶೋಷಣೆ ಬಹಳ ಹೆಚ್ಚಿದೆ. ಒಂದು ಕಡೆ ವಿಪರೀತ ದುಡಿಮೆ, ಬೆಲೆ ಏರಿಕೆ, ಬಾಡಿಗೆ ಏರಿಕೆ, ಸಾರಿಗೆ ವೆಚ್ಚ, ಶಿಕ್ಷಣ, ಆರೋಗ್ಯ ರಂಗದ ಖಾಸಗೀಕರಣದಿಂದ ಸಾಮಾನ್ಯ ಜನರ ಜೀವನ ದುರ್ಭರವಾಗಿದೆ.

ದಲಿತರಲ್ಲಿಯೂ ನಿರುದ್ಯೋಗ ಹೆಚ್ಚುತ್ತಿದೆ. ಮೀಸಲಾತಿಗಾಗಿ ಪೈಪೋಟಿ, ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಮಹಿಳೆಯರಿಗೆ ತೆರೆದಿದ್ದ ಕೆಲ ಅವಕಾಶಗಳೂ ಕುಗ್ಗುತ್ತಿವೆ. ಮಹಿಳೆಯರ ಮೇಲಿನ ಲೈಂಗಿಕ ಮತ್ತಿತರ ದೌರ್ಜನ್ಯಗಳೂ, ವರದಕ್ಷಿಣೆ ಕೊಲೆಗಳೂ ಹೆಚ್ಚುತ್ತಿವೆ.

ಇವುಗಳ ಜೊತೆಗೆ ಜಾಗತೀಕರಣ ನೀತಿಗಳ ನಂತರ ರಾಜ್ಯಗಳ ಅಧಿಕಾರ ಮತ್ತು ಹಕ್ಕುಗಳನ್ನು ಕಾಂಗ್ರೆಸ್, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಗಳು ಪ್ರತಿದಿನವೆಂಬಂತೆ ಕಡಿತಗೊಳಿಸಲಾಗುತ್ತಿದೆ

ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳು ಈ ಬಗ್ಗೆ ದನಿಯೆತ್ತಿಲ್ಲ. ಹಿಂದಿಯನ್ನು ಕೇಂದ್ರ ಸರ್ಕಾರದ ಇಲಾಖೆಗಳು ಮಾತ್ರವಲ್ಲ ಶಿಕ್ಷಣ ಮತ್ತು ಸಾಂಸ್ಕೃತಿಕ ರಂಗದಲ್ಲಿ ವಿವಿಧ ರೂಪದಲ್ಲಿ ಹೇರಲಾಗುತ್ತಿದೆ.

ಕರ್ನಾಟಕದ ಈ ಬಂಡವಾಳಶಾಹಿ– ಭೂಮಾಲಕ ವರ್ಗಗಳ ಸಂಪತ್ತನ್ನು ಬೆಳೆಸುವ ನೀತಿಗಳನ್ನೇ ನವ ಕರ್ನಾಟಕ ಎಂದು ಭ್ರಮೆ ಮೂಡಿಸುವ ಯತ್ನ ಮಾಡುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ಕಾರ್ಮಿಕರ ಪಕ್ಷವಾದ ಸಿಪಿಐ(ಎಂ), ಕರ್ನಾಟಕದ ರೈತರು, ಕೂಲಿಕಾರರು, ಕಾರ್ಮಿಕರು, ಆದಿವಾಸಿಗಳು, ದಲಿತರು, ಹಿಂದುಳಿದ ಜಾತಿಗಳ ಬಡವರು, ಮಹಿಳೆಯರು, ಮಧ್ಯಮ ವರ್ಗದ ಅಸಂಖ್ಯಾತ ಜನ ಸಮುದಾಯದ ಬದುಕಿನ ಬವಣೆಗಳನ್ನು ನೀಗಿಸಲು, ರಾಜ್ಯವನ್ನು ಜನಪರ ಪರ್ಯಾಯ ಕಾರ್ಯಕ್ರಮವನ್ನು ಜನರ ಮುಂದಿಡುತ್ತಿದೆ.

1. ಸಮಗ್ರ ಭೂಸುಧಾರಣೆ, ಗೇಣೀದಾರ ರಕ್ಷಣೆ. ಉಚಿತ ವಸತಿ ನಿವೇಶನ ನೀಡಿಕೆ ಭೂ ಸುಧಾರಣಾ ಕಾನೂನಿಗೆ ತಂದ ರೈತ ವಿರೋಧಿ ತಿದ್ದುಪಡಿಗಳನ್ನು ತೆಗೆದುಹಾಕುವುದು. ನಗರಾಸ್ತಿ ಮಿತಿ ಕಾಯಿದೆ ಮತ್ತೆ ರೂಪಿಸುವುದು.
2. ಕೃಷಿ ಲಾಭದಾಯಕವಾಗುವಂತೆ ಕೃಷಿ ಉತ್ಪನ್ನಗಳ ಬೆಲೆ, ಅಗ್ಗದ ಕೃಷಿ ಲಾಗೋಡುಗಳು, ರೈತರಿಗೆ, ಕೂಲಿಕಾರರಿಗೆ ಕಡಿಮೆ ಬಡ್ಡಿಯ ಸುಲಭ ಸಾಲಗಳು. ಋಣಭಾರ ವಿಮೋಚನಾ ಕಾಯಿದೆ.
3. ಕೂಲಿಕಾರರಿಗೆ ಕೆಲಸ, ಕನಿಷ್ಠ ಕೂಲಿ, ಉದ್ಯೋಗ ಖಾತರಿಯಲ್ಲಿ 250 ದಿನಗಳ ಕೆಲಸ 350 ರೂ ಕೂಲಿ. ದುಪ್ಪಟ್ಟು ಹಣ. ವಲಸೆ ತಡೆಗಟ್ಟುವುದು.
4. ಸಾರ್ವಜನಿಕ ಕೈಗಾರಿಕೆಗಳ ಪುನರ್ ಸ್ಥಾಪನೆ. ಹೊಸ ಕೈಗಾರಿಕೆಗಳ ಸ್ಥಾಪನೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಕೈಗಾರಿಕೆಗಳ ವಿಕೇಂದ್ರೀಕರಣ.
5. ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಿಗೆ ಮೀಸಲಾತಿ, ಸುಲಭ ಸಾಲ. ಮಾರುಕಟ್ಟೆ ಸೌಲಭ್ಯ.
6. ಕನಿಷ್ಠ ಕೂಲಿ 18,000 ರೂ. ಕಾರ್ಮಿಕ ಕಾನೂನುಗಳ ಬಿಗಿ ಜಾರಿ. ಕಾನೂನುಗಳನ್ನು ದುರ್ಬಲಗೊಳಿಸುವುದಕ್ಕೆ ವಿರೋಧ. ಅಸಂಘಟಿತ ಕಾರ್ಮಿಕರಿಗೆ ರಕ್ಷಣೆ. ವಸತಿ, ನಿವೇಶನ ಸೌಲಭ್ಯ. ಬಾಡಿಗೆ ನಿಯಂತ್ರಣ ಕಾನೂನು ಬಲಪಡಿಸುವುದು. ಜನಪರ ಸ್ಲಂ ನಿರ್ಮೂಲನ ನೀತಿ.
7. ಆಹಾರ ಭದ್ರತೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಸ್ತರಣೆ. ಬೇಳೆಕಾಳುಗಳೂ ಸೇರಿದಂತೆ ಆಹಾರದ ಎಲ್ಲ ಪದಾರ್ಥಗಳನ್ನು ಕಡಿಮೆ ಬೆಲೆಗೆ ನೀಡುವುದು. ಔಷಧಿಗಳು, ಬಟ್ಟೆ ಕೂಡಾ.
8. ಸಾರ್ವಜನಿಕ ಶಿಕ್ಷಣವನ್ನು ಆಧುನಿಕಗೊಳಿಸಿ ಆಕರ್ಷಿಸುವುದು. ಕನ್ನಡ ಮಾಧ್ಯಮವನ್ನು ಬಲಪಡಿಸುವುದು. ಹೊಸ ಸರ್ಕಾರಿ ಕಾಲೇಜುಗಳ ಸ್ಥಾಪನೆ. ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಸಾರ್ವಜನಿಕ ಆರೋಗ್ಯ ಸಂಸ್ಥೆಗಳನ್ನು ಆಧುನಿಕಗೊಳಿಸಿ ಬಲಪಡಿಸುವುದು. ಖಾಸಗಿ ಆಸ್ಪತ್ರೆಗಳ ಪರಿಣಾಮಕಾರಿ ನಿಯಂತ್ರಣ.
9. ಅಸ್ಪೃಶ್ಯತೆ ವಿನಾಶ, ಜಾತಿ ವಿನಾಶ, ದಲಿತರ ಮೇಲೆ ದೌರ್ಜನ್ಯಗಳನ್ನು ತಪ್ಪಿಸುವುದಕ್ಕೆ ಸಮಗ್ರ ಕ್ರಮಗಳು. ಸಾಮಾಜಿಕ ಸಮೀಕ್ಷೆಯ ಅನುಸಾರ ನಿರ್ದಿಷ್ಟ ಯೋಜನೆಗಳು. ಮೀಸಲಾತಿ ರಕ್ಷಣೆ, ಬಡ್ತಿ ಮೀಸಲಾತಿ.
10. ಮಹಿಳೆಯರ ಶಿಕ್ಷಣ, ಉದ್ಯೋಗಾವಕಾಶ ಗಳನ್ನು ಹೆಚ್ಚಿಸುವ ನಿರ್ದಿಷ್ಟ ಯೋಜನೆಗಳು. ಮಹಿಳಾ ಅಸಮಾನತೆಯ ವಿರುದ್ಧ ನಿರಂತರ ಸಂವೇದನೆ. ವಿವಿಧ ದೌರ್ಜನ್ಯಗಳನ್ನು ತಡೆಗಟ್ಟುವ ನಿರ್ದಿಷ್ಟ ಯೋಜನೆ.
11. ನಗರಗಳ ಯೋಜಿತ ಬೆಳವಣಿಗೆ. ಪರಿಸರ ಸಂರಕ್ಷಣೆ. ಸಾರ್ವಜನಿಕ ಸಾರಿಗೆಯ ಬೆಳವಣಿಗೆ
12. ಕನ್ನಡ ಭಾಷೆಯ ಬೆಳವಣಿಗೆ, ಜನಪರ ಸಾಹಿತ್ಯ ರಚನೆ, ಪ್ರಸಾರಕ್ಕೆ ಬೆಂಬಲ. ಜನಪದ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆ.

'ಸೌಹಾರ್ದತೆಗಾಗಿ ಕರ್ನಾಟಕ' ಮಾನವ ಸರಪಳಿ ಯಶಸ್ವಿಗೆ....

ಪುಟ 2 ರಿಂದ

ಬೆಳೆಸುವ, ನಮ್ಮ ತಲೆಮಾರು ಮಾತ್ರವಲ್ಲ, ನಮ್ಮ ಮಕ್ಕಳ, ಮರಿಮಕ್ಕಳ ನೆಮ್ಮದಿಯನ್ನು ಖಾತರಿಪಡಿಸುವ ಸಲುವಾಗಿ ನಾಡಿನ ಹಲವು ಚಿಂತಕರು, ಸಾಹಿತಿಗಳು, ಮಠಾಧೀಶರು, ರೈತ–ಕೂಲಿಕಾರರು, ಕಾರ್ಮಿಕ, ದಲಿತ, ಆದಿವಾಸಿ, ಮಹಿಳಾ, ವಿದ್ಯಾರ್ಥಿ–ಯುವಜನ ಚಳುವಳಿಗಳ ಹೋರಾಟಗಾರರು ನಾಡಿನೆಲ್ಲಾ ಸೌಹಾರ್ದ ಪ್ರೇಮಿಗಳು ಒಂದಾಗಿದ್ದಾರೆ, ಒಂದಾಗುತ್ತಿರುವುದು ಸ್ವಾಗತಾರ್ಹ. "ಸೌಹಾರ್ದಕ್ಕಾಗಿ ಕರ್ನಾಟಕ"ವನ್ನು ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಒಂದು ವೇದಿಕೆಯಲ್ಲಿ ಒಂದುಗೂಡಿ ಬೃಹತ್ ಕಾರ್ಯಕ್ರಮ ರೂಪಿಸಲಾಗಿದೆ. ಇಂತಹ ಮಾನವ ಸರಪಳಿಯನ್ನು ಮಹಾತ್ಮಗಾಂಧಿಯವರು ಹುತಾತ್ಮರಾದ 2018 ರ ಜನವರಿ 30 ರಂದು ರಚಿಸುವ ಮಾನವ ಪ್ರೇಮಿಗಳ ನಿರ್ಧಾರವನ್ನು ಸಿಪಿಐ(ಎಂ) ರಾಜ್ಯ ಸಮ್ಮೇಳನವು ಸಂಪೂರ್ಣ ಬೆಂಬಲಿಸುತ್ತದೆ.

ಇಂತಹ ಒಂದು ಬೃಹತ್ ಸಾಹಸ ರಾಜ್ಯದ ಸಾವಿರಾರು ಹಳ್ಳಿಗಳು, ಹಲವಾರು ಪಟ್ಟಣಗಳು, ನಗರ, ಮಹಾನಗರಗಳನ್ನು ಆವರಿಸಿಕೊಂಡು ಕರ್ನಾಟಕದ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲಾಗಲಿದೆ. ದಶಲಕ್ಷಗಟ್ಟಲೇ ಜನರನ್ನು ಎಚ್ಚರಿಸಿ, ಅವರಲ್ಲಿ ಅರಿವನ್ನು ಮೂಡಿಸುವ ಪ್ರಯತ್ನವಾಗಲಿದೆ.

ಈ ಪ್ರಯತ್ನವನ್ನು ಕೈಗೊಳ್ಳುವಲ್ಲಿ, ಕರ್ನಾಟಕದಲ್ಲಿ ಹಲವು ದಶಕಗಳಿಂದ ಸೌಹಾರ್ದದ ಬದುಕಿಗಾಗಿ, ವೈವಿಧ್ಯತೆ, ಮತನಿರಪೇಕ್ಷತೆ, ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುವಲ್ಲಿ, ಸಮಾನತೆಯ ತಳಹದಿಯಲ್ಲಿ ಶ್ರಮಿಸಿರುವ ಎಲ್ಲರೂ ಒಳಗೊಳ್ಳಬೇಕು ಎಂದು ಸಿಪಿಐ(ಎಂ) ಸಮ್ಮೇಳನವು ವಿನಂತಿಸುತ್ತದೆ. ಯಶಸ್ವಿಗೆ ಶ್ರಮಿಸುತ್ತದೆ.

"ಅನೈತಿಕ ಪೊಲೀಸ್‌ಗಿರಿ"ಯ ವಿರುದ್ಧ ಪ್ರಬಲ ಹೋರಾಟಕ್ಕೆ ಕರೆ

ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಧರ್ಮ, ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಸಂಘಪರಿವಾರದ ಸಂಘಟನೆಗಳು ಭಿನ್ನ ಧರ್ಮದ ಜೋಡಿಗಳ ಮೇಲೆ ಹಲ್ಲೆಗಳನ್ನು ನಡೆಸುವುದು, ಸಾಂಸ್ಕೃತಿಕ ಕಾರ್ಯಕ್ರಮ, ಸಂತೋಷ ಕೂಟಗಳ ಮೇಲೆ ವ್ಯವಸ್ಥಿತ ದಾಳಿಗಳನ್ನು ಸಂಯೋಜಿಸುವುದು ಕಳೆದ ಒಂದು ದಶಕದಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಪಬ್ ದಾಳಿ, ಹೋಂ ಸ್ಟೇ ದಾಳಿಗಳು ರಾಷ್ಟ್ರ ಮಟ್ಟದಲ್ಲಿ ಅನೈತಿಕ ಪೊಲೀಸ್ ಗಿರಿಯ ಕರಾಳ ರೂಪವನ್ನು ರಾಷ್ಟ್ರಮಟ್ಟದಲ್ಲಿ ತೆರೆದಿಟ್ಟವು. ಇಂತಹ ದಾಳಿಗಳ ಬಲಿಪಶುಗಳಾದ ಯುವಜನರನ್ನು ಕಾನೂನು ಪಾಲಕರಾದ ಪೊಲೀಸರು ವಶಕ್ಕೆ ಪಡೆದು ಮುಚ್ಚಳಿಕೆ ಪಡೆಯುವುದು, ನೈತಿಕತೆಯ ಪಾಠ ಮಾಡುವುದು, ಪೋಷಕರನ್ನು ಠಾಣೆಗೆ ಕರೆಸಿ ದಾಳಿಕೋರ ಸಂಘಟನೆಗಳ ಕಾರ್ಯಕರ್ತರ ಮುಂದೆ "ಬುದ್ದಿವಾದ" ಹೇಳಿ ಅವಮಾನಿಸುವುದು ಸಾಕಷ್ಟು ಬಾರಿ ನಡೆದಿದೆ. ಕಾನೂನು ಪಾಲಕರ ಈ ನಡೆಗಳು ಕೋಮುವಾದಿ ಸಂಘಟನೆಗಳ ದಾಂಧಲೆಗಳಿಗೆ ಪರೋಕ್ಷ ನೆರವನ್ನು ಒದಗಿಸಿದೆ. ಇಂತಹ ಕೆಲವು ಘಟನೆಗಳಲ್ಲಿ ಅವಮಾನಿತ ಹೆಣ್ಣುಮಕ್ಕಳ ಆತ್ಮಹತ್ಯೆಗೈದ ಘಟನೆಗಳನ್ನೂ ನಾವು ಕಂಡಿದ್ದೇವೆ. ಬಹು ಸಂಖ್ಯಾತ ಕೋಮುಶಕ್ತಿಗಳ ಇಂತಹ "ಅನೈತಿಕ ಪೊಲೀಸ್ ಗಿರಿಗೆ" ಪ್ರತಿಕ್ರಿಯೆಯಾಗಿ ಅಲ್ಪಸಂಖ್ಯಾತ ಸಮುದಾಯದ ಮೂಲಭೂತವಾದಿ, ತೀವ್ರವಾದಿ ಶಕ್ತಿಗಳು "ತಮ್ಮ ಸಮುದಾಯದ" ಹೆಣ್ಣು ಮಕ್ಕಳ ಚಲನ ವಲನ ನಿಯಂತ್ರಿಸುವುದು, ದಾಳಿ, ಹಲ್ಲೆಗಳನ್ನು ನಡೆಸುವ ಕೃತ್ಯಗಳು ಸದ್ದಿಲ್ಲದೆ ನಡೆಯುತ್ತಿದೆ.

ಈಗ ಮತ್ತೊಂದು ಸುತ್ತಿನ "ಅನೈತಿಕ ಪೊಲೀಸ್ ಗಿರಿ" ಯ ಕೃತ್ಯಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಣಿಯಾಗಿ ನಡೆಯುತ್ತಿದೆ. ಈ ಬಾರಿ ತಮ್ಮ



ಮಂಡನೆ: ಮುನೀರ್ ಕಾಟಿಪಳ್ಳ
ಅನುಮೋದನೆ: ತಿಲಕ್ ಗೌಡ

ದಾಳಿಗಳಿಗೆ ಬಹು ಸಂಖ್ಯಾತ ಸಮುದಾಯದ ಜನಸಾಮಾನ್ಯರ ಬೆಂಬಲಗಳಿಸಲು "ಲವ್ ಜಿಹಾದ್" ಎಂಬ ಪದವನ್ನು ಸೃಷ್ಟಿಸಿ, ಭಿನ್ನ ಧರ್ಮದ ಪ್ರೇಮ ಪ್ರಕರಣಗಳನ್ನು ಮುಂದಿಟ್ಟು ಸಮೂಹ ಸನ್ನಿಯನ್ನು ಉಂಟು ಮಾಡಲಾಗುತ್ತಿದೆ.

ಮಾಧ್ಯಮಗಳ ಒಂದು ವಿಭಾಗ ಇಂತ ಅಪಪ್ರಚಾರಗಳಿಗೆ ಪೂರಕ ಸುದ್ದಿಗಳನ್ನು ಪ್ರಕಟಿಸಿ "ಲವ್ ಜಿಹಾದ್" ಎಂಬ ಕೃತಕ ಪದಕ್ಕೆ ವಿಶ್ವಾಸಾರ್ಹತೆ ಒದಗಿಸುತ್ತಿರುವುದು ವಿಷಾದದ ಸಂಗತಿ. ಕಳೆದ ಹದಿನೈದು ದಿನಗಳಲ್ಲಿ ಅಂತರ್ಮತೀಯ ಪ್ರೇಮ ವಿವಾಹದ ಒಂದೆರಡು ಪ್ರಕರಣಗಳನ್ನು ಲವ್ ಜಿಹಾದ್ ಎಂದು ಬಿಂಬಿಸಿ, ಅವುಗಳನ್ನು ವಿವಾದವಾಗಿಸಿ ಜಿಲ್ಲೆಯ ವಾತಾವಾರಣವನ್ನು ಉದ್ವಿಗ್ನಗೊಳಿಸಲು ಯತ್ನಿಸಲಾಗಿದೆ. ಅದೇ ಹಿನ್ನಲೆಯಲ್ಲಿ ಭಿನ್ನ ಧರ್ಮದ ಗಂಡು ಹೆಣ್ಣುಗಳು ಜೊತೆಯಾಗಿದ್ದ ಸಂದರ್ಭ ಹಲವು ದಾಳಿಗಳನ್ನು ನಡೆಸಲಾಗಿದೆ. ಹೆಣ್ಣು ಮಕ್ಕಳ ಮೇಲೆ, ಜೊತೆಯಲ್ಲಿದ್ದ ಭಿನ್ನ ಧರ್ಮದ ಯುವಕರ ಮೇಲೆ ಸಾರ್ವಜನಿಕವಾಗಿ ಪೊಲೀಸರ ಸಮ್ಮುಖದಲ್ಲಿ ಹಲ್ಲೆ ನಡೆಸಲಾಗಿದೆ. ಅಲ್ಲದೇ ನೌಕರಿ ಮಾಡುವ ಸ್ಥಳಗಳಲ್ಲಿ ಶಾಲಾ ಪ್ರವಾಸ ಮಾಡುವಾಗ ಹೋಟೆಲ್‌ಗಳಲ್ಲಿ ಹಲವಾರು ಜನ ಒಟ್ಟಿಗೆ ಕುಳಿತಿದ್ದರೆ ಇತ್ಯಾದಿ ಕಡೆಗಳಲ್ಲಿ ದಾಳಿಗಳು ನಡೆಯುತ್ತವೆ.

ಸುಬ್ರಹ್ಮಣ್ಯದಲ್ಲಿ ನಡೆದ ಪ್ರಕರಣವೊಂದರಲ್ಲಿ ಪೊಲೀಸ್ ಸಿಬ್ಬಂದಿಗಳೇ ಹಿಂದು ಪರಿಚಿತ ಹೆಣ್ಣುಮಗಳ ಜೊತೆ ಓಡಾಡಿದ ಕಾರಣಕ್ಕೆ ಮುಸ್ಲಿಂ ಯುವಕನ ಮೇಲೆ ಗಂಭೀರ ಹಲ್ಲೆ ನಡೆಸಿ "ಅನೈತಿಕ ಗೂಂಡಾಗಿರಿ" ನಡೆಸಿರುವುದು ಪೊಲೀಸ್ ಇಲಾಖೆ ತಳಮಟ್ಟದಲ್ಲೇ ಸಂಘಪರಿವಾರದ ವಾದಗಳಿಂದ ಪ್ರಭಾವಿತಗೊಂಡಿರುವುದನ್ನು ಎತ್ತಿ ತೋರಿಸುತ್ತದೆ.

ಅದಲ್ಲದೆ ಸಂಘಪರಿವಾರ ತನ್ನ ಪರಿವಾರಕ್ಕೆ ಸೇರಿದ ಮಠಾಧೀಶರೊಬ್ಬರನ್ನು ಮುಂದಿಟ್ಟು "ಲವ್ ಜಿಹಾದ್ ತಡೆಗಟ್ಟಲು ಬ್ರಿಗೇಡ್ ರಚಿಸುತ್ತೇವೆ" ಎಂದು ಘೋಷಿಸಿರುವುದು ಮುಂದಿನ ದಿನಗಳಲ್ಲಿ ಇಂತಹ ದಾಳಿಗಳ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆಗಳು ಹೆಚ್ಚಿದೆ. ಚುನಾವಣೆಯ ಹಿನ್ನಲೆಯಲ್ಲಿ ಮತ ಧ್ರುವೀಕರಣದ ಉದ್ದೇಶದ ಇಂತಹ ಸಂಘಟಿತ ದಾಳಿಗಳು ಈಗಾಗಲೆ ಹದಗೆಟ್ಟಿರುವ ಕೋಮು ಸೌಹಾರ್ದತೆಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಸಮಾಜವನ್ನು ಹಿಂದಕ್ಕೊಯ್ಯುವ ಇಂತಹ ಸಂವಿಧಾನ ವಿರೋಧಿ ರಾಜಕಾರಣವನ್ನು, ಕಾನೂನು ಬಾಹಿರ ಕೃತ್ಯಗಳನ್ನು ನಾಗರಿಕ ಸಮಾಜ ಒಟ್ಟಾಗಿ ಸೋಲಿಸಬೇಕಿದೆ.

ಈ ಹಿನ್ನಲೆಯಲ್ಲಿ "ಲವ್ ಜಿಹಾದ್" ಹೆಸರಿನಲ್ಲಿ ನಡೆಯುತ್ತಿರುವ ಮುಸ್ಲಿಂ ವಿರೋಧಿ ಪ್ರಚಾರ, "ಅನೈತಿಕ ಪೊಲೀಸ್ ಗಿರಿಯನ್ನು" ಮೂಡುಬಿದಿರೆಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ನ 22 ನೇ ರಾಜ್ಯ ಸಮ್ಮೇಳನ ತೀವ್ರವಾಗಿ ಖಂಡಿಸುತ್ತದೆ. ದಾಳಿಗೊಳಗಾದವರ ಪರ ನಿಲ್ಲುತ್ತದೆ. ಯುವಜನರು, ವಿದ್ಯಾರ್ಥಿಗಳು ಸೇರಿದಂತೆ ನಾಗರಿಕ ಸಮಾಜ "ಅನೈತಿಕ ಪೊಲೀಸ್ ಗಿರಿಯ" ವಿರುದ್ಧ ಸಂಘಟಿತ ಹೋರಾಟ ನಡೆಸಬೇಕು ಎಂದು ಕರೆಕೊಡುತ್ತದೆ.

ಕರ್ನಾಟಕದ ನೀರಾವರಿ ಸಂಪತ್ತಿನ ಬಳಕೆಗಾಗಿ ಬಲಿಷ್ಠ ಚಳುವಳಿ



ಮಂಡನೆ : ಮುನಿವೆಂಕಟಪ್ಪ
ಅನುಮೋದನೆ : ಡಿ.ಎಂ. ಮಲಿಯಪ್ಪ



ಕರ್ನಾಟಕದಲ್ಲಿ 3,725 ಟಿಎಂಸಿ ನೀರಿನ ಸಂಪತ್ತು ಇದ್ದರೂ ಕೂಡಾ, ಕುಡಿಯುವ ನೀರಿಗಾಗಿ ತತ್ವಾರ ಪಡುವಂತಹ ಪರಿಸ್ಥಿತಿ ಇದೆ. ರಾಜಸ್ತಾನದ ಅನಂತರ, ಅತ್ಯಂತ ಬರಗಾಲದ ಪರಿಸ್ಥಿತಿ ಇದೆ. ರಾಜಸ್ಥಾನದ ರೀತಿ ಮರುಭೂಮಿ ಅಲ್ಲದಿದ್ದರೂ, ರಾಜ್ಯ ಅಂಥದ್ದೇ ಪರಿಸ್ಥಿತಿಯನ್ನು ಅನುಭವಿಸುತ್ತಿದೆ. ಚಿಕ್ಕಬಳ್ಳಾಪುರ, ಕೋಲಾರಗಳಲ್ಲಿ ಅಂತರ್ಜಲವೂ ಬತ್ತಿಹೋಗಿದೆ. ಹನಿ ನೀರಿಗಾಗಿ ಪರದಾಡುವ ಪರಿಸ್ಥಿತಿ ಇದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ನೀರಾವರಿ ಪ್ರಮುಖ ಚರ್ಚೆಯ ವಿಷಯವಾಗಿತ್ತು. ಈ ಚುನಾವಣೆಯಲ್ಲಿ ಕೂಡಾ ನೀರಾವರಿ ಪ್ರಶ್ನೆಯು ಇನ್ನೂ ಉಳಿದಿದೆ.

3,725 ಟಿ.ಎಂ.ಸಿ. ನೀರಿನ ಸಂಪತ್ತಿನಲ್ಲಿ 2,000 ಟಿಎಂಸಿ ಕೇವಲ ರಾಜ್ಯದ ಭೂಪ್ರದೇಶದ 12 % ಪ್ರದೇಶವಾದ ಪಶ್ಚಿಮ ಘಟ್ಟದಲ್ಲಿ ಹರಿದು ಸಮುದ್ರ ಸೇರುತ್ತದೆ. ಪಶ್ಚಿಮ ಘಟ್ಟದ ಆಗುಂಬೆಯಲ್ಲಿ ಸರಾಸರಿ 6000 ಮಿ. ಮಳೆ ಸುರಿಯುತ್ತಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಕೇವಲ 425 ಮಿ.ಮೀ. ಮಳೆ ಬೀಳುತ್ತದೆ. ರಾಜ್ಯದಲ್ಲಿ ಕೃಷ್ಣ ನದಿ ಬಯಲು, ಕಾವೇರಿ ನದಿ ಬಯಲು, ಗೋದಾವರಿ ನದಿ ಬಯಲು, ನಾರ್ತ್ ಪೆನ್ನಾರ್, ಸೌತ್ ಪೆನ್ನಾರ್, ಮಹಾದಾಯಿ ಮತ್ತು ಪಶ್ಚಿಮವಾಹಿನಿ ನದೀ ಕೊಳ್ಳಗಳು–ಇಷ್ಟು ನದೀ ಬಯಲುಗಳಿವೆ. ಕೃಷ್ಣ ನದಿ ಬಯಲಿನಲ್ಲಿ 911 ಟಿ.ಎಂ.ಸಿ. ನೀರಿನ ಹಂಚಿಕೆ ಆಗಿದೆ. ರಾಜ್ಯದ ಇಪ್ಪತ್ತಕ್ಕೂ ಹೆಚ್ಚು ಜಿಲ್ಲೆಗಳು ಇದರಲ್ಲಿ ಒಳಪಟ್ಟಿದೆ. ಚಿಕ್ಕಬಳ್ಳಾಪುರದಿಂದ ಗುಲ್ಬರ್ಗಾ, ಧಾರವಾಡ, ಬೆಳಗಾವಿ ಜಿಲ್ಲೆಗಳು ಇದರಲ್ಲಿ ಸೇರಿವೆ. ಆದರೆ ಕೃಷ್ಣ ನದಿ ಬಯಲಿನ ನೀರಿನಲ್ಲಿ ಇನ್ನೂ ನಾನ್ನೂರು ಟಿಎಂಸಿ ನೀರಿನ ಬಳಸಿಕೊಳ್ಳಲು ಆಗಿಲ್ಲ. ಬಳಸಿಕೊಳ್ಳುವ ಇಚ್ಛಾಶಕ್ತಿಯೂ ಕೂಡಾ ಆಳುವ ಕಾಂಗ್ರೆಸ್ ಸರ್ಕಾರಕ್ಕೂ ಹಿಂದಿನ ಬಿಜೆಪಿ ಸರ್ಕಾರಕ್ಕೂ ಇಲ್ಲ ಎಂಬುದನ್ನು ಅವು ತೋರಿಸಿಕೊಟ್ಟಿವೆ. ನೀರಿನ ಹಂಚಿಕೆ ಜಿಲ್ಲಾವಾರು ಏನೋ ಮಾಡಲಾಗಿದೆ. ಚಿತ್ರದುರ್ಗ, ದಾವಣಗೆರೆಗೆ ನೀರು ಒದಗಿಸಬೇಕಾಗಿದ್ದ ಭದ್ರಾ ಮೇಲ್ದಂಡ ಯೋಜನೆ ಜಾರಿ ನೆನೆಗುದಿಗೆ ಬಿದ್ದಿದೆ. ತುಂಗಭದ್ರಾ ಯೋಜನೆಯಲ್ಲಿ 32 ಟಿಎಂಸಿ ನೀರನ್ನು ಸಂಗ್ರಹಿಸುವ ಪ್ರದೇಶದಷ್ಟು ಹೂಳು ತುಂಬಿದೆ. ಹಾಗಾಗಿ ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ ನೀರಿಗಾಗಿ ಬಡಿದಾಟವೇ ನಡೆಯುತ್ತಿದೆ. ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ನೀರಿನ ಬಳಕೆ ಉದ್ಘಾಟನೆ ಶಂಕುಸ್ಥಾಪನೆಯಲ್ಲೇ ನಿಂತುಬಿಟ್ಟಿದೆ. ಆಲಮಟ್ಟಿ ಯೋಜನೆಯ ಅಣೆಕಟ್ಟನ್ನು 519 ಮೀಟರಿನಿಂದ 524 ಮೀಟರ್‌ವರೆಗೆ ಎತ್ತರಿಸುವ ಕೆಲಸ ಮಾತಿನಲ್ಲೇ ಉಳಿದಿದೆ. ಎತ್ತರಿಸುವ ಕೆಲಸ ಪೂರ್ತಿ ಮಾಡಿದಲ್ಲಿ ರಾಯಚೂರು, ಗುಲ್ಬರ್ಗಾ, ಯಾದಗೀರಿ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಿಗೆ ಅಗತ್ಯ ನೀರಾವರಿ ಲಭ್ಯವಾಗಲಿದೆ.

ಕಾವೇರಿ ವಲಯದಲ್ಲಿ ಕರ್ನಾಟಕಕ್ಕೆ ಹಂಚಿಕೆಯಾದ ನೀರನ್ನು ಬಹುಭಾಗ ಬಳಸಿಕೊಳ್ಳಲಾಗಿದೆ. ಕಾವೇರಿ ವಲಯದಲ್ಲಿ 180 ಟಿಎಂಸಿ ನೀರು ಲಭ್ಯತೆಯಿದ್ದರೂ ತಮಿಳುನಾಡು – ಕರ್ನಾಟಕದ ವಿವಾದದಿಂದ, ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮೇಕೆದಾಟು ಯೋಜನೆ ಪ್ರಸ್ತುತ ಮಾಡಿದ್ದು ಸಕಾರಾತ್ಮಕವಾಗಿದೆ. ಕೇವಲ ಚುನಾವಣೆ ಸಂದರ್ಭದ ಚರ್ಚೆಯಾಗದೆ, ದೃಢಮನಸ್ಸಿನಿಂದ ಸರ್ಕಾರ ಜಾರಿಮಾಡುವುದು ಅಗತ್ಯವಾಗಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಅಂತರ್ಜಲ ಹೆಚ್ಚಿಸಲು ಬೆಂಗಳೂರು ನಗರದ ಚರಂಡಿ ನೀರನ್ನು ಸಂಸ್ಕರಿಸಿ ಪೈಪಿನ ಮೂಲಕ ಕೆರೆಗಳಿಗೆ ಸಾಗಿಸಲಾಗುತ್ತಿದೆ. ಆದಾಗ್ಯೂ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ನೀರಿನ ದಾಹ ಇಂಗಿಸಲು ಸಾಧ್ಯವಾಗುವುದಿಲ್ಲ. ಸೌತ್ ಪೆನ್ನಾರ್, ನಾರ್ತ್ ಪೆನ್ನಾರ್ ನದಿಗಳು ನಂದಿಬೆಟ್ಟದ ಸುತ್ತಲೂ ಹುಟ್ಟಿದ್ದರೂ, ಮಳೆ ಕೊರತೆಯಿಂದ ನೀರಿನ ಹಾಹಾಕಾರ ಎದ್ದಿದೆ.

ಪಶ್ಚಿಮ ಘಟ್ಟದಲ್ಲಿ ಲಭ್ಯವುಳ್ಳ ಅಪಾರವಾದ ಮಳೆಯ ನೀರನ್ನು ರಾಜ್ಯದ ಪೂರ್ವಭಾಗದ, ಉತ್ತರ ಭಾಗದ ವೆಂಟರ್ ಹಾಗೂ ರಾಜ್ಯದ ಬಹುಭಾಗದ ಜಿಲ್ಲೆಗಳಿಗೆ ಹಂಚಲು ಸಾಧ್ಯವಿದೆ. ದ.ಕ., ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಡ್ಯಾಮ್ ನಿರ್ಮಿಸುವ ಮೂಲಕ ಬೇಸಿಗೆ ಕಾಲದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸಾಧ್ಯವಿದೆ. ಇದಕ್ಕಾಗಿ ಖ್ಯಾತ ನೀರಾವರಿ ತಜ್ಞ ಡಾ. ಪರಮಶಿವಯ್ಯನವರ ವರದಿಯನ್ನು ಜಾರಿಮಾಡುವುದನ್ನು ಒಳಗೊಂಡು? ಬಯಲು ಸೀಮೆಗೆ ನೀರು ಹರಿಸುವ ಯೋಜನೆಗಳು ಜಾರಿ ಅತ್ಯಗತ್ಯ. ದಕ್ಷಿಣ ಪ್ರದೇಶದ 9 ಜಿಲ್ಲೆಗಳಿಗೆ ಶಾಶ್ವತ ನೀರಾವರಿಗಾಗಿ ಹೋರಾಟ ಸಮಿತಿಯನ್ನು ಪಕ್ಷದ ನೇತೃತ್ವದಲ್ಲಿ ರಚಿಸಿ ಹೋರಾಟ ನಡೆಸಲು ಸಾಧ್ಯವಾಗಿದೆ. ರಾಜ್ಯ ಸರ್ಕಾರವು ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ನೀರು ಕೊಡುವ ಸಂಬಂಧ ನೀರೇ ಲಭ್ಯವಿಲ್ಲದ ಅವೈಜ್ಞಾನಿಕವಾದ ರೀತಿಯಲ್ಲಿ ಎತ್ತಿನಹೊಳೆ ಯೋಜನೆ ಜಾರಿ ಮಾಡಲು ಮುಂದಾಗಿದೆ. ಸಾವಿರಾರು ಕೋಟಿ ರೂಪಾಯಿ ದುಡ್ಡನ್ನು ಪೋಲು ಮಾಡಲಾಗುತ್ತಿದೆ.

ಗೋದಾವರಿ ವಲಯದಲ್ಲಿ 29 ಟಿಎಂಸಿ ನೀರು ಹಂಚಿಕೆಯಾಗಿದೆ. ಸರ್ಕಾರದ ತಪ್ಪು ಧೋರಣೆಯಿಂದ ಕಾರಂಜಾ ಯೋಜನೆ ಹಾಗೂ ಪರಾಂಜ್ರ ಯೋಜನೆಗಳಲ್ಲಿ ನೀರನ್ನು ಸಮರ್ಪಕವಾಗಿ ಬಳಸಲು ಸಾಧ್ಯವಾಗಿಲ್ಲ. ಬೀದರ್ ಜಿಲ್ಲೆಯ ನೀರಾವರಿಗಾಗಿ ಸಮರ್ಥಯೋಜನೆ ರೂಪಿಸುವ ಅಗತ್ಯವಿದೆ.

ಒಂದು ಟಿಎಂಸಿ ನೀರು ಬಳಸಿಕೊಳ್ಳಲು ಐನೂರು ಕೋಟಿ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಈಗ ರಾಜ್ಯದಲ್ಲಿ ಆರಂಭಿಸಿ ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಕನಿಷ್ಠ 1 ಲಕ್ಷ ಕೋಟಿ ರೂ. ಹಣದ ಅಗತ್ಯವಿದೆ. ಪಶ್ಚಿಮ ಘಟ್ಟದ ಮಳೆನೀರನ್ನು ಬಳಸಿಕೊಳ್ಳಲು ಸಾವಿರಾರು ಕೋಟಿ ಹಣದ ಅಗತ್ಯವಿದೆ. ಕೇಂದ್ರ ಸರ್ಕಾರ, ರಾಜ್ಯದ ನೀರಾವರಿ ಯೋಜನೆಗಳಿಗೆ ಅಗತ್ಯ ಹಣದ ಸಹಾಯ ಮಾಡುವುದು ಜವಾಬ್ದಾರಿಯಾಗಿದೆ. ಕೇಂದ್ರ ಸರ್ಕಾರ ರಾಜ್ಯದ ನೀರಿನ ಯೋಜನೆಗಳಿಗೆ ಹಣ ಒದಗಿಸದೆ, ನದಿಜೋಡಣೆಯಂಥ ಜಾರಿಗೆ ಅಸಾಧ್ಯವಾದ ಮಾತುಗಳನ್ನು ಆಡುತ್ತಿದೆ. ಪ್ರಧಾನಮಂತ್ರಿ ಸಿಜಾಯಿ (ನೀರಾವರಿ) ಯೋಜನೆ ಜಾರಿಗೆ ಹಲವು ಕೇವಲ 20,000 ಕೋಟಿ ರೂ. ಗಳನ್ನು ಇಡೀ ದೇಶಕ್ಕೆ ಕಾದಿರಿಸಿ, ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

ಸಂಗಾತಿಗಳೆ, ರಾಜ್ಯದಲ್ಲೆ ನೀರಾವರಿಗಾಗಿ ಹಲವಾರು ಹೋರಾಟಗಳೂ ಸ್ವಯಂಪ್ರೇರಣೆಯಿಂದ ನಡೆಯುತ್ತಿರುವುದನ್ನು ಸಮ್ಮೇಳನವು ಗಮನಿಸುತ್ತದೆ. ನಡೆಯುತ್ತಿರುವ ಹೋರಾಟಗಳಲ್ಲಿ ಮಧ್ಯಪ್ರವೇಶಿಸುವುದು ನಮ್ಮ ಕರ್ತವ್ಯವಾಗಿದೆ. ಜಿಲ್ಲೆಗಳಲ್ಲಿ ಪಕ್ಷದ ಜಿಲ್ಲಾ ಸಮಿತಿಗಳು ಅಧ್ಯಯನ ಮಾಡಿ ಕಾರ್ಮಿಕ ರಂಗದ ಮೂಲಕ ಚಳುವಳಿ ಕಟ್ಟಬೇಕಾಗಿದೆ. ಬಲಿಷ್ಠ ಚಳುವಳಿಯನ್ನು ಸಂಘಟಿಸುವುದರ ಮೂಲಕ, ರಾಜ್ಯದ ನೀರಾವರಿ ಸಂಪತ್ತನ್ನು ಬಳಸಿಕೊಳ್ಳಲು ಮುಂದಾಗಬೇಕಾಗಿದೆ ಎಂದು ಸಮ್ಮೇಳನವು ನಿರ್ಣಯಿಸುತ್ತದೆ.

ಚುನಾವಣಾ ರಾಜಕೀಯ ಬಿಟ್ಟು ಮಹಾದಾಯಿ ವಿವಾದವನ್ನು ಬಗೆಹರಿಸಿ–ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಸಿಪಿಐ(ಎಂ) ಆಗ್ರಹ

ಕೇಂದ್ರದಲ್ಲಿ ಮತ್ತು ಗೋವಾ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಹಾಗೂ ಕರ್ನಾಟಕದಲ್ಲಿರುವ ಕಾಂಗ್ರೆಸ್ ಪಕ್ಷಗಳು ಚುನಾವಣಾ ರಾಜಕೀಯವನ್ನು ಬಿಟ್ಟು ಮಹಾದಾಯಿ ಕಳಸಾ ಬಂಡೂರಿ ನದಿ ನೀರು ಹಂಚಿಕೆಯ ವಿವಾದವನ್ನು ಇನ್ನೂ ಹೆಚ್ಚು ವಿಳಂಬ ಮಾಡದೆ ಬಗೆಹರಿಸಬೇಕೆಂದು ದ.ಕ. ಜಿಲ್ಲೆಯ ಮೂಡಬಿದ್ರೆಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.



ಮಂಡನೆ: ನಿತ್ಯಾನಂದಸ್ವಾಮಿ
ಅನುಮೋದನೆ: ಮಹೇಶ್ ಪತ್ತಾರ

ಮಹಾದಾಯಿ ನದಿ ನೀರಿನಲ್ಲಿ ಕರ್ನಾಟಕದ ಪಾಲನ್ನು ಕಳಸಾ ಮತ್ತು ಬಂಡೂರಿ ನಾಲೆಗಳ ಮೂಲಕ ಮಲಪ್ರಭಾ ನದಿಗೆ ಹರಿಸಿ ಹುಬ್ಬಳ್ಳಿ-ಧಾರವಾಡ ಮೊದಲಾದ ನಗರಗಳಿಗೆ ಕುಡಿಯುವ ನೀರನ್ನು ಹಾಗೂ ಗದಗ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳ ಬರಪೀಡಿತ ಕೃಷಿ ಭೂಮಿಗೆ ನೀರನ್ನು ಒದಗಿಸಬೇಕೆಂದು ಒತ್ತಾಯಿಸಿ ಆ ಭಾಗದ ರೈತರು ಹಾಗೂ ನಗರ ವಾಸಿಗಳು ಕಳೆದ ಮೂರು ವರ್ಷಗಳಿಂದ ವಿವಿಧ ರೀತಿಯ ಹೋರಾಟಗಳನ್ನು ಮಾಡುತ್ತಿದ್ದಾರೆ. ಮಹಾದಾಯಿ ನದಿ ನೀರಿನಲ್ಲಿ ಕರ್ನಾಟಕದ ಪಾಲು ಸರಿಸುಮಾರು 50 ಟಿಎಂಸಿ ಇರುವಾಗ ಅದರಲ್ಲಿ 7.56 ಟಿಎಂಸಿ ನೀರನ್ನು ಕೊಡಲೊಪ್ಪದಿರುವುದು ಖಂಡನೀಯ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಧ್ಯಸ್ಥಿಕೆ ವಹಿಸಿ ಈ ಜಲವಿವಾದವನ್ನು ತುರ್ತಾಗಿ ಬಗೆಹರಿಸಬೇಕೆಂಬುದು ಪ್ರಸಕ್ತ ಘಟ್ಟದ ನಿರ್ದಿಷ್ಟ ಬೇಡಿಕೆಯಾಗಿದೆ. ಹಿಂದೆ ಇಂತಹ ಜಲವಿವಾದಗಳ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಬಗೆಹರಿಸಿದ ಉದಾಹರಣೆಗಳಿವೆ. ಆದರೆ ನರೇಂದ್ರ ಮೋದಿಯವರು ಕರ್ನಾಟಕದಲ್ಲಿ ಕಾಂಗ್ರೆಸಿಗೆ ಚುನಾವಣೇ ಲಾಭ ಆಗಬಹುದುದೆಂಬ ಆತಂಕದಿಂದ ವಿವಾದವನ್ನು ನ್ಯಾಯಾಧಿಕರಣದ ಹೊರಗೆ ಬಗೆಹರಿಸಲು ಹಿಂದೇಟು ಹಾಕುತ್ತಿರುವುದು ಆಕ್ಷೇಪಾರ್ಹವಾಗಿದೆ. ಗೋವಾ ಮುಖ್ಯಮಂತ್ರಿ ಮನೋಹರ ಪರಿಕ್ಕರ ಮಹಾದಾಯಿ ಸಂಧಾನ ಕುರಿತು ಬಿಜೆಪಿಯ ಮುಖಂಡ ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ ಎಂದು ಬಿಜೆಪಿಯವರು ಹೇಳಿಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಬರೆದ ಪತ್ರಕ್ಕೆ ಉತ್ತರ ನೀಡುವ ಸೌಜನ್ಯ ತೋರದೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪಗೆ ಪತ್ರ ಬರೆಯುವುದರಲ್ಲಿ ಬಿಜೆಪಿಯ ಚುನಾವಣಾ ರಾಜಕಾರಣ ಎದ್ದು ಕಾಣುತ್ತದೆ. ಸಿದ್ದರಾಮಯ್ಯರವರಾದರೂ ಗೋವಾದ ಕಾಂಗ್ರೆಸ್ ಪಕ್ಷ ಕರ್ನಾಟಕಕ್ಕೆ ಅದರ ಹಕ್ಕಿನ ನೀರನ್ನು ನೀಡುವುದನ್ನು ವಿರೋಧಿಸದಂತೆ ಪ್ರಭಾವ ಬೀರಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಅಂಗವಿಕಲರ ಜೀವನ ನಿರ್ವಹಣಾ ಭತ್ಯೆಗೆ ಒತ್ತಾಯ

ಮಂಡನೆ : ರಂಗಪ್ಪ ದಾಸರ್
ಅನುಮೋದನೆ : ಕರಿಯಪ್ಪ ಅಚ್ಚೊಳ್ಳಿ

ಅಂಗವಿಕಲರು ಸಮಾಜ, ಸರ್ಕಾರ, ಕುಟುಂಬದಿಂದ ನಿರ್ಲಕ್ಷ್ಯದಿಂದಕೊಳಗಾದ ಸಮೂಹವಾಗಿದೆ. ಇಂದು ಇವರು ನಿಕೃಷ್ಟ ಜೀವನ ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ ಸಾಮಾಜಿಕವಾಗಿ ಇನ್ನೊಬ್ಬರನ್ನು ಅವಲಂಬಿಸಬೇಕಾದ ಪರಿಸ್ಥಿತಿಯಲ್ಲಿದ್ದಾರೆ.

ರಾಜ್ಯದಲ್ಲಿ ಸರಿ ಸುಮಾರು 10 ಲಕ್ಷಕ್ಕೂ ಹೆಚ್ಚು ಅಂಗವಿಕಲರಿದ್ದಾರೆ. ಇದರಲ್ಲಿ ಪ್ರಮುಖವಾಗಿ ದೈಹಿಕ ಅಂಗವಿಕಲರು, ಅಂಧರು ಕಿವಿಬಾಯಿ ತೊಂದರೆಯುಳ್ಳವರು ಮತ್ತು ಬುದ್ಧಿಮಾಂದ್ಯರು ಹೆಚ್ಚಾಗಿದ್ದಾರೆ. ಅಂಗವಿಕಲರ ನೂತನ ಕಾಯಿದೆಗಾಗಿ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ (ಎನ್‌ಪಿಆರ್‌ಡಿ) ನಿರಂತರ ಹೋರಾಟ ನಡೆಸಿತು. ಇದರ ಪ್ರತಿಫಲವಾಗಿ ಅಂಗವಿಕಲರ ನೂತನ ಕಾಯಿದೆ ಇಂದು ಜಾರಿಗೆ ಬಂದಿದೆ. ಈ ಕಾಯಿದೆಯಲ್ಲಿ 21 ಅಂಗವಿಕಲತೆಯನ್ನು ಗುರುತಿಸಲಾಗಿದೆ. ಶಿಕ್ಷಣಕ್ಕೆ ಶೇಕಡ 5% ರಷ್ಟು ಮೀಸಲಾತಿ ಒದಗಿಸಲಾಗಿದೆ. ಉದ್ಯೋಗ ಮೀಸಲಾತಿಯನ್ನು ಶೇಕಡ 3% ರಿಂದ ಶೇಕಡ 4% ಹೆಚ್ಚಿಸಲಾಗಿದೆ. ಅಂಗವಿಕಲರನ್ನು ಮೂದಲಿಸಿದರೆ ಶಿಕ್ಷಿಸುವ ಅಧಿಕಾರ ಕಾಯಿದೆಯಲ್ಲಿದೆ.

ಎಲ್ಲಾ ಅಂಗವಿಕಲರಿಗೆ ಶಿಕ್ಷಣ – ಎಲ್ಲಾ ಅಂಗವಿಕಲರಿಗೆ ಉದ್ಯೋಗ ಎಲ್ಲಾ ಅಂಗವಿಕಲರಿಗೆ ಘನತೆಯ ಜೀವನ ಎಂಬ ಘೋಷಣೆಯಡಿಯಲ್ಲಿ ಒಕ್ಕೂಟ ಕೆಲಸ ಮಾಡುತ್ತಿದೆ. ಉದ್ಯೋಗವಿಲ್ಲದಿದ್ದರೆ ಅಂಗವಿಕಲರಿಗೆ ಘನತೆಯ ಜೀವನ ಸಾಧ್ಯವಿಲ್ಲ. ಇದರ ಹಿನ್ನೆಲೆಯಲ್ಲಿ ಸರ್ಕಾರ ಅಂಗವಿಕಲರಿಗೆ ಉದ್ಯೋಗ ನೀಡಬೇಕು ಇಲ್ಲವಾದಲ್ಲಿ ಜೀವನಾ ನಿರ್ವಹಣಾ ಭತ್ಯೆ ನೀಡಬೇಕು ಎಂದು ಒತ್ತಾಯಿಸುತ್ತದೆ.

ಮೂಡುಬಿದರೆಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ರಾಜ್ಯ ಸಮ್ಮೇಳನ ಶೇಕಡ 40 ಅಂಗವಿಕಲತೆಯುಳ್ಳವರಿಗೆ 3000 ರೂಗಳು ಶೇಖಡ 75% ಅಂಗವಿಕಲತೆಯುಳ್ಳವರಿಗೆ 5000 ರೂ ಗಳನ್ನು ಜೀವನಾ ನಿರ್ವಹಣಾ ಭತ್ಯೆಯಾಗಿ ನೀಡಬೇಕು ಎಂದು ಒತ್ತಾಯಿಸುತ್ತದೆ.



ಗುತ್ತಿಗೆ ಮತ್ತು ಇತರೆ ಖಾಯಮೇತರ ಕಾರ್ಮಿಕರ ಖಾಯಂಗೆ ಆಗ್ರಹ

ಕಾರ್ಖಾನೆಗಳಲ್ಲಿ, ಸರ್ಕಾರಿ ಇಲಾಖೆಗಳಲ್ಲಿ ಖಾಯಂ ಕಾರ್ಮಿಕರಿಗಿಂತ ಗುತ್ತಿಗೆ ಕಾರ್ಮಿಕರೇ ಬಹುದೊಡ್ಡ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಈ ರೀತಿ ನೇಮಿಸಿಕೊಂಡ ಗುತ್ತಿಗೆ ಕಾರ್ಮಿಕರಿಂದ ಖಾಯಂ ಸ್ವರೂಪದ ಕೆಲಸಗಳಲ್ಲಿ ತೊಡಗಿಸಲಾಗುತ್ತಿದೆ. ಇವರು ಯಾವುದೇ ಕಾನೂನಾತ್ಮಕ ಸೌಲಭ್ಯಗಳಿಲ್ಲದೆ ಕಡಿಮೆ ಸಂಬಂಳಕ್ಕೆ ಅಧಿಕ ಅವಧಿಯ ಕೆಲಸ ಮಾಡುತ್ತಿದ್ದಾರೆ. ಆದರೆ ಇವರನ್ನು ಖಾಯಂ ಮಾಡಲು, ಗುತ್ತಿಗೆ ಪದ್ಧತಿಯನ್ನು ನಿಯಂತ್ರಿಸಲು ಸರ್ಕಾರಗಳು ಕ್ರಮಗಳನ್ನು ವಹಿಸುತ್ತಿಲ್ಲ.

2014–19ರ ರಾಜ್ಯದ ನೂತನ ಕೈಗಾರಿಕಾ ನೀತಿಯಲ್ಲಿ ಉದ್ಯೋಗ ಸೃಷ್ಠಿಗೆ ಉತ್ತೇಜನ ನೀಡುವ ನೆಪದಲ್ಲಿ ಕಾಯಂ ಕಾರ್ಮಿಕರು ಯಂತ್ರಗಳ ಮೇಲೆ ನೆಡೆಸುವ ಉತ್ಪಾದನ ಕೆಲಸಗಳಲ್ಲಿ ಶೇ.30ರಷ್ಟು ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಲಾಗಿದೆ. ಇದು ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯ್ದೆ 1970 ಕ್ಕೆ ವ್ಯತಿರಿಕ್ತವಾಗಿದೆ. ಅಲ್ಲದೆ ಗುತ್ತಿಗೆ ಕಾರ್ಮಿಕರ ಕಾಯ್ದೆಯ ಅಡಿ ಉಲ್ಲಂಘನೆ ಮಾಡಿದ ಗುತ್ತಿಗೆದಾರರ, ಅದರ ಮೂಲ ಮಾಲೀಕರ ವಿರುದ್ಧ ಕಠಿಣ ಕ್ರಮವಹಿಸುತ್ತಿಲ್ಲ. ಬಿಬಿಎಂಪಿಯು



ಮಂಡನೆ : ಎಸ್.ವರಲಕ್ಷ್ಮಿ
ಅನುಮೋದನೆ : ಆಂಜನೇಯರೆಡ್ಡಿ

ತನ್ನ ಗುತ್ತಿಗೆ ಕಾರ್ಮಿಕರಿಗೆ ರೂ.227 ಕೋಟಿಗಳ ಭವಿಷ್ಯ ನಿಧಿ ಬಾಕಿ ಉಳಿಸಿಕೊಂಡಿದೆ. ನೂರಾರು ಕೋಟಿ ರೂಪಾಯಿಗಳ ನೌಕರರ ವಿಮಾ ಕಂತನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ ಸಲ್ಲಿಸದೆ ನೌಕರರ ವಿಮಾ ಸೌಲಭ್ಯಕ್ಕೆ ಬಿಬಿಎಂಪಿ ಕಲ್ಲು ಹಾಕುವ ಪ್ರಯತ್ನ ಮಾಡುತ್ತಿದೆ.

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಲು, ನೊಂದಾಯಿಸಿಕೊಳ್ಳುವ ಸಂಸ್ಥೆಗಳು ಹೆಚ್ಚುತ್ತಿವೆ. ಅಂತೆಯೇ ಪರವಾನಗಿ ಪಡೆದ ಗುತ್ತಿಗೆದಾರರ ಸಂಖ್ಯೆಯು ಹೆಚ್ಚುತ್ತಿದೆ. 19 ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರೆಲ್ಲಾ ಪರವಾನಗಿ ಪಡೆಯುವುದು ಶಾಸನ ಬದ್ಧವಾಗಿ ಕಡ್ಡಾಯವಾಗಿದೆ. ಪರವಾನಗಿ ಪಡೆದ ಗುತ್ತಿಗೆದಾರರಡಿ ರಾಜ್ಯದಲ್ಲಿ ಒಟ್ಟು ಕನಿಷ್ಠ 273840 ಗುತ್ತಿಗೆ ಕಾರ್ಮಿಕರು ಇದ್ದಾರೆ ಎಂದು ಅಂದಾಜಿಸಬಹುದು. ವಾಸ್ತವದಲ್ಲಿ ಪರವಾನಗಿ ಪಡೆಯುವುದನ್ನು ತಪ್ಪಿಸಿಕೊಳ್ಳಲು 19 ಕ್ಕಿಂತ ಕಡಿಮೆ ಲೆಕ್ಕ ತೋರಿಸಿ ನೇಮಿಸಿಕೊಂಡಿರುವ ಕಾರ್ಮಿಕರ ಸಂಖ್ಯೆ, ಪರವಾನಗಿ ಪಡೆದವರ ಅಡಿಯಲ್ಲಿ ನೇಮಿಸಿಕೊಂಡಿರುವ ಕಾರ್ಮಿಕರ ಸಂಖ್ಯೆಗಿಂತ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಇದರ ಸಂಖ್ಯೆ ಸಿಂಹಪಾಲಾಗಿದೆ.

ಕರ್ನಾಟಕ ಸರ್ಕಾರದ ಅಡಿಯಲ್ಲಿ ಗುತ್ತಿಗೆ, ಹೊರಗುತ್ತಿಗೆ, ಅರೆಕಾಲಿಕ, ತಾತ್ಕಾಲಿಕ, ಅತಿಥಿ, ಗೌರವ ಪ್ರೋತ್ಸಾಹಧನ, ಸಂಭಾವನೆ ಮುಂತಾದ ಹೆಸರುಗಳಲ್ಲಿ ಲಕ್ಷಾಂತರ ನೌಕರರು ದುಡಿಯುತ್ತಿದ್ದಾರೆ. ಸರ್ಕಾರದ ಇಲಾಖೆಗಳಾದ ವಿದ್ಯುತ್ ಉತ್ಪಾದನೆ, ವಿತರಣೆ, ರಸ್ತೆ ಸಾರಿಗೆ, ಅರಣ್ಯ, ಕೃಷಿ, ತೋಟಗಾರಿಕೆ, ಪ್ರವಾಸೋದ್ಯಮ, ಗಣೆ, ಡೈರಿಗಳು, ಕೈಗಾರಿಕಾ ಅಭಿವೃದ್ಧಿ ನಿಗಮಗಳು, ಮೂಲ ಸೌಕರ್ಯ ಅಭಿವೃದ್ಧಿ ನಿಗಮ, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಸರ್ವಶಿಕ್ಷಣ ಅಭಿಯಾನ, ವಿವಿಧ ಯೋಜನೆಗಳಲ್ಲಿ ಖಾಯಮೇತರ ನೌಕರರು ಯಾವುದೆ ಕಾನೂನು ಬದ್ಧ ಸೌಲಭ್ಯಗಳಿಲ್ಲದೆ ದುಡಿಯುತ್ತಿದ್ದಾರೆ. ಉದಾರೀಕರಣದ ನೀತಿಗಳ ಪರವಾಗಿ ಖಾಯಂ ಉದ್ಯೋಗಿಗಳನ್ನು ಕಡಿಮೆ ಮಾಡಲು ಹಾರ್ನಳ್ಳಿ ರಾಮಸ್ವಾಮಿಯವರ ವರದಿಯ ಆದಾರದಲ್ಲಿ ಮುಂದುವರೆಯುತ್ತಿದೆ. ಮುನಿಸಿಪಾಲಿಟಿ ಹಾಗು ಸ್ಥಳೀಯ ಸಂಸ್ಥೆಗಳಲ್ಲಿ ದುಡಿಯುವ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವ ಭರವಸೆಗಳನ್ನು ಸರ್ಕಾರ ನೀಡುತ್ತಿದೆ ಆದರು ಅದು ಕೇವಲ ಕಣ್ಣೊರೆಸುವ ತಂತ್ರವಾಗಿದೆ.

ಕೆಲಸದ ಭದ್ರತೆ ಇಲ್ಲದ ಕಾರ್ಮಿಕರ ಸಂಖ್ಯೆಯ ಹೆಚ್ಚಳ ತೀವ್ರ ಸಾಮಾಜಿಕ ಹಾಗು ಕೈಗಾರಿಕಾ ಅಶಾಂತಿಗೆ ಕಾರಣವಾಗುತ್ತಿದೆ.

ಈ ರೀತಿಯಲ್ಲಿ ಅಮಾನವೀಯ ಶೋಷಣೆಗೆ ಒಳಗಾಗಿರುವ ಕಾರ್ಮಿಕರನ್ನು ಸಂಘಟಿತರನ್ನಾಗಿ ಮಾಡಬೇಕು, ಹಾಗು ಗುತ್ತಿಗೆ ಕಾರ್ಮಿಕರ ಸಂಘಟನೆಗಳಿಗೆ ಮಾನ್ಯತೆಯನ್ನು ಪಡೆಯಲು ತಿವ್ರ ಹೋರಾಟಗಳನ್ನು ರೂಪಿಸ ಬೇಕಾಗುತ್ತದೆ.

ಕಾರ್ಮಿಕ ಸಂಘಗಳ ಹೋರಾಟದ ಫಲವಾಗಿ ಕಾರ್ಮಿಕ ಇಲಾಖೆ ಗುತ್ತಿಗೆ ಕಾರ್ಮಿಕರ ಖಾಯಂಗೆ ಕರಡು ತಯಾರಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ರಾಜ್ಯ ಸರ್ಕಾರ ಕೂಡಲೇ ತಮಿಳುನಾಡು ಹಾಗೂ ಅಸ್ಸಾಂನಲ್ಲಿರುವಂತೆ "ಗುತ್ತಿಗೆ ಕಾರ್ಮಿಕರ ಟ್ರೈನಿಗಳ ಮುಂತಾದ ಖಾಯಂಯೇತರರ ಖಾಯಂಗಾಗಿ ಶಾಸನ" ರೂಪಿಸಬೇಕು ಹಾಗು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಈ ಕೂಡಲೇ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಜಾರಿಮಾಡಬೇಕೆಂದು ಸಿಪಿಐ(ಎಂ) 22 ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ಸ್ಕೀಂ ಗಳಿಗೆ ಕೇಂದ್ರ ಸರ್ಕಾರದ ಅನುದಾನ ಹೆಚ್ಚಳಕ್ಕಾಗಿ ಹಾಗೂ ಖಾಸಗಿಯವರಿಗೆ ನೀಡುವುದನ್ನು ವಿರೋಧಿಸಿ ಕೇಂದ್ರ ಸರ್ಕಾರಕ್ಕೆ ಸಿಪಿಐ(ಎಂ) ನ ಆಗ್ರಹ

ಮಂಡನೆ : ಹೆಚ್. ಸುನಂದ
ಅನುಮೋದನೆ : ಹೆಚ್. ಪದ್ಮ, ರಾಯಚೂರು

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮೋದಿ ಸರ್ಕಾರದ ಆಡಳಿತಕ್ಕೆ ಬಂದ ಮೇಲೆ ಕೇಂದ್ರ ಸರ್ಕಾರದ ಅಡಿಯಲ್ಲಿ ಇರುವ ಸ್ಕೀಂಗಳನ್ನು ನಿರ್ಲಕ್ಷಿಸಿದೆ.

ದೇಶದಲ್ಲಿ ಸರ್ಕಾರದ ಸಮೀಕ್ಷೆಯಂತೆ ಇನ್ನೂ ದೇಶದಲ್ಲಿ 48% ಅಪೌಷ್ಠಿಕತೆ ಇದೆ. ವಿಶ್ವದ ಅಪೌಷ್ಠಿಕ ಮಕ್ಕಳ ಸಂಖ್ಯೆಯಲ್ಲಿ 42% ಭಾರತದಲ್ಲಿ ಇದೆ. 79% ಜನ ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. 75 ಲಕ್ಷ ಮಕ್ಕಳು ಹುಟ್ಟುವ ಸಂದರ್ಭದಲ್ಲಿಯೇ ಸಾವಿಗೀಡಾಗುತ್ತಿದ್ದಾರೆ. 5 ವರ್ಷದೊಳಗಿನ ಮಕ್ಕಳಲ್ಲಿ 35.7% ಮಕ್ಕಳು ಕಡಿಮೆ ತೂಕದಲ್ಲಿ ಇದ್ದಾರೆ 1 ಲಕ್ಷ ಗರ್ಬಿಣಿ ಬಾಣಂತಿಯರಲ್ಲಿ 128 ಜನರು ರಕ್ತ ಹೀನತೆಯಿಂದ ಸಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮಕ್ಕಳ ಆಹಾರ – ಆರೋಗ್ಯ – ಶಿಕ್ಷಣದ ಹಕ್ಕನ್ನು ಈಡೇರಿಸುವ ತನ್ನ ಹೊಣೆಗಾರಿಕೆಯಿಂದ ನುಣಿಚಿಕೊಳ್ಳಲು ಹವಣಿಸುತ್ತಿದೆ. ಸ್ಕೀಂಗಳಿಗೆ ನೀಡಬೇಕಾದ ಅನುದಾನ ನಿರಂತರವಾಗಿ ಕಡಿತ ಮಾಡಿಕೊಂಡು ಬರುತ್ತಿದೆ. ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ನಂತರ ಯೋಜನಾ ಆಯೋಗವನ್ನು ರದ್ದುಪಡಿಸಿ ನೀತಿ ಆಯೋಗವನ್ನು ಜಾರಿಗೆ ತರಲಾಗಿದೆ. ನೀತಿ ಆಯೋಗವನ್ನು ಜಾರಿಗೆ ತರಲಾಗಿದೆ. ನೀತಿ ಆಯೋಗ ಜಾರಿಗೆ ಬಂದ ನಂತರ ತನ್ನದೇ ಆದ ಜನ ವಿರೋಧಿ ಹಾಗೂ ಬಂಡವಾಳಶಾಹಿ ನೀತಿಗಳನ್ನು ಜಾರಿ ಮಾಡಲು ಮುಂದಾಗಿದೆ. ಅಂಗನವಾಡಿ, ಬಿಸಿಯೂಟ, ಆಶಾ, ಗ್ರಾಮೀಣಾಕಲ್ಯಾಣ ಯೋಜನೆಗಳನ್ನು ಇಲ್ಲವಾಗಿಸಲು ಮುಂದಾಗಿದೆ. ಐಸಿಡಿಎಸ್ ಗೆ ನೀಡಬೇಕಾದ ಅನುದಾನ 2014–2015ರಲ್ಲಿ 18,108 ಕೋಟಿಗಳು, 2015–2016 ರಲ್ಲಿ 15,433 ಕೋಟಿಗಳು.

2017 ರ ಬಜೆಟಿನಲ್ಲಿ 40% ಅನುದಾನ ಕಡಿತ ಮಾಡಿ ಅಪಾಯಕ್ಕೆ ದೂಡಿದೆ. ಬಿಸಿಯೂಟ ಯೋಜನೆಗೆ 4115 ಕೋಟಿ ರೂ. ಗಳ ಕಡಿತ ಮಾಡಿದೆ. ಸರ್ಕಾರ ಸ್ಕೀಂ ಗಳಿಗೆ ಹೆಚ್ಚು ಒತ್ತನ್ನು ನೀಡಿ ಬಲಪಡಿಸುವ ಬದಲು ಸ್ಕೀಂಗಳನ್ನ ಇಲ್ಲವಾಗಿಸಲು ಮುಂದಾಗಿದೆ. ಯೋಜನೆಯ ಕೆಲ ಅಂಶಗಳಿಗೆ 75% ಅನುದಾನ ಕಡಿತ ಮಾಡುವುದರೊಂದಿಗೆ ಮಹತ್ವ ಪೂರ್ಣ ಯೋಜನೆಗಳನ್ನು ಬಲಹೀನಗೊಳಿಸಲು ಹೊರಟಿದೆ. ಬಾಯಲ್ಲಿ ಭೇಟಿ ಬಚಾವೋ ಬೇಟಿ ಪಡಾವೋ ಎಂದು ಘೋಷಣೆ ಕೊಡುತ್ತಿರುವ ಸರ್ಕಾರ ಬಡತನ ವರ್ಗದ, ಮಹಿಳೆಯರ – ಮಕ್ಕಳ ಆಹಾರ, ಶಿಕ್ಷಣ ಕಸಿಯಲು ಮುಂದಾಗಿದೆ. ಈ ಯೋಜನೆಯ ಬಲವರ್ಧನೆಗಾಗಿ ದುಡಿಯುತ್ತಿರುವ 27 ಲಕ್ಷ ಅಂಗನವಾಡಿ ನೌಕರರು 24 ಲಕ್ಷ ಬಿಸಿಯೂಟ ನೌಕರರು 7 ಲಕ್ಷ ಆಶಾನೌಕರರು ಸೇರಿದಂತೆ 1 ಕೋಟಿ ಮಹಿಳೆಯರನ್ನು ದುಡಿಮೆಗೆ ತಕ್ಕ ಕೂಲಿಯೂ ಇಲ್ಲದೇ ದುಡಿಸುತ್ತಿದೆ. ಒಂದೆಡೆ ಅಂಗನವಾಡಿ ಕೇಂದ್ರಗಳನ್ನು ಖಾಸಗಿ – ಕಾರ್ಪೋರೇಟರ್ ತೆಕ್ಕೆಗೆ ನೀಡಲು ಮುಂದಾಗಿದೆ. ವೇದಾಂತ ರೈನ್ ಇಂಡಿಯಾ ಕಂಪನಿಗಳಿಗೆ ಹಸ್ತಾಂತರಿಸಲು ಮುಂದಾಗಿದೆ. ಬಿಸಿಯೂಟವನ್ನ ಕೇಂದ್ರೀಕೃತ ಅಡಿಗೆ ಕೇಂದ್ರಗಳನ್ನು ತೆರೆದು 16 ವರ್ಷಗಳಿಂದ ಕೇವಲ 600 ರೂ. ಗಳಿಗೆ ದುಡಿದ ಮಹಿಳೆಯರ ಕೆಲಸ ಕಸಿಯಲು ಮುಂದಾಗಿದೆ. ಒಟ್ಟಾರೆ ಸ್ಕೀಂ ಗಳನ್ನೂ ಇಲ್ಲವಾಗಿಸಲು ಮುಂದಾಗಿದೆ. 2011 ರಿಂದ ಕೇಂದ್ರ ಸರ್ಕಾರ ನಯಾಪೈಸೆ ಗೌರವಧನ ಹೆಚ್ಚಳ ಮಾಡಿಲ್ಲ – ಬದಲಿಗೆ ಮೂರ್ನಾಲ್ಕು ಬಾರಿ ಮೇನಾಕಾಗಾಂಧಿ ಸಂಸತ್ತಿನಲ್ಲಿ ಗೌರವಧನ ಹೆಚ್ಚಳ ಮಾಡುವ ಯಾವ ಪ್ರಸ್ತಾಪ ನಮ್ಮ ಮುಂದೆ ಇಲ್ಲ ಎಂದು ತಿಳಿಸಿದ್ದಾರೆ. ಬೇಟಿ ಬಚಾವೋ, ಬೇಟಿ ಪಡಾವೋ ಎಂಬುದು ಕೇವಲ ಕೇಂದ್ರ ಸರ್ಕಾರದ ಘೋಷಣೆಯೇ ಎಂಬಂತಾಗಿದೆ.

ಸ್ಕೀಂ ನಲ್ಲಿ ದುಡಿಯುವ ನೌಕರರಿಗೆ 2012ರಲ್ಲಿ ನಡೆದ 45 ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನ ಪ್ರಕಾರ ಬದುಕುಳಿಯಲು ಕನಿಷ್ಠ ಕೂಲಿ ನೀಡಬೇಕೆಂದು ಶಿಫಾರಸ್ಸಾದರೂ ಇನ್ನೂ ಜಾರಿ ಮಾಡದೇ ಬೆಲೆ ಏರಿಕೆ ದಿನದಲ್ಲಿ ಕನಿಷ್ಠ ಕೂಲಿ ಸಾಮಾಜಿಕ ಭದ್ರತೆ ಇಲ್ಲದೆ ದುಡಿಸುತ್ತಿದೆ. ಸ್ಕೀಂನಲ್ಲಿ ದುಡಿಯುವ ಈ ನೌಕರರಿಗೆ ಕನಿಷ್ಠ 18 ಸಾವಿರ ಕೂಲಿ ಜಾರಿ ಮಾಡಬೇಕೆಂದು ಒತ್ತಾಯಿಸಬೇಕಿದೆ.

ನವೆಂಬರ್ 9 ರಿಂದ 11 ರವರೆಗೆ ನಡೆದ ದೆಹಲಿ ಮಹಾಪಡಾವ್‌ನ ಕರೆಯ ಮೇರೆಗೆ ಜನವರಿ 17–2018 ರಂದು ಅನುದಾನ ಹೆಚ್ಚಳಕ್ಕೆ ಆಗ್ರಹಿಸಿ. ಖಾಸಗೀಕರಣ ವಿರೋಧಿಸಿ ರಾಜ್ಯದ 4 ಜನ ಕೇಂದ್ರ ಸರ್ಕಾರದ ಸಚಿವರ ಮನೆ ಮುಂದೆ ಹೋರಾಟ ನಡೆಸಲು ಈಗಾಗಲೇ ಕರೆ ನೀಡಿದೆ. ಬಿಸಿಯೂಟ ನೌಕರರ ಹೋರಾಟವನ್ನ ರಾಜ್ಯದ ಬಜೆಟ್ ಮುಂಚಿತವಾಗಿ ಮಾಡಲು ಈಗಾಗಲೇ ತಯಾರಿ ನಡೆಸಲಾಗಿದೆ. ಈ ಹೋರಾಟ ಯಶಸ್ವಿಗೆ ಹಾಗು ಅನುದಾನ ಕಡಿತ. ಖಾಸಗೀಕರಣ ವಿರೋಧಿಸಿ, ಕನಿಷ್ಠ ಕೂಲಿ 18 ಸಾವಿರ ಕೈ ಜಾರಿ ಮಾಡಲು 22 ನೇ ಸಿಪಿಐ(ಎಂ)ನ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆ ಜಾರಿಗೆ ಕೇಂದ್ರದಲ್ಲಿ ಕಾಯ್ದೆ ರೂಪಿಸಲು ಒತ್ತಾಯಿಸಿ

ಮಂಡನೆ : ಪೃಥ್ವಿ (ಹಾಸನ)
ಅನುಮೋದನೆ : ಡಾ. ಐ.ಆರ್. ದುರ್ಗಾಪ್ರಸಾದ್ (ಕೊಡಗು)

ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನರಿಗೆ ಕೇಂದ್ರ, ರಾಜ್ಯ ಸರ್ಕಾರಗಳು ವಿಶೇಷ ಉಪಯೋಜನೆ (ಎಸ್‌ಸಿ /ಎಸ್‌ಟಿ) ಯನ್ನು ಜಾರಿಗೊಳಿಸುತ್ತಿದೆ.

ರಾಜ್ಯದ ಕಾಂಗೇಸ್ ಪಕ್ಷ ತನ್ನದು ಅಹಿಂದ ಸರ್ಕಾರವೆಂದು ಹೇಳಿಕೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರು ಎಸ್‌ಸಿ /ಎಸ್‌ಪಿ, ಟಿ.ಎಸ್.ಪಿ. ಯೋಜನೆ ಜಾರಿಗೆ ಕಾಯ್ದೆ ತಂದಿರುವುದಾಗಿ ಹೆಮ್ಮೆಯಿಂದ ಹೇಳಿ ಕೊಳ್ಳುತ್ತಿದ್ದಾರೆ. ಆದರೆ ಯೋಜನೆ ಹಣ ಕೆಳಹಂತದ ದಲಿತ ಜನರಿಗೆ ತಲುಪುತ್ತಿಲ್ಲ. ಇದು ಅನೇಕ ದೋಷಗಳಿಂದ ಕೂಡಿದೆ.

ಈ ಯೋಜನೆ ಜಾರಿ ಮಾಡದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಜರುಗುತ್ತಿಲ್ಲ. ಕಳೆದ ಬಜೆಟ್‌ನಲ್ಲಿ 20,000 ಕೋಟಿ ರೂಗಳನ್ನು ಘೋಷಿಸಿದ್ದಾರೆ. ಆದರೆ ಈ ಯೋಜನೆ ಹಣ ಎಲ್ಲಿ ಹೋಗಿದೆ. ಎಂಬ ಬಗ್ಗೆ ಪರಿಶೀಲನೆ ಇಲ್ಲ. ಕಾಯ್ದೆ ಹಲ್ಲು ಇಲ್ಲದ ಹಾವಾಗಿದೆ. ಅದಕ್ಕಾಗಿ ನಿಯಮ (ರೂಲ್ಸ್)ಗಳನ್ನು ಜಾರಿಗೆ ತರಬೇಕು. ಇದರಿಂದ ಯೋಜನೆ ಪರಿಪೂರ್ಣವಾಗಿ ದಲಿತರಿಗೆ ಬುಡಕಟ್ಟು ಸಮುದಾಯಗಳಿಗೆ ಸಿಗಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಹೆಚ್ಚಿನ ದಲಿತರು ಪ. ಪಂಗಡದವರು ಕೃಷಿ ಕೂಲಿಕಾರರಾಗಿದ್ದಾರೆ. ಇವರಿಗೆ ವಸತಿ, ನಿವೇಶನ ಮತ್ತು ಭೂಮಿ ಇಲ್ಲದವರಾಗಿದ್ದಾರೆ. ಅದರಿಂದ ಎಸ್‌ಸಿ/ಎಸ್‌ಟಿ ಯೋಜನೆಯ ಶೇ. 30 ಹಣವನ್ನು ಭೂಮಿ, ನಿವೇಶನ ಖರೀದಿಸಿ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ನೀಡಬೇಕೆಂದು 22ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ಕೇಂದ್ರದ ಬಿಜೆಪಿ ಸರ್ಕಾರ ಈ ಯೋಜನೆ ನಿಷ್ಕ್ರೀಯ ಗೊಳಿಸುವ ಪ್ರಯತ್ನ ಮಾಡುತ್ತಾ ಯೋಜನೆ ರದ್ದು ಪಡಿಸಿ ನೀತಿ ಆಯೋಗದ ಮೂಲಕ ದಲಿತರಿಗೆ ಅಭಿವೃದ್ಧಿ ಹಣ ನೀಡುವ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ. ಇಂತಹ ಜನವಿರೋಧಿ ನೀತಿ ಕೈಬಿಟ್ಟು ಶೇ. 24% ರಷ್ಟು ಇರುವ ದೇಶದ ದಲಿತರ / ಪರಿಶಿಷ್ಟ ಪಂಗಡದ ಜನ ಸಂಖ್ಯೆ ಆಧಾರಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ದಲಿತರ ಮೇಲಿನ ದೌರ್ಜನ್ಯ ಕೊಲೆ, ಅತ್ಯಾಚಾರಗಳನ್ನು ತಡೆಗಟ್ಟುವಂತೆ ಒತ್ತಾಯಿಸಿ

ಪಾಳೆಗಾರಿ ಭೂಮಾಲಕ ಶಕ್ತಿಗಳು ಗಟ್ಟಿಗೊಳ್ಳುತ್ತಿರುವ ಮತ್ತು ಸರ್ಕಾರಕ್ಕೆ ನವಉದಾರೀಕರಣ ನೀತಿಗಳಿಂದಾಗಿ ರಾಜ್ಯದಲ್ಲಿ ದಲಿತರ ಮೇಲಿನ ದಬ್ಬಾಳಿಕೆ, ಕೊಲೆ, ಅತ್ಯಾಚಾರ, ದೌರ್ಜನ್ಯಗಳು ನಿರಂತರವಾಗಿ ಹೆಚ್ಚುತ್ತಿರುವುದಕ್ಕೆ ಸಿಪಿಐ(ಎಂ) ನ ರಾಜ್ಯ ಸಮ್ಮೇಳನವು ಆತಂಕ ಪಡುತ್ತದೆ.

ಚಾಮರಾಜನಗರ ಜಿಲ್ಲೆಯ ದೇಶವನಹಳ್ಳಿಯಲ್ಲಿ ಕೂಲಿಯ ಕಾರಣಕ್ಕಾಗಿ ಎರಡು ದಲಿತ ಕೂಲಿಯಾಳುಗಳ ತಲೆ ಕಡಿದು ಕೊಲೆ ಮಾಡಲಾಗಿದೆ. ಹಾಸನ ಜಿಲ್ಲೆಯ ಸಿಗರನಹಳ್ಳಿಯಲ್ಲಿ ದೇವಸ್ಥಾನ ಮತ್ತು ಸಮುದಾಯ ಭವನ ಪ್ರವೇಶವನ್ನು ನಿರಾಕರಿಸಿ ಸಾಮಾಜಿಕ ಬಹಿಷ್ಕಾರ ಹಾಕಿ ದೌರ್ಜನ್ಯ ನಡೆಸಲಾಗಿದೆ. ಕೊಪ್ಪಳ ಜಿಲ್ಲೆಯ ಮರಕುಂಬಿಯಲ್ಲಿ ದಲಿತ ಕೇರಿಗೆ ನುಗ್ಗಿ ದಲಿತ ಮಹಿಳೆಯರ ಮೇಲೆ ಹಲ್ಲೆ ಮಾಡಿ ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ದೌರ್ಜನ್ಯ ವೆಸಗಲಾಯಿತು. ರಾಮನಗರ ಜಿಲ್ಲೆಯ ನಾಗಶೆಟ್ಟಿಹಳ್ಳಿಯಲ್ಲಿ ದೇವಸ್ಥಾನ ಪ್ರವೇಶವನ್ನು ನಿರಾಕರಿಸಿ ದಬ್ಬಾಳಿಕೆ ನಡೆಸಲಾಗಿದೆ. ಇತ್ತೀಚೆಗೆ ಬಿಜಾಪುರದ ದಾನಮ್ಮ ಎಂಬ ಅಪ್ರಾಪ್ತ ದಲಿತ ವಿದ್ಯಾರ್ಥಿನಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ. ಅಂತರ್ಜಾತಿಯ ಮದುವೆಯಾದ ಕಾರಣಕ್ಕೆ ಹತ್ಯೆಗಳೂ ನಡೆದಿವೆ. ಕೂಲಿಗೆ ಬರಲಿಲ್ಲ ಎಂಬ ಕಾರಣಕ್ಕೆ ಹಾಸನದಲ್ಲಿ ಗುಂಡಿಟ್ಟು ದಲಿತ ಯುವಕನನ್ನು ಕೊಂದಂತಹ ಹಾಗೂ ರಾಜ್ಯಾದ್ಯಂತ ಇಂತಹ ಹಲವಾರು ಕಾರಣಗಳಿಗಾಗಿ ಸಾಮಾಜಿಕ ಬಹಿಷ್ಕಾರಗಳನ್ನು ಹಾಕಲಾಗುತ್ತಿದೆ. ನಗರ ಪ್ರದೇಶದಲ್ಲಿ ದಲಿತ ಕಾರ್ಮಿಕರಿಗೆ, ನೌಕರರುಗಳಿಗೆ ಬಾಡಿಗೆ ಮನೆಗಳನ್ನು ಕೊಡದೆ ಇರುವುದು. ಕ್ಷೌರ ನಿರಾಕರಣೆ, ಕುಡಿಯುವ ನೀರು, ಕೆರೆ ಬಾವಿಗಳಲ್ಲಿ ದಲಿತರಿಗೆ ಅವಕಾಶ ನೀಡದಿರುವುದು. ಸಾರ್ವಜನಿಕ ಪ್ರದೇಶಗಳಿಗೆ ಅವಕಾಶ ನೀಡದಿರುವ ಅಸ್ಪೃಶ್ಯತಾ ಆಚರಣೆಗಳು ಹೆಚ್ಚುತ್ತಿವೆ. ಗ್ರಾಮಾಂತರದಲ್ಲಿಯೂ ಅಸ್ಪೃಶ್ಯತೆಯ ಹಲವಾರು ಆಚರಣೆಗಳು ನಡೆದೇ ಇವೆ. ಇಂತಹ ಎಲ್ಲಾ ದೌರ್ಜನ್ಯಗಳಿಗೆ ಬಂಡವಾಳಶಾಹಿ – ಪಾಳೆಗಾರಿ ರಾಜಕೀಯ ಪಕ್ಷಗಳು ಕುಮಕ್ಕು ನೀಡುತ್ತಿವೆ.

ಇಂತಹ ದೌರ್ಜನ್ಯ ದಬ್ಬಾಳಿಕೆಗಳನ್ನು ತಡೆಗಟ್ಟಲು ಸರ್ಕಾರಗಳು ವಿಫಲವಾಗಿವೆ. ದೌರ್ಜನ್ಯ ಎಸಗುವ ಸ್ಥಾಪಿತ ಹಿತಾಸಕ್ತಿಗಳು, ಪಾಳೇಗಾರಿ ಶಕ್ತಿಗಳಿಗೆ ಶಿಕ್ಷೆ ಆಗುತ್ತಿಲ್ಲ. ದಲಿತರಿಗಾಗಿ ಇರುವ ಎಸ್‌ಸಿ/ಎಸ್‌ಟಿ ಅಭಿವೃದ್ಧಿಗಾಗಿ ಇರುವ ಆರ್ಥಿಕ ಯೋಜನೆಗಳನ್ನು ಜಾರಿ ಮಾಡುವಲ್ಲಿ ಮುತುವರ್ಜಿವಹಿಸದೆ ಇರುವುದು ಭ್ರಷ್ಟಾಚಾರಕ್ಕೆ ಅವಕಾಶ ಮಾಡುತ್ತಿರುವುದೂ ಸಹ ಆಯೋಜನೆಗಳು ಕಟ್ಟ ಕಡೆಯ ದಲಿತರನ್ನು ತಲುಪುವಲ್ಲಿ ವಿಫಲವಾಗುತ್ತಿವೆ.

ಸೌಲಭ್ಯಗಳು, ಪರಿಹಾರ ತಕ್ಷಣ ಸಿಗುತ್ತಿಲ್ಲ. ಅದಕ್ಕಾಗಿ ಪ್ರತಿ ಜಿಲ್ಲೆಯು 'ವಿಶೇಷ ನ್ಯಾಯಲಯ' ಸ್ಥಾಪಿಸಿ ತ್ವರಿತವಾಗಿ ನ್ಯಾಯ ಸಿಗುವಂತಾಗಬೇಕು. ಆದ್ದರಿಂದ ಸರ್ಕಾರ ಕೂಡಲೇ ಹೆಚ್ಚುತ್ತಿರುವ ದಲಿತರ ಮೇಲಿನ ದೌರ್ಜನ್ಯ ದಬ್ಬಾಳಿಕೆ. ಅಸ್ಪೃಶ್ಯತಾ ಆಚರಣೆಗಳನ್ನು ತಡೆಗಟ್ಟಲು ಅಸ್ಪೃಶ್ಯತಾ ಆಚರಣೆ, ಜಾತಿ ತಾರತಮ್ಯದ ವಿರುದ್ಧ ರಾಜ್ಯದ್ಯಾಂತ ಜನಾಂದೋಲನ ರೂಪಿಸಲು ಕ್ರಮ ವಹಿಸಬೇಕು. ಮತ್ತು ದಲಿತರ ಆರ್ಥಿಕ ಸಬಲೀಕರಣಕ್ಕಿರುವ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕೆಂದು. ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನವು ಒತ್ತಾಯಿಸಿ ನಿರ್ಣಯ ಕೈಗೊಳ್ಳುತ್ತಿದೆ.

ಮಂಡನೆ : ಗೋಪಾಲಕೃಷ್ಣ ಅರಳಹಳ್ಳಿ
ಅನುಮೋದನೆ : ಪಾಂಡುರಂಗ (ಗುಲ್ಬರ್ಗಾ)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಉದ್ಯೋಗ ಬಡ್ತಿಯಲ್ಲಿ ಮೀಸಲಾತಿ ಸೌಲಭ್ಯ ಮತ್ತು ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯತೆ ಕುರಿತಂತೆ: ಜಾರಿಗಾಗಿ ಒತ್ತಾಯಿಸಿ

ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ಆಳವಾಗಿ ಬೇರೂರಿರುವ ನಮ್ಮ ಭಾರತ ದೇಶದ ಪಾಳೆಯಗಾರಿ ಪದ್ಧತಿಯ ಭಾಗವಾದ, ಜಾತಿ ಪದ್ಧತಿ ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯತಾ ಆಚರಣೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳು ತುತ್ತಾಗಿದ್ದಾರೆ. ಇದರಿಂದಾಗಿ ಇವರುಗಳು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಸಂವಿಧಾನದಲ್ಲಿ ಮೀಸಲಾತಿಯನ್ನು ಅಳವಡಿಸಲಾಗಿದೆ. ಇನ್ನು ಸಾಮಾಜಿಕ ನ್ಯಾಯವನ್ನು ಒದಗಿಸುವ ಒಂದು ಪ್ರಮುಖ ಭಾಗವಾಗಿದೆ. ಆದಾಗ್ಯೂ ಬಡತನ ನಿರ್ಮೂಲನೆ ಮಾಡುವ ಸರ್ಕಾರದ ಕಡ್ಡಾಯ ಕಾರ್ಯಕ್ರಮವೂ ಅಲ್ಲ. ಬದಲಿಗೆ ಮೀಸಲಾತಿ ಮಾನವ ಹಕ್ಕುಗಳ ಸಮಾನತೆಯ ಸಾಧನೆಯ ಒಂದು ರೂಪಾಂತರವಾಗಿದೆ. ಇದರಲ್ಲಿ ಆಡಳಿತ ನಡೆಸುವ ಸರ್ಕಾರಗಳ ಪಾತ್ರವು ಪ್ರಮುಖವಾಗಿರುತ್ತದೆ. ಶತಮಾನಗಳಿಂದ ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಸ್ಪೃಶ್ಯತಾ ಆಚರಣೆಗಳನ್ನು ಮತ್ತು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಉದ್ದೇಶವು ಈ ಮೀಸಲಾತಿಯ ಹಿನ್ನೆಲೆಯಾಗಿದೆ.

ಅಸ್ಪೃಶ್ಯತ್ಯ ಆಚರಣೆಗಳನ್ನು ನಿರ್ಮೂಲನೆ ಮಾಡಲು ನಮ್ಮ ಸಂವಿಧಾನದಲ್ಲಿ ಸೆಕ್ಷನ್ 15, 16, 17, 21, 21ಎ, 23, 24, 43, 45, 46, 243, 330, 335, 338ಎ, 341 ಮತ್ತು 342 ರಲ್ಲಿ ಹಲವಾರು ಕ್ರಮಗಳನ್ನು ಒದಗಿಸಲಾಗಿದೆ. ಸಂವಿಧಾನದಲ್ಲಿನ 16 ನೇ ಪರಿಚ್ಛೇದದಲ್ಲಿ ಸಂಸತ್ತು ಎಸ್‌ಸಿ/ಎಸ್‌ಟಿ ಗಳಿಗೆ ಸರ್ಕಾರಿ ಸೇವೆಗಳಲ್ಲಿ ಮೀಸಲಾತಿ ನೀಡಲು ಅವಕಾಶ ಕಲ್ಪಿಸಿಕೊಟ್ಟಿದೆ.

1990 ರಲ್ಲಿ ಮಂಡಲ್ ಆಯೋಗದ ವರದಿಯನ್ನು ಆಧರಿಸಿ ಕೇಂದ್ರ ಸರ್ಕಾರವು ಇತರೆ ಹಿಂದುಳಿದ ವರ್ಗಗಳಿಗೆ 27 ಪ್ರತಿಶತ ಮೀಸಲಾತಿ ನೀಡಿತ್ತು. ಭಾರತದ ಸರ್ವೋಚ್ಚ ನ್ಯಾಯಾಲಯವು ಇಂದಿರಾ ಸಹಾನಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತ್ತಾಸಕ್ತಿ ಅರ್ಜಿಯಲ್ಲಿ ಸವಾಲು ಹಾಕಿತ್ತು. ನ್ಯಾಯಾಲಯದ 9 ಸದಸ್ಯ ಪೀಠವು ವಿಚಾರಣೆಯನ್ನು ನಡೆಸಿತು ಮತ್ತು 16.11.1992 ರಂದು ತೀರ್ಪು ನೀಡಿತ್ತು. ಉದಾಹರಣೆಗೆ, "ಸೇವೆಗೆ ಸೇರ್ಪಡೆಯಾಗುವ ಸಂದರ್ಭದಲ್ಲಿ ಮೀಸಲಾತಿ ಉದ್ಯೋಗದ ಪ್ರವೇಶಕ್ಕಾಗಿ ಮಾತ್ರ ಬಡ್ತಿ ಮೀಸಲಾತಿಗೆ ಅನ್ವಯಿಸುವುದಿಲ್ಲ ಎಂಬ ತೀರ್ಪು ನೀಡಿತ್ತು. ಇದರ ಪರಿನಾಮದಿಂದ, ದಲಿತರು, ಆದಿವಾಸಿಗಳು ಮತ್ತು ಒಬಿಸಿ ಸಮುದಾಯದವರು ತಮ್ಮ ಮೂಲಭೂತ ಸಂವಿಧಾನದ ಹಕ್ಕುಗಳಿಂದ ವಂಚಿತರಾದರು. ಅಂದಿನ ಸಂಸತ್ ಇದನ್ನೂ ಮನಗಂಡು, ಬಡ್ತಿ ಮೀಸಲಾತಿಯನ್ನು ಸಂರಕ್ಷಿಸಲು ಸಂವಿಧಾನದ 77ನೇ ತಿದ್ದುಪಡಿಯನ್ನು ತಂದಿತ್ತು. ಅದರ ಪ್ರಕಾರ ಸೆಕ್ಷನ್ 16 (4ಎ) ಯ ಬಡ್ತಿಯಲ್ಲಿಯು ಮೀಸಲಾತಿ ಒದಗಿಸಿತು.

ಕರ್ನಾಟಕದಲ್ಲಿ 2002 ರಲ್ಲಿ, ಉತ್ತರ ಪ್ರದೇಶ ಮತ್ತು ರಾಜಸ್ಥಾನ ಸರ್ಕಾರಗಳು ಬಡ್ತಿಯಲ್ಲಿ ಮೀಸಲಾತಿ ಕಾಯಿದೆ ಜಾರಿಗೆ ತಂದರು. ಆದರೆ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲಿ ಹೈಕೋರ್ಟುಗಳು ಎಂ. ನಾಗರಾಜು ಪ್ರಕರಣದಲ್ಲಿ ಈ ಕಾಯಿದೆಗಳಿಗೆ ತಡೆ ಆಜ್ಞೆ ತಂದು, ಬಡ್ತಿಯಲ್ಲಿ ಮೀಸಲಾತಿಯನ್ನು ರದ್ದುಗೊಳಿಸಲಾಯಿತು.

ಆದರೆ, 2011 ರಲ್ಲಿ ಕರ್ನಾಟಕ ಹೈಕೋರ್ಟು, ಕರ್ನಾಟಕ ಸರ್ಕಾರದ ಆದೇಶವನ್ನು ಎತ್ತಿ ಹಿಡಿಯಿತು. ಇದೀಗ ಫೆಬ್ರವರಿ 9, 2017 ರಂದು ಬಿ.ಕೆ. ಪವಿತ್ರಾ ಪ್ರಕರಣದಲ್ಲಿ ಸುಪ್ರೀಮ್ ಕೋರ್ಟು ಕರ್ನಾಟಕದ ಸರ್ಕಾರದ ಕಾಯ್ದೆಯನ್ನು ರದ್ದುಗೊಳಿಸುವ ತೀರ್ಪು ನೀಡಿದೆ. ಇದರಿಂದಾಗಿ, ಸುಮಾರು 10,000 ಕ್ಕೂ ಹೆಚ್ಚು ಬಡ್ತಿಗಳನ್ನು ಪಡೆದಿರುವವರಿಗೆ ಅನ್ಯಾಯವಾಗುತ್ತಿದೆ.

ಡಿಹೆಚ್‌ಎಸ್ ಮತ್ತು ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿಯ ಹೋರಾಟಗಳಿಂದಾಗಿ, ಕರ್ನಾಟಕ ಸರ್ಕಾರವು ಸುಗ್ರಿವಾಜ್ಞೆ ಹೊರಡಿಸಿತ್ತು. ರಾಜ್ಯಪಾಲರು ಸಹಿ ಹಾಕಲು ನಿರಾಕರಿಸಿದರು. ಇದೀಗ ಶಾಸನ ಸಭೆಯಲ್ಲಿ ಅನುಮೋದಿಸಿ, ರಾಜ್ಯಪಾಲರ ಸಹಿಗಾಗಿ ಕಳುಹಿಸಲಾಯಿತು. ಆದರೆ ರಾಜ್ಯಪಾಲರು ಸಹಿ ಮಾಡದೇ ರಾಷ್ಟ್ರಪತಿಗಳ ಸಹಿಗಾಗಿ ಕಳುಹಿಸಿದ್ದಾರೆ. ಹೀಗಾಗಿ ವಿಳಂಬ ಆಗುತ್ತಿದೆ. ಈ ನಿಟ್ಟಿನಲ್ಲಿ ನಮ್ಮ 22ನೇ ರಾಜ್ಯ ಸಮ್ಮೇಳನವು ಎಸ್‌ಸಿ/ಎಸ್‌ಟಿ ನೌಕರರ ಬಡ್ತಿ ನೌಕರರ ಬಡ್ತಿ ಮೀಸಲಾತಿಯನ್ನು ಅನುಷ್ಠಾನಗೊಳಿಸಲು, ಸಂವಿಧಾನದ 117 ತಿದ್ದುಪಡಿ 2012 ಮಸೂದೆಯನ್ನು ಸಂಸತ್ತಿನ ಲೋಕಸಭೆಯಲ್ಲಿ ಅನುಮೋದಿಸಿ, ಬಡ್ತಿ ಮೀಸಲಾತಿಯನ್ನು ಎತ್ತಿಹಿಡಿಯಬೇಕೆಂದು ಒತ್ತಾಯಿಸುತ್ತದೆ.

ಅದೇ ರೀತಿ, ಖಾಸಗೀಕರಣದ ಪರಿಣಾಮವಾಗಿ, ಸರ್ಕಾರಿ ಉದ್ಯೋಗಗಳು ನಶಿಸಿ ಹೋಗುತ್ತಿವೆ. ಖಾಸಗೀ ರಂಗದಲ್ಲಿ ಮಾತ್ರ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ, ಖಾಸಗಿ ಕ್ಷೇತ್ರಗಳಲ್ಲಿಯೂ ಮೀಸಲಾತಿ ಕಡ್ಡಾಯಗೊಳಿಸುವಂತೆ 22ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ.

ಮಂಡನೆ : ಎನ್. ನಾಗರಾಜ್, ಬೆಂಗಳೂರು
ಅನುಮೋದನೆ : ತಂಗರಾಜು, ಕೋಲಾರ

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ ನಿರ್ಣಯ

2018 ಜನವರಿ 2 ರಿಂದ 5 ರ ವರೆಗೆ ಮೂಡಬಿದರೆಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ನ 22ನೇ ರಾಜ್ಯ ಸಮ್ಮೇಳನವು ಕೇಂದ್ರದ ನರೇಂದ್ರ ಮೋದಿ ಸರ್ಕಾರ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡಲು ನಿರ್ಧರಿಸಿರುವುದನ್ನು ತೀವ್ರವಾಗಿ ಖಂಡಿಸುತ್ತದೆ.

BEML, HAL, BHEL, BEL ಸೇರಿದಂತೆ 10 ದೊಡ್ಡ ಸಾರ್ವಜನಿಕ ಉದ್ದಿಮೆಗಳಲ್ಲಿನ ಷೇರುಗಳನ್ನು ಮಾರಾಟ ಮಾಡುವ ಹುನ್ನಾರ ನಡೆಸಿದ್ದು ಇದು ದೇಶದ ಆರ್ಥಿಕ ಸ್ವಾಲಂಬನೆಗೆ ತೀವ್ರ ಧಕ್ಕೆಯನ್ನುಂಟುಮಾಡುವ ಅಪಾಯವಿದೆ.

2014 ರಲ್ಲಿ ಮೋದಿ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಹಂತ ಹಂತವಾಗಿ ಖಾಸಗೀಕರಣಗೊಳಿಸಲು 74 ಕೇಂದ್ರ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಲಾಗಿದೆ. ಇವುಗಳ ಪೈಕಿ 26 ಕಂಪನಿಗಳನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಮತ್ತು 10 ಕಂಪನಿಗಳಲ್ಲಿನ ಷೇರುಗಳನ್ನು "Strateric sale" ಗೆ ಒಳಪಡಿಸಿ ಖಾಸಗೀಕರಣಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಸತತವಾಗಿ ಲಾಭದಾಯಕವಾಗಿರುವ ರಾಜ್ಯದ 3 ಪ್ರದೇಶಗಳಲ್ಲಿ ಮತ್ತು ಕೇರಳದ ಪಾಲಕಾಡ್ ನಲ್ಲಿ ತನ್ನ ಘಟಕಗಳನ್ನು ಹೊಂದಿದ್ದು ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದಲ್ಲದೆ ದೇಶದ ಆರ್ಥಿಕತೆಗೆ ಅಪಾರ ಕೊಡುಗೆ ನೀಡಿದೆ. ಸರ್ಕಾರದ 26% ಪಾಲಿನ ಷೇರುಗಳನ್ನು ಆಯಕಟ್ಟಿನ ಮಾರಾಟದ (Strateric sale) ಮೂಲಕ ಉದ್ದಿಮೆಯನ್ನು ಖಾಸಗಿಯವರ ಸುಪರ್ದಿಗೆ ವಹಿಸಲು ಮುಂದಾಗಿದೆ. ಅದೇ ರೀತಿ HAL ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಮುಂದಾಗಿದೆ. ರಾಜ್ಯ ಸರ್ಕಾರದ ಒಡೆತನದ ಗಿಖಖಐ ಅನ್ನು ನಾಶ ಮಾಡಲಾಗುತ್ತಿದೆ.

ಹಿಂದುಸ್ತಾನ್ ಆಂಟಿಬಯಾಟಿಕ್ಸ್ ಲಿಮಿಟೆಡ್‌ನ ಶೇ.74 ರಷ್ಟು ಷೇರುಗಳನ್ನು Strateric sale ಮಾಡಲು ನಿರ್ಧಾರ ಮಾಡಲಾಯಿತು.

Strateric sale ಅಂದರೆ ಬಹುಮತದ (Majority) ಷೇರುಗಳನ್ನು ಮಾರಾಟ ಮಾಡಿ ಸಾರ್ವಜನಿಕ ಉದ್ದಿಮೆಗಳ ಆಡಳಿತವನ್ನು (Management) ಖಾಸಗಿಯವರಿಗೆ ನೀಡುವ ಕುತಂತ್ರವಾಗಿದೆ.

ಕೇಂದ್ರ ಸರ್ಕಾರ ಈ ರೀತಿ ದೇಶಕ್ಕೆ ಮತ್ತು ರಾಜ್ಯಕ್ಕೆ ಧಕ್ಕೆಯನ್ನುಂಟು ಮಾಡುವ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರೂ ರಾಜ್ಯದ ಕಾಂಗ್ರೆಸ್ ಸರ್ಕಾರ ಪರಿಣಾಮಕಾರಿಯಾದ ಪ್ರತಿರೋಧವನ್ನು ವ್ಯಕ್ತಪಡಿಸಲು ತೀವ್ರವಾಗಿ ವಿಫಲವಾಗಿದೆ.

ಸಾರ್ವಜನಿಕ ಉದ್ದಿಮೆಗಳನ್ನು ಬೇರೆ ಬೇರೆ ಮಾರ್ಗಗಳಲ್ಲಿ ಖಾಸಗೀಕರಣಗೊಳಿಸುವ ನೀತಿಗಳನ್ನು ಕೈಬಿಡಬೇಕೆಂದು ಸಿಪಿಐ(ಎಂ) ನ 22 ನೇ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ. ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಮತ್ತು ರಾಜ್ಯದ ವಿವಿಧ ಜನವಿಭಾಗಗಳು ಕೇಂದ್ರ ಸರ್ಕಾರದ ಗಂಡಾಂತರಕಾರಿ ಐಕ್ಯ ಹೋರಾಟಗಳನ್ನು ಬಲಪಡಿಸಲು ಸಮ್ಮೇಳನ ಕರೆ ನೀಡುತ್ತಿದೆ.

ಮಂಡನೆ : ಪಿ. ಶ್ರೀನಿವಾಸ್ (ಕೋಲಾರ)
ಅನುಮೋದನೆ : ಮುರಳೀಧರ ಪೇಶ್ವ (ಮೈಸೂರ್)

ಬೆಂಗಳೂರು ಪದವೀಧರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಸಿಪಿಐ(ಎಂ) ಸ್ಪರ್ಧೆಯನ್ನು ಯಶಸ್ವಿಗೊಳಿಸಲು ಕರೆ

2018 ರ ಜೂನ್‌ನಲ್ಲಿ ಕರ್ನಾಟಕ ವಿಧಾನಪರಿಷತ್ತಿಗೆ ನಡೆಯಲಿರುವ ಬೆಂಗಳೂರು ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ತೀರ್ಮಾನಿಸಿದ್ದು, ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಗೆಲ್ಲಿಸಲು ಪೂರ್ಣವಾಗಿ ಶ್ರಮಿಸಲು ಕರ್ನಾಟಕ ರಾಜ್ಯ 22ನೇ ಸಮ್ಮೇಳನ ಕರೆ ನೀಡುತ್ತದೆ.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪದವೀಧರರು ಈ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿದ್ದು, ಈ ಪದವೀಧರರನ್ನು ಹೆಚ್ಚಿನ ಪ್ರಮಾಣದಲ್ಲಿ ಮತದಾರರನ್ನಾಗಿ ನೋಂದಾಯಿಸಲು ಗಮನ ಹರಿಸಬೇಕಾಗಿದೆ.

ಇದಕ್ಕಾಗಿ, ಈ ವ್ಯಾಪ್ತಿಯ ಜಿಲ್ಲಾ ಸಮಿತಿಗಳು ಮತ್ತು ಕರ್ನಾಟಕದ ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಅಲ್ಲಿನ ಸಂಗಾತಿಗಳು ಹಿತೈಷಿಗಳ ಸಂಪರ್ಕದಲ್ಲಿರುವ ಹಾಗೂ ಈ ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪದವೀಧರರನ್ನು ಮತದಾರರನ್ನಾಗಿ ನೋಂದಾಯಿಸಲು 2018 ರ ಫೆಬ್ರವರಿ ತಿಂಗಳಲ್ಲಿ ವಿಶೇಷ ಪ್ರಯತ್ನ ನಡೆಸಬೇಕೆಂದು ಈ ಸಮ್ಮೇಳನವು ತೀರ್ಮಾನಿಸುತ್ತದೆ.

ಮಂಡನೆ : ಕೆ.ಎಸ್. ಲಕ್ಷ್ಮಿ
ಅನುಮೋದನೆ : ಗೌರಮ್ಮ (ಬೆಂಗಳೂರು)

ಸಾರ್ವಜನಿಕ ಶಿಕ್ಷಣ ರಂಗಕ್ಕೆ ಪ್ರಾಧಾನ್ಯತೆ ನೀಡಲು, ಶಿಕ್ಷಣದ ಉಳಿವಿಗಾಗಿ ಹೋರಾಟ

ಆಳುವ ವರ್ಗಗಳು ಶಿಕ್ಷಣವನ್ನು ತಮ್ಮ ದುರ್ಲಾಬ ಮತ್ತು ಶ್ರಮಿಕರ ಶೋಷಣೆಯ ಅಗತ್ಯಗಳಿಗೆ ತಕ್ಕಂತೆ ರೂಪಿಸಿದ್ದಾರೆ. ಖಾಸಗೀಕರಣ ನೀತಿಗಳ ನಂತರ ಶಿಕ್ಷಣ ಕಾರ್ಪೋರೇಟ ಲಾಭದ ಸರಕಾಗಿದೆ. ಜಾತಿ ಮತ್ತು ಭೂಮಾಲಕ ಶಕ್ತಿಗಳ ಹಿಡಿತಕ್ಕೆ ಸಿಕ್ಕಿ ಬಿದ್ದಿದೆ. ಶಿಕ್ಷಣದ ಭಾಷಾ ನೀತಿ ಪತ್ಯಕ್ರಿಯೆಗಳು ಬಡ, ದಲಿತ, ಹಿಂದುಳಿದ ಜಾತಿಗಳ ಮಹಿಳೆಯರು ಹೊರದೂಡುತ್ತವೆ. ಕಾರ್ಪೋರೇಟ್ ಕಂಪನಿಗಳ ಸೆಕ್ಯುರಿಟಿ ಗಾರ್ಡ್, ಡ್ರೈವರ್, ಕ್ಲೀನರ್‌ಗಳಾಗಿ ಉಪಯೋಗಿಸುತ್ತಿವೆ.

ಕೇಂದ್ರ, ರಾಜ್ಯ ಸರ್ಕಾರದ ಮೇಲೆ ಹಿಡಿತ ಹೊಂದಿರುವ ಬಂಡವಾಳಶಾಹಿ ಭೂಮಾಲಿಕ ಶಕ್ತಿಗಳು ಸ್ಥಾಪಿಸಿದ ಖಾಸಗಿ ಸಂಸ್ಥೆಗಳ ಹಿತರಕ್ಷಣೆಗಾಗಿ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಹಾಳುಗೆಡವುತ್ತಿದೆ. ವಿ. ವಿಗಳು ಜಾತಿ ವಾದದ ಪ್ರಭಾವದಿಂದ ನರಳುತ್ತಿದೆ. ಆರೆಸ್ಸೆಸ್ ಕೇಂದ್ರ ಸರ್ಕಾರದ ಮೇಲಿನ ಹಿಡಿತವನ್ನು ಬಳಸಿ ಅಕಾಡೆಮಿಗಳಲ್ಲಿ ವೈಜ್ಞಾನಿಕ ವೈಚಾರಿಕ ಚಿಂತನೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳುತ್ತಿದೆ.

ಶಿಕ್ಷಣ ಕ್ಷೇತ್ರವೂ ಮಾರಾಟದ ಸರಕಾಗಿ ಅದೊಂದು ಮಾಫಿಯಾವಾಗಿ ಬೆಳೆಯುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಆಶಯಗಳಿಗೆ ಕೊಡಲಿಪೆಟ್ಟು ಹಾಕುವ ಕೆಲಸ ಮಾಡುತ್ತಿದೆ. ಸರಕಾರಿ ಶಿಕ್ಷಣ ಸಂಸ್ಥೆಗಳು ಮೂಲ ಸೌಲಭ್ಯ ಇಲ್ಲದೆ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಸರಕಾರಿ ಶಿಕ್ಷಣ ಸಂಸ್ಥೆಗಳ ಈ ದುರ್ಬಲವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಲಾಭವಾಗಿಸಿಕೊಂಡು ನಾಯಿ ಕೊಡೆಗಳಂತೆ ಗಲ್ಲಿಗೊಂದು ಶಿಕ್ಷಣ ಸಂಸ್ಥೆಗಳು ಜನ್ಮತಾಳುತ್ತಿರುವುದನ್ನು ಸಿಪಿಐ(ಎಂ)ನ 22ನೇ ನೆಯ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಬೇಕಾದ "ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ" ಹಲ್ಲುಕಿತ್ತ ಹಾವಿನಂತಾಗಿದೆ. ಜಿಲ್ಲಾಧಿಕಾರಿಗಳು ಅಧ್ಯಕ್ಷರಿರುತ್ತಾರೆ ಎನ್ನುವುದು ಬಹುತೇಕ ಜಿಲ್ಲಾಧಿಕಾರಿಗಳಿಗೆ ಮಾಹಿತಿಯೇ ಇಲ್ಲದಂತಾಗಿದೆ.

ಶಿಕ್ಷಣ ಅಧಿಕಾರಿಗಳು, ಶಾಸಕರುಗಳು ಖಾಸಗೀ ಶಿಕ್ಷಣ ಸಂಸ್ಥೆಯ ಕೈಗೊಂಬೆಗಳಾಗಿ ಮೌನಕ್ಕೆ ಶರಣಾಗಿರುವುದು ಖಂಡನೀಯ.

ವಿರೋಧ ಇದ್ದರೂ ಕಾಲೇಜು ಶಿಕ್ಷಣವನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ಉನ್ನತ ಶಿಕ್ಷಣ ಕಲಿಯುವವರ ಸಂಖ್ಯೆ ಕೇವಲ 11%ಇದೆ. ದುಬಾರಿ ಶುಲ್ಕ, ಸೀಟುಗಳ ಅಲಭ್ಯತೆಯಿಂದ ಉನ್ನತ ಶಿಕ್ಷಣವನ್ನು ಮೊಟಕುಗೊಳಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳ ಕಡಿಮೆ ದಾಖಲಾತಿ ನೆಪದಲ್ಲಿ 'ಶಾಲಾ–ಕಾಲೇಜು'ಗಳನ್ನು ಮುಚ್ಚಲು ರಾಜ್ಯ ಸರಕಾರ ಮುಂದಾಗುತ್ತಿದೆ. ದಾಖಲಾತಿ ಕುಂಠಿತವಾಗಲು ಸೌಲಭ್ಯಗಳಿಲ್ಲದ ಕಾರಣ ಎಂಬುದನ್ನು ಸರಕಾರಗಳು ಅರ್ಥ ಮಾಡಿಕೊಳ್ಳದೆ ತಮ್ಮ ಅಂಜೆಂಡದ ಜಾರಿಗೆ ನಿಂತಿದೆ.

ವಿ.ವಿ ಗಳ ಸ್ವಾಯತ್ತತೆಗೆ ಧಕ್ಕೆ ತರುವ 4ವಿಶ್ವವಿದ್ಯಾಲಯ ವಿಧೇಯಕವನ್ನು ರಾಜ್ಯ ಸರಕಾರ ಅಧಿವೇಶನದಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಜಾರಿಗೆ ಮುಂದಾಗಿದೆ. ಈ ಕಾಯ್ದೆ ಪೂರ್ಣ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುವ ಹಾಗೂ ಸರಕಾರಿ ವಿ.ವಿಗಳಲ್ಲಿ ಖಾಸಗಿ ವ್ಯಕ್ತಿಗಳು ಭಾಗವಹಿಸುವ ಕುರಿತು ಹೇಳುತ್ತದೆ. ಮಾರ್ಕ್ಸ್ ಕಾರ್ಡ್ ಹಗರಣ ದೊಡ್ಡ ಸಮಸ್ಯೆಯಾಗಿದೆ ಅದರ ನಿವಾರಣೆಗೆ ಮೈಕ್ರೊ ಚಿಪ್ ಅಳವಡಿಸಲು ಹೊರಟಿದೆ. ಇದು ಇನ್ನಷ್ಟು ಅವ್ಯವಹಾರಕ್ಕೆ ದಾರಿ ಮಾಡಿ ಕೊಡುತ್ತದೆ. ಕರ್ನಾಟಕ ಮುಕ್ತ ವಿಶ್ವವಿಧ್ಯಾಲಯ ಕೇಂದ್ರ ಮತ್ತು ರಾಜ್ಯ ಸರಕಾಗಳ ತಪ್ಪು ನಡೆಯಿಂದ ಮುಚ್ಚುವ ಹಂತಕ್ಕೆ ಬಂದು ತಲುಪಿದೆ.

NGOಗಳ ಮೂಲಕ ಸರಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸಲು ಸರಕಾರ ಯೊಜನೆ ರೂಪಿಸಿದೆ. ಈ ಮೂಲಕ ಕಾರ್ಪೋರೇಟ್ ಕಂಪನಿಗಳ ಕೈಗೆ ಶಿಕ್ಷಣವನ್ನು ನೀಡುವ ಮೂಲಕ ಅದನ್ನೊಂದು ಮಾಫಿಯಾ ಮಾಡಲು ಹೊರಟಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ. ಶಿಕ್ಷಣದ ಉಳಿವಿಗಾಗಿ ಹೋರಾಟವನ್ನು ನಡೆಸಲು ಸಮ್ಮೇಳನವು ನಿರ್ಧರಿಸುತ್ತದೆ.

ಪರಿಸರ ಸೂಕ್ಷ್ಮ ವಲಯದ ಹೆಸರಿನಲ್ಲಿ ಜನವಿರೋಧಿ ಕ್ರಮಗಳನ್ನು ವಿರೋಧಿಸಿ ನಿರ್ಣಯ

ಜಾಗತಿಕ ತಾಪಮಾನ ಏರಿಕೆ ಯ ಹೆಸರಿನಲ್ಲಿ ನಮ್ಮ ದೇಶದಲ್ಲಿ ಪರಿಸರ ರಕ್ಷಣೆ ಯಾಗಬೇಕು ಎಂದು ನೆಪವೊಡ್ಡಿ ನಮ್ಮ ದೇಶದಲ್ಲಿ ಪ.ಘಟ್ಟಗಳ ರಕ್ಷಣೆ ಯಾಗಬೇಕು ಎಂದು ಪರಿಸರ ಸೂಕ್ಷ್ಮ ವಲಯ ಗಳನ್ನು ರಚಿಸಲು ಕೇಂದ್ರ ಸರ್ಕಾರ ಮುಂದಾಗಿ ಜನ ಜೀವನಕ್ಕೆ ಮಾರಕವಾದ ನೀತಿಗಳನ್ನು ಜಾರಿಗೊಳಿಸಲು ಮುಂದಾಗಿರುವುದನ್ನು 22 ನೆಯ ಸಿಪಿಐ(ಎಂ) ನ ರಾಜ್ಯ ಸಮ್ಮೇಳನವು ತೀವ್ರವಾಗಿ ವಿರೋಧಿಸುತ್ತದೆ.

ಇದಕ್ಕಾಗಿ ಕಸ್ತೂರಿ ರಂಗನ್ ಸಮಿತಿ ಯ ವರದಿಯನ್ನು ಅನುಷ್ಠಾಅನುಷ್ಠಾನಗೊಳಿಸಲು ಕೇಂದ್ರ ಸರಕಾರ ಹೆಜ್ಜೆಗಳನ್ನು ಇಡುತ್ತಿದೆ. ಜಾಗತಿಕ ತಾಪಮಾನ ಏರಿಕೆಗೆ ಭಾರತ ಕಾರಣವಲ್ಲ ಭಾರತದಲ್ಲಿ ಪರಿಸರ ರಕ್ಷಣೆಗೆ ಪ.ಘಟ್ಟಗಳ ರಕ್ಷಣೆ ಯಾಗಬೇಕು .ಆದರೆ ಅದರ ಅವನತಿಗೆ ಸರಕಾರಗಳ ಧೋರಣೆ ಗಳೇ ಕಾರಣವಾಗಿದೆ ಆದರೆ ದೇಶದ ಜನರೇ ಕಾರಣವೆಂಬಂತೆ ಕೇಂದ್ರ ಸರ್ಕಾರ ವರ್ತಿಸುತ್ತಿದೆ. ಪರಿಸರ ಸೂಕ್ಷ್ಮ ವಲಯ ರಚನೆ, ಅದಕ್ಕಾಗಿ ಕ.ರಂ.ಸಮಿತಿಯ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರದ ಈ ನಡೆ ಭಾ.ಜ.ಪ. ಚುನಾವಣಾ ಭರವಸೆಯ ಉಲ್ಲಂಘನೆ ಯಾಗಿದೆ.

ಇಕೋ ಸೆನ್ಸಿಟಿವ್ ಝೋನ್ 'ಇಎಸ್ ಝಡ್' ವಲಯದ ನೆಪದಲ್ಲಿ ಹಲವಾರು ಷರತ್ತುಗಳನ್ನು ವಿಧಿಸಿ ಗ್ರಾಮೀಣ ಪ್ರದೇಶದ ಜನತೆಗೆ ವಿವಿಧ ರೀತಿಯ ತೊಂದರೆ ತಾಪತ್ರಯಗಳ್ನು ತಂದೊಡ್ಡಲಾಗಿದೆ. ಆ ಮೂಲಕ ಈಗಾಗಲೇ ಅರಣ್ಯ ಮತ್ತು ವನ್ಯ ಜೀವಿ ಸಂಬಂಧಿಸಿದ ಕಾಯ್ದೆಗಳಿಂದ, ಅಭಯಾರಣ್ಯ, ಹುಲಿ–ಹಾರ್ನಬಿಲ್, ಆನೆ, ಬೈಸನ್ ಸೆಂಚುರಿ, ವಿಶ್ವ ಪರಂಪರಾ ತಾಣ ಕುರಿತ ಘೋಷಣೆಯ ಪ್ರಸ್ತಾಪ ಹಾಗೂ ಡಾ. ಕಸ್ತೂರಿ ರಂಗನ್ ವರದಿಯಿಂದ ಜನತೆ ಘಾಸಿಗೊಂಡಿದ್ದಾರೆ.

ಇದೀಗ ಮೇಲ್ಕಾಣಿಸಿದ ಎಲ್ಲಾ ಕಾಯ್ದೆ ಮತ್ತು ವರದಿ ಆಧಾರದಲ್ಲಿ ಸರ್ಕಾರ ನವೆಂಬರ್ 2, 2016ರಂದು 'ಪರಿಸರ ಸೂಕ್ಷ್ಮ ವಲಯ' ಎಂದು ರಾಜ್ಯದ ಕೆಲವು ಭಾಗಗಳನ್ನು ಘೋಷಿಸಿದೆ. ಈ ಘೋಷಣೆಗೆ ಆಕ್ಷೇಪಣೆ ಸಲ್ಲಿಸಲು 30–12–2016 ಕೊನೆಯ ದಿನವಾಗಿತ್ತು. ಈ ನೊಟಿಫಿಕೇಶನ್ ಷರತ್ತಿನ ಪರಿಣಾಮ: ಹೀಗಿರುವುದನ್ನು ಗಮನಿಸಬೇಕು.

1. ರೈತಾಪಿ ಬಡಜನತೆಗೆ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ. 31 ರೀತಿಯ ಅಡಚಣೆಯಿದೆ.
2. ಹೊಸ ಅಭಿವೃದ್ಧಿಗೆ ಅವಕಾಶವಿಲ್ಲ. ಅರಣ್ಯೋತ್ಪನ್ನ ಭೂ ಸಂಪತ್ತುಗಳನ್ನು ಕಟ್ಟಡಕ್ಕೆ ಬೇಕಾದ ವಸ್ತುನ್ನಾಗಲೀ ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುವನ್ನಾಗಲೀ ಪಡೆಯುವಂತಿಲ್ಲ. ಕಲ್ಲುಕ್ವಾರಿ, ಕಟ್ಟಿಗೆ ಮಿಲ್, ನೀರಾವರಿ ಯೋಜನೆ, ಉರುವಲು ಬಳಸುವಂತಿಲ್ಲ. ಹೊಸ ವಿಭಾಗಕ್ಕೆ ವಿದ್ಯುತ್ ಲೈನ್ ಪಡೆಯಲು ಇದು ತೊಡಕು. ರಾಜ್ಯದ ಈ 'ಇಎಸ್‌ಝಡ್' ವ್ಯಾಪ್ತಿಯ ಕೆಲವರು ಹೇಳಿದ್ದಾರೆ. ಈಗಲೂ ವಿದ್ಯುತ್ ಇಲ್ಲ, ಪಡೆಯಲು ತೊಡಕು.
3. ಹಳ್ಳಿಗಳಿಗೆ ಮತ್ತು ರಾಜ್ಯ ಹೆದ್ದಾರಿಗಳು ಸಂಜೆ 6 ಗಂಟೆಯಿಂದ ಬಂದ್, ಇದರಿಂದ ಮಾನವ ಘನತೆಯ ಬದುಕಿಗೆ ಕುಂದುಂಟಾಗಿದೆ.
4. ಮೂಲ ಸೌಕರ್ಯಗಳಾದ ವಿದ್ಯುತ್, ರಸ್ತೆ, ಸೇತುವೆ ಸಂಪರ್ಕಕ್ಕೆ ತಡೆಯಾಗುತ್ತಿದೆ.
5. ಈ ಭಾಗದಲ್ಲಿ ಕೃಷಿ ಆಧಾರಿತ ಆರ್ಥಿಕತೆ ಇದೆ. ಇತ್ತೀಚಿಗೆ ಕೆಲವೆಡೆ ಪ್ರವಾಸೋದ್ಯಮವೂ ಸಣ್ಣ ಕೈಗಾರಿಕೆಯೂ ನಡೆಯುತ್ತಿದೆ.

ಈ ವರದಿಯ ಅನುಷ್ಠಾನದಿಂದ ಜನಜೀವನ ಅನೇಕ ಪರಿಮಿತಿಗಳನ್ನು ಅನುಭವಿಸಬೇಕಾಗುತ್ತದೆ. ಅಧಿಕಾರಶಾಹಿ ಗಳ ಮುಷ್ಠಿ ಯಲ್ಲಿ ನಲುಗಬೇಕು. ಪರಿಸರ ಸೂಕ್ಷ್ಮ ವಲಯ ರಚನೆ ಮತ್ತು ಕಸೂರಿ ರಂಗನ ಸಮಿತಿ ವರದಿ ಯ ಅನುಷ್ಠಾನಗೊಳಿಸಲು ಇಟ್ಟ ಹೆಜ್ಜೆಗಳಿಂದ ಕೇಂದ್ರ ಸರ್ಕಾರ ಹಿಂದೆ ಸರಿಯಬೇಕು ಎಂದು ಈ ಸಮ್ಮೇಳನ ಒತ್ತಾಯಿಸುತ್ತದೆ.

ಮಂಡನೆ : ಯಮುನಾ ಗಾಂವ್ಕರ್, ಉತ್ತರ ಕನ್ನಡ
ಅನುಮೋದನೆ : ಎಸ್.ಎಂ. ಶಿವಕುಮಾರ್, ದಕ್ಷಿಣ ಕನ್ನಡ

ದೇವದಾಸಿ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರ ಪುನರ್ವಸತಿಗೆ ಸಿ.ಪಿ.ಐ (ಎಂ) ಒತ್ತಾಯ.

ಸ್ವಾತಂತ್ರ್ಯ ಬಂದು ಸುಮಾರು 07 ದಶಕಗಳನ್ನು ಪೂರೈಸುತ್ತಿದ್ದರೂ, ಈಗಲೂ ದಲಿತ ಹಾಗೂ ಹಿಂದುಳಿದ ಜನ ಸಮುದಾಯಗಳ ಬಾಲಕಿಯರು ಮತ್ತು ಯುವತಿಯರನ್ನು ದೌರ್ಜನ್ಯದ ದೇವದಾಸಿ ಪದ್ಧತಿ ಗೆ, ಬಲವಂತವಾಗಿ ದೂಡುತ್ತಿರುವುದು ತೀವ್ರ ಖಂಡನೀಯವಾಗಿದೆ. ಕೂಡಲೇ ಈ ದೌರ್ಜನ್ಯ ದ ದೇವದಾಸಿ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು, ದೇವದಾಸಿ ಪದ್ಧತಿ ನಿಷೇದ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ತರಬೇಕು ಮತ್ತು ಅದಾಗಲೇ ದೇವದಾಸಿ ಪದ್ಧತಿಗೆ ಬಲಿಯಾದ ಆ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರನ್ನು ತಕ್ಷಣವೇ ಭೂಮಿ ಹಾಗೂ ಉದ್ಯೋಗ ನೀಡಿಕೆ ಮುಂತಾದ ಅಗತ್ಯ ಕಾರ್ಯಕ್ರಮಗಳನ್ನು ಯೋಜಿಸುವ ಮೂಲಕ ದೌರ್ಜನ್ಯ ದ ದೇವದಾಸಿ ಪದ್ಧತಿಯನ್ನು ತೊಡೆದು ಹಾಕಲು ಪುನರ್ವಸತಿ ಕ್ರಮಗಳನ್ನು ವಹಿಸಲು ಮೂಡಬಿದ್ರೆಯಲ್ಲಿ ಸೇರಿರುವ ಸಿ.ಪಿ.ಐ.(ಎಂ)ನ 22ನೇ ರಾಜ್ಯ ಸಮ್ಮೇಳನ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ಹಾಲಿ ಇರುವ ದೇವದಾಸಿ ಪದ್ಧತಿ ನಿಷೇಧ ಕಾಯ್ದೆಯು, ದೇವದಾಸಿ ಪದ್ಧತಿ ದೇವದಾಸಿ ಮಹಿಳೆಯರು ಮತ್ತು ಅವರ ಕುಟುಂಬದ ಸದಸ್ಯರನ್ನು ಮಾತ್ರವೇ ಅಪರಾಧಿಗಳೆಂದು ಪರಿಗಣಿಸುವ ಮೂಲಕ ಅಪರಾಧವನ್ನು ಅಮಾಯಕ ಬಾಲಕಿಯರು ಮತ್ತು ಅವರ ಕುಟುಂಬದ ಸದಸ್ಯರ ಮೇಲೆ ಹೇರುತ್ತದೆ. ಅದು ದೌರ್ಜನ್ಯದ ದೇವದಾಸಿ ಪದ್ಧತಿಗೆ ದೂಡುವವರ ಮತ್ತು ಅದರ ಫಲಾನುಭವಿಗಳನ್ನು ತಪ್ಪಿಸಿಕೊಳ್ಳಲು ಬಿಡಲಾಗಿದೆ. ಈ ಮಹಿಳೆಯರ ಜೊತೆ ಸಹ ಬಾಳ್ವೆ ನಡೆಸಿದವರಿಗೆ ಇರಬೇಕಾದ ಯಾವುದೇ ಹೊಣೆಗಾರಿಕೆಯ ಕುರಿತು ಮಾತನಾಡುವುದಿಲ್ಲ. ಆದ್ದರಿಂದ ಈ ಎಲ್ಲರನ್ನು ಅಪರಾಧಿಗಳನ್ನಾಗಿಸಲು ಮತ್ತು ಹೊಣೆಗಾರಿಕೆಯನ್ನು ನಿಗದಿಸುವುದು ದೌರ್ಜನ್ಯದ ದೇವದಾಸಿ ಪದ್ಧತಿಯನ್ನು ಪರಿಣಾಮಕಾರಿಯಾಗಿ ತಡೆಯಲು ಅಗತ್ಯವಿದೆ.

ಅದೇ ರೀತಿ, ದೇವದಾಸಿ ಮಹಿಳೆಯರ ಕುಟುಂಬದ ಎಲ್ಲ ಸದಸ್ಯರನ್ನು ಗಣತಿ ಮಾಡಿ ಆ ಎಲ್ಲರನ್ನು ಪುನರ್ವಸತಿ ಗೊಳಪಡಿಸಲು ವ್ಯಾಪಕವಾದ ಕಾರ್ಯ ಕ್ರಮಗಳನ್ನು ಜಾರಿಗೊಳಿಸಲು

ಅಗತ್ಯ ಕ್ರಮಗಳನ್ನು ಮತ್ತು ಬಜೆಟ್ ನಲ್ಲಿ ಅಗತ್ಯ ನೆರವನ್ನು ಒದಗಿಸಲು ಕೇಂದ್ರ ಸರ್ಕಾರದ ಹಾಗೂ ಕರ್ನಾಟಕ ಸರಕಾರ ಮುಂದಾಗಬೇಕು ಎಂದು ಸಿಪಿಐ(ಎಂ) ನ ರಾಜ್ಯ ಸಮ್ಮೇಳನವು ಆಗ್ರಹಿಸುತ್ತದೆ.

ಮಂಡನೆ : ಬಿ. ಮಾಳಮ್ಮ
ಅನುಮೋದನೆ: ಹುಲುಗಮ್ಮ ಕೊಪ್ಪಳ

ಆದಿವಾಸಿ ಸಮುದಾಯಗಳ ಹಕ್ಕುಗಳನ್ನು ರಕ್ಷಿಸಲು ಆಗ್ರಹಿಸಿ ನಿರ್ಣಯ

ಮೂಲನಿವಾಸಿಗಳಾದ ಆದಿವಾಸಿ ಸಮುದಾಯವಿಂದು ಹಲವಾರು ರೀತಿಯ ಧಾಳಿ–ದೌರ್ಜನ್ಯಗಳಿಗೆ ಮೂಲ ನೆಲೆ ಕಳೆದುಕೊಳ್ಳುವ ಆತಂಕಕ್ಕೆ ತುತ್ತಾಗಿದೆ. ಕರ್ನಾಟಕದ ಹಲವಾರು ಭಾಗಗಳಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳಾದ ವಿದ್ಯುತ್, ನೀರು, ರಸ್ತೆಗಳಿಲ್ಲದೆ ಜೀವಿಸುವಂತಾಗಿದೆ. ಆದಿವಾಸಿ ಸಮುದಾಯಕ್ಕೆ ವರದಾನವಾಗಬೇಕಿದ್ದ ಅರಣ್ಯ ಹಕ್ಕು ಕಾಯ್ದೆ 2006 ಯನ್ನೂ ಸಮರ್ಪಕವಾಗಿ ಜ್ಯಾರಿ ಮಾಡುವಲ್ಲಿ ಸರ್ಕಾರಗಳು, ಸಂಬಂಧಪಟ್ಟ ಇಲಾಖೆಗಳು ಸಂಪೂರ್ಣವಾಗಿ ವಿಫಲವಾಗಿದೆ. ಶತಮಾನಗಳಿಂದ ಓಂದೇ ಪ್ರದೇಶಗಳಲ್ಲಿ ವಾಸವಾಗಿದ್ದರೂ ಇನ್ನೂ ಹಕ್ಕು ಪತ್ರ ಹಾಗೂ ಸಮುದಾಯಗಳ ಹಕ್ಕು ದೊರಕಿರುವುದಿಲ್ಲ. ಆದಿವಾಸಿಗಳ ಅಭಿವೃದ್ಧಿಗೆಂದು ಸರ್ಕಾರ ಬಿಡುಗಡೆ ಮಾಡುವ ಕೋಟ್ಯಾಂತರ ರೂಪಾಯಿಗಳು ಸರಿಯಾಗಿ ಬಳಕೆಯಾಗುವುದಿಲ್ಲ. ವ್ಯಾಪಕವಾಗಿ ದುರುಪಯೋಗುವಾಗುತ್ತಿದೆ. ಇಲ್ಲವೇ ವಂಚಿಸಲಾಗುತ್ತದೆ. ಆದರೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ. ಎಂದು 22ನೇ ಯ ರಾಜ್ಯ ಸಮ್ಮೇಳನವು ಖಂಡಿಸುತ್ತದೆ.

ಆದಿವಾಸಿ ಸಮುದಾಯದ ಪ್ರತಿಭಾನ್ವಿತ ಯುವಕ ವಿಠಲ ಮಲೆಕುಡಿಯ ರವರ ಮೇಲೆ ಅಂದಿನ ಬಿಜೆಪಿ ಸರ್ಕಾರ ದಾಖಲಿಸಿರುವ ಸುಳ್ಳು ದೇಶದ್ರೋಹದ ಪ್ರಕರಣಕ್ಕೆ ಆರು ವರ್ಷಗಳಾದರೂ ಯಾವುದೇ ಸಾಕ್ಷ್ಯಧಾರಗಳನ್ನು ಸಂಗ್ರಹಿಸುವಲ್ಲಿ ಪೋಲೀಸರು ವಿಫಲವಾಗಿದ್ದಾರೆ. ಹಾಗಿದ್ದರೂ ಇಂದಿನ ಸರ್ಕಾರ ಆ ಪ್ರಕರಣವನ್ನು ಕೈ ಬಿಡುವಲ್ಲಿ ಮೀನಾಮೇಷ ಎಣಿಸುತ್ತಿದೆ ಇದು ಖಂಡನೀಯ. ಮತ್ತೊಂದೆಡೆ ತನ್ನ ಜಮೀನನ್ನು ಮೇಲ್ಜಾತಿಯ ಭೂಮಾಲಿಕರು ಒತ್ತುವರಿ ಮಾಡುತ್ತಿರುವುದನ್ನು ವಿರೋಧಿಸಿದ ಏಕೈಕ ಕಾರಣಕ್ಕಾಗಿ ಕಳೆ ಕೊಚ್ಚುವ ಯಂತ್ರದ ಮೂಲಕ ಸುಂದರ ಮಲೆಕುಡಿಯರವರ ಕೈ ಕತ್ತರಿಸ್ಪಟ್ಟು, ಕೊಲೆಯತ್ನಕ್ಕೀಡಾದ ಪ್ರಕರಣದಲ್ಲಿ ಇಂದಿಗೂ ನ್ಯಾಯ ಮರಿಚಿಕೆಯಾಗಿದೆ. ಈ.ಖ.ಖ. ನಲ್ಲಿ ದಾಖಲಾಗಿದ್ದ ಎಸ್‌ಸಿ/ ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯನ್ನು ರಾಜ್ಯ ಹೈಕೋರ್ಟ್ ರದ್ದುಪಡಿಸಿದರೂ ರಾಜ್ಯ ಸರ್ಕಾರ ಮಧ್ಯಪ್ರವೇಶ ಮಾಡುವಲ್ಲಿ ವಿಫಲವಾಗಿದೆ. ರಾಜ್ಯಾದಾದ್ಯಂತ ಗಮನ ಸೆಳೆದ ಕೊಡಗಿನ ದಿಡ್ಡಳ್ಳಿ ಪ್ರಕರಣಕ್ಕೆ ಸಂಬಂಧಿಸಿದಂತೆಯೂ ಸ್ಥಳೀಯ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದ ಬೇಜವಬ್ದಾರಿ, ಅವಮಾನವೀಯತೆಯಿಂದ ವರ್ತಿಸಿತು. ಒತ್ತುವರಿ ತೆರವು ನೆಪದಲ್ಲಿ ಮಹಿಳೆಯ, ಮಕ್ಕಳ ಮೇಲೆ

➡

ತನ್ನ ಕ್ರೌರ್ಯವನ್ನು ತೋರಿಸಿತು. ಆದರೆ ಈ ಗಂಭೀರ ಸಮಸ್ಯೆಯನ್ನು ಪರಿಹರಿಸಿ, ಅಲ್ಲಿನ ಎಸ್ಟೇಟ್‌ಗಳಲ್ಲಿರುವ ಜೀತಪದ್ಧತಿಯನ್ನು ಬುಡ ಸಮೇತ ಕಿತ್ತು ಹಾಕುವಲ್ಲಿ ಸಂಪೂರ್ಣ ವಿಫಲವಾಗಿದೆ. ಅದೇ ರೀತಿ ನಿಟ್ಟೂರಿನ ಹಸಲರ ಪ್ರಶ್ನೆಗಳು ನೆನೆಗುದಿಗೆ ಬಿದ್ದಿವೆ.

– ರಾಮನಗರ ಇರುಳಿಗರು ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಜಮೀನಿನ ಪ್ರಶ್ನೆಯನ್ನು ಮುಂದಿಟ್ಟುಕೊಂಡು 2–3 ತಿಂಗಳುಗಳ ಕಾಲ ನಿರಂತರ ಪ್ರತಿಭಟನೆಗಳನ್ನು ನಡೆಸಿದರೂ ಸರ್ಕಾರ ಕುರುಡರಂತೆ ವರ್ತಿಸಿತು. ಪೂರ್ವಜರ ಕಾಲದಿಂದಲೂ ವಾಸವಾಗಿರುವ ಜಮೀನುಗಳಿಗೆ ಮೂಲ ಹಕ್ಕುಪತ್ರ ನೀಡದೆ ವಂಚಿಸಿದೆ. ಈ ರೀತಿಯಾಗಿ ರಾಜ್ಯದಾದ್ಯಂತ ಮೂಲಭೂತ ಸೌಲಭ್ಯಗಳಿಲ್ಲದೆ ಬದುಕು ಸಾಗಿಸುವಂತಾಗಿದೆ. ಅವಿಭಜಿತ ದ.ಕ. ಜಿಲ್ಲೆಯ ಕೊರಗ ಸಮುದಾಯ ಸ್ವಾತಂತ್ರ್ಯ ಭಾರತದ 71 ವರ್ಷಗಳ ಬಳಿಕವು ಇನ್ನೂ ಗಾಳಿ, ಚಳಿ, ಮಳೆಗೆ ಮೈಯಾಡ್ಡಿ ಪ್ಲಾಸ್ಟಿಕ್ ಡೇರೆ, ಗುಡಿಸಲುಗಳಲ್ಲಿ ಬದುಕು ಸಾಗಿಸುವಂತಾಗಿದೆ. ಮತ್ತೊಂದೆಡೆ ಕಾಡುತ್ಪತ್ತಿ ಸಂಗ್ರಹಿಸಲು ಸ್ವ ಅಭಿವೃದ್ದಿಗೆ ನಿರಂತರವಾಗಿ ಅರಣ್ಯ ಇಲಾಖೆಗಳು ಅಡ್ಡಿ ಪಡಿಸುತ್ತಿದೆ ಎಂದು ಸಮ್ಮೇಳನವು ಅಭಿಪ್ರಾಯ ಪಡುತ್ತದೆ.

ಈ ರೀತಿಯಾಗಿ ಅತಂತ್ರವಾಗಿರುವ ಆದಿವಾಸಿಗಳನ್ನು ಸಂಘಪರಿವಾರ ಹಿಂದುತ್ವದ ಹೆಸರಿನಲ್ಲಿ ದಾರಿ ತಪ್ಪಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೋಮು ಪ್ರಚೋದನಕಾರಿ ಗಲಾಟೆಗಳಲ್ಲೂ ಈ ಸಮುದಾಯದ ಯುವಕರು ಭಾಗಿಯಾಗುತ್ತಿರುವುದು ತೀರಾ ಕಳವಳಕಾರಿ ಅಂಶ ಅತ್ಯಂತ ಜಾತ್ಯತೀತರಾಗಿ, ಪ್ರಗತಿಪರವಾಗಿ ಜೀವಿಸುತ್ತಿದ್ದ ಸಮುದಾಯವಿಂದು ಧರ್ಮ – ದೇವರ ಹೆಸರಿನಲ್ಲಿ ಕೋಮುವಾದಿಗಳಾಗುತ್ತಿದ್ದಾರೆ. ಇಂತಹ ಅಪಾಯವನ್ನೂ ಆದಿವಾಸಿಗಳು ಎಚ್ಚೆತ್ತು ಕೊಳ್ಳಬೇಕಾಗಿದೆ. ಸರ್ಕಾರ ರಾಜ್ಯದ ಎಲ್ಲಾ ಆದಿವಾಸಿಗಳಿಗೆ ಮೂಲಭೂತ ಸೌಲಭ್ಯಗಳನ್ನು ನೀಡಿ, ಶಿಕ್ಷಣ, ಉದ್ಯೋಗ ನೀಡಿ ಅವರ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಸಿಪಿಐ(ಎಂ) 22 ನೇ ಕರ್ನಾಟಕ ರಾಜ್ಯ ಸಮ್ಮೇಳನ ಆಗ್ರಹಿಸುತ್ತದೆ. ಆದಿವಾಸಿ, ಬುಡಕಟ್ಟು ಸಮುದಾಯಗಳ ಬಾಷೆ ಸಂಸ್ಕೃತಿಕ ಅನನ್ಯತೆ ವೈಶಿಷ್ಟತೆಯನ್ನು ರಕ್ಷಿಸಿ, ಬೆಳೆಸಬೇಕೆಂದೂ ಸಮ್ಮೇಳನವೂ ಆಗ್ರಹಿಸುತ್ತದೆ.

ರಾಷ್ಟ್ರೀಯ ಉದ್ಯಾನವನ, ಆನೆ ಕಾರಿಡಾರ್, ಹುಲಿ ಸಂರಕ್ಷಣಾ ಯೋಜನೆ, ಪಶ್ಚಿಮ ವಾಹಿನಿ, ಮಾಧವ ಗಾಡ್ಗಿಲ್, ಕಸ್ತೂರಿ ರಂಗನ್ ವರದಿಗಳು, ಆದಿವಾಸಿಗಳಲ್ಲಿ ಬೀದಿಪಾಲು ಮಾಡುವ ಯೋಜನೆಗಳಾಗಿದೆ. ಈ ಯೋಜನೆಗಳಿಂದ ಈಗಾಗಲೇ ಹಲವು ಕುಟುಂಬಗಳು ನೆಲೆ ಕಳೆದುಕೊಂಡಿದ್ದಾರೆ. ಇಂತಹ ಕುಟುಂಬಗಳಿಗೆ ಸರ್ಕಾರ ಜುಜುಬಿ ಹಣ ನೀಡಿ ಕೈ ತೊಳೆದುಕೊಂಡಿರುವುದನ್ನು ಗಮನಿಸುವ ಸಮ್ಮೇಳನ ಒಕ್ಕಲೆಬ್ಬಿಸುವುರನ್ನು ನಿಲ್ಲಿಸಬೇಕು. ಅವರ ಬದುಕು ರಕ್ಷಿಸಬೇಕು ಎಂದು ಆಗ್ರಹಿಸುತ್ತಿದೆ.

ರಾಜ್ಯದಲ್ಲಿ 50 ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಿದ್ದು ಕುಣಬಿ, ಗೌಳಿ, ಹಾಲಕ್ಕಿ, ಕುಂಬ್ರಿ, ಮರಾಠಿ ಮುಂತಾದ ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮುಂದಾಗಬೇಕೆಂದೂ, ಸಮ್ಮೇಳನ ಆಗ್ರಹಿಸುತ್ತವೆ. ಒಟ್ಟಾರೆ ಆದಿವಾಸಿ – ಬುಡಕಟ್ಟು ಸಮುದಾಯಗಳ ರಕ್ಷಣೆಗಾಗಿ ನಡೆಯುವ ಹೋರಾಟಗಳು ಬೆಂಬಲಿಸುತ್ತದೆ.

ಮಂಡನೆ: ನಾಗರತ್ನ ನಾಡ –ಉಡುಪಿ
ಅನುಮೋದನೆ: ಎಂ. ಜಂಬಯ್ಯನಾಯಕ್

ಸಿಪಿಐ(ಎಂ)ನ 22ನೇ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದವರು

1. ಪ್ರತಿನಿಧಿಗಳು ಒಟ್ಟು– 251 ಹಾಜರಾತಿ –249
ಪುರುಷರು– 207 ಮಹಿಳೆಯರು– 41
ವೀಕ್ಷಕರು ಒಟ್ಟು – 37 ಹಾಜರಾತಿ– 36
ಪುರುಷರು– 32 ಮಹಿಳೆಯರು– 3

2. ವಯಸ್ಸು
20 ರಿಂದ 30 ವರ್ಷ – 18,
30 ರಿಂದ 50 ವರ್ಷ – 146,
50 ರಿಂದ 70 ವರ್ಷ – 94
70 ರ ಮೇಲೆ – 20,
ಅತ್ಯಂತ ಹಿರಿಯರು
84 ವಯಸ್ಸು – ಕಾ॥ ಕೆ.ಆರ್. ಶ್ರೀಯಾನ್,
ಕಾ॥ ಕೋದಂಡರಾಮ
ಅತ್ಯಂತ ಕಿರಿಯವರು
25 ವರ್ಷ ಲಿಂಗಣ್ಣ ಮಕಾಶಿ

3. ವಿದ್ಯಾಭ್ಯಾಸ
ಅನಕ್ಷರಸ್ತರು – 3
1 ರಿಂದ 10ನೇ ತರಗತಿ – 93,
ಪಿ.ಯು.ಸಿ. ಓದಿದವರು – 28,
ಪದವಿಧರರು – 104
ಉನ್ನತ ವ್ಯಾಸಂಗ – 49

4. ಪಕ್ಷಕ್ಕೆ ಸೇರಿದ ವರ್ಷ
1970ರ ಒಳಗೆ – 1954 ರಲ್ಲಿ
ಕಾಂ॥ ಕೆ.ಆರ್. ಶ್ರೀಯಾನ್
1970 ರಿಂದ 1980 ರ ವರೆಗೆ – 29
1980 ರಿಂದ 2000 ದ ವರೆಗೆ –134
2000 ದಿಂದ 2017 – 112

5. ವಿವಾಹಿತರು – 246
ಅವಿವಾಹಿತರು – 29

6. ಪಕ್ಷದ ರಾಜ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ ವಿವರ
1 ಸಮ್ಮೇಳನ – 45
2 ಸಮ್ಮೇಳನಗಳು – 38
3 ಸಮ್ಮೇಳನಗಳು – 40
4 ಸಮ್ಮೇಳನಗಳು – 32
5 ಸಮ್ಮೇಳನಗಳು – 21
6 ಸಮ್ಮೇಳನಗಳು – 20
7 ಸಮ್ಮೇಳನಗಳು – 18
8 ಸಮ್ಮೇಳನಗಳು – 14
9 ಸಮ್ಮೇಳನಗಳು – 11
10 ಸಮ್ಮೇಳನಗಳು – 14
11 ಸಮ್ಮೇಳನಗಳು – 5
12 ಸಮ್ಮೇಳನಗಳು – 1
13 ಸಮ್ಮೇಳನಗಳು – 3
15 ಸಮ್ಮೇಳನಗಳು – 1
ಕಾಂ. ಜಿ.ವಿ.ಎಸ್
20 ಸಮ್ಮೇಳನಗಳು – 1
ಕಾಂ. ಕೋದಂಡರಾಮ
22 ಸಮ್ಮೇಳನಗಳು – 1
ಕಾಂ. ಕೆ.ಆರ್. ಶ್ರೀಯಾನ್

7. ವರ್ಗದ ಹಿನ್ನೆಲೆ
ಕೂಲಿಕಾರ – 39
ಕಾರ್ಮಿಕ – 83
ನೌಕರ – 28
ಬಡರೈತ – 57
ಮಧ್ಯಮರೈತ – 69
ಪುಟ್ಟ ಬಂಡವಾಳಗಾರ – 1
ಶ್ರೀಮಂತ ರೈತ –
ಭೂಮಾಲಕ –

8. ಸಾಮಾಜಿಕ ಹಿನ್ನೆಲೆ :
ಪರಿಶಿಷ್ಟ ಜಾತಿಗಳು – 50
ಪರಿಶಿಷ್ಟ ಪಂಗಡಗಳು – 16
ಅಲ್ಪಸಂಖ್ಯಾತ – 21
ಹಿಂದುಳಿದ – 84
ಆದಿವಾಸಿ –
ಸಾಮಾನ್ಯ – 105

9. ಪಕ್ಷದಲ್ಲಿ ಸ್ಥಾನ :
ಶಾಖೆಗಳಲ್ಲಿ – 43
ಜಿಲ್ಲಾ ಸಮಿತಿಯಲ್ಲಿ – 138
ವಲಯ ಸಮಿತಿ – 20
ರಾಜ್ಯ ಸಮಿತಿ – 43
ತಾಲೂಕು ಸಮಿತಿ – 33
ಕಾರ್ಯದರ್ಶಿಮಂಡಳಿ – 12
ಕೇಂದ್ರ ಸಮಿತಿ – 1.
ಪೂರ್ಣಕಾಲದ
ಕಾರ್ಯಕರ್ತರು –107

10. ಉದ್ಯೋಗ :
ನಿವೃತ್ತ ನೌಕರರು – 15
ಅಂಗನವಾಡಿ ನೌಕರರು – 16
ಬೀಡಿ ಕೆಲಸ – 7
ಗ್ರಾಮಪಂಚಾಯತ್ ನೌಕರರು – 5
ವಕೀಲರು – 7
ವ್ಯವಸಾಯ – 38
ಕೂಲಿ – 6
ಕೃಷಿ ಸಂಶೋಧನೆ – 3
'ಏನೂ ಇಲ್ಲ' – 3

11. ಮಾಸಿಕ ಆದಾಯ :
1000 ಒಳಗಡೆ –6
1001 – 5000 – 87
5001–10,000 –105
10,001 ರಿಂದ 20,000 – 21
20,000 ಮೇಲೆ – 31
'ಏನೂ ಇಲ್ಲ' – 4

12. ಸಾಮೂಹಿಕ ಸಂಘಟನೆ :
ಟಿಯು – 122
ಕೆಪಿಆರ್‌ಎಸ್ – 67
ಡಿಹೆಚ್‌ಎಸ್ – 7
ದೇವದಾಸಿ – 7
ಕಟ್ಟಡ ಕಾರ್ಮಿಕರು – 6
ಸಾಂಸ್ಕೃತಿಕ – 5
ಹಮಾಲಿ – 4
ಬೀಡಿ – 4
ಜೆ.ಎಂ.ಎಸ್ – 5
ಜನಶಕ್ತಿ – 3
ಎಸ್‌ಎಫ್‌ಐ – 5
ಆದಿವಾಸಿ – 1

13. ಸಾಮೂಹಿಕ ಸಂಘಟನೆಯಲ್ಲಿ ಸ್ಥಾನ :
ವಲಯ ಮಟ್ಟದಲ್ಲಿ – 9
ತಾಲೂಕು ಮಟ್ಟದಲ್ಲಿ – 71
ಜಿಲ್ಲಾ ಮಟ್ಟದಲ್ಲಿ – 112
ರಾಜ್ಯ ಮಟ್ಟದಲ್ಲಿ – 69
ಕೇಂದ್ರದಲ್ಲಿ – 2

14. ಪಕ್ಷದ ಪತ್ರಿಕೆಗಳನ್ನು ಓದುವವರು
ಜನಶಕ್ತಿ – 212
ಪಿಡಿ – 30
ಏನೂ ಬರೆಯದೇ ಇರುವವರು – 39

15. ಜೈಲು ವಾಸ :
1 ದಿನ ಜೈಲು ಅನುಭವ – 19
2 ದಿನ ಜೈಲು ಅನುಭವ – 18
3 ದಿನ ಜೈಲು ಅನುಭವ – 12
4 ರಿಂದ 8 ದಿನಗಳು – 32
9 ರಿಂದ 15 ದಿನಗಳು – 11
ಒಂದು ತಿಂಗಳ ಕಾಲ – 5
6 ತಿಂಗಳು –1
ಕಾ. ಜಿ.ವಿ. ಶ್ರೀರಾಮರೆಡ್ಡಿ
1 ವರ್ಷ 2 ತಿಂಗಳು – 1
ಕಾ. ವಿಜೆಕೆ ನಾಯರ್
16 ವರ್ಷ 3 ತಿಂಗಳು –1
ಕಾ. ಆರ್. ಶ್ರೀನಿವಾಸ್

16. ಭೂಗತ ಜೀವನ :
9 ತಿಂಗಳು – ಕಾಂ. ಜಿ.ವಿ.ಶ್ರೀರಾಮರೆಡ್ಡಿ
25 ದಿನಗಳು – 1
10 ದಿನಗಳು – 1



ಸಾರಾಂಶ:
ಮಹಿಳೆಯರ ಪ್ರಮಾಣ ಪ್ರತಿನಿಧಿಗಳಲ್ಲಿ 19% ಮತ್ತು ವೀಕ್ಷಕರಲ್ಲಿ 14%.
ಒಟ್ಟು 39% ಪಕ್ಷಕ್ಕಾಗಿ ಪೂರ್ಣಾವಧಿ ಶ್ರಮಿಸುತ್ತಿರುವವರು,
64% ಪ್ರತಿನಿಧಿಗಳು ಮತ್ತು ವೀಕ್ಷಕರು ಕಾರ್ಮಿಕ ವರ್ಗ, ಬಡರೈತರು ಅಥವ ಕೃಷಿ ಕೂಲಿಕಾರ ವಿಭಾಗಗಳಿಂದ ಬಂದವರು,
24% ಪರಿಶಿಷ್ಟ ಜಾತಿ/ಬುಡಕಟ್ಟುಗಳಿಗೆ ಸೇರಿದವರು,
30% ಇತರ ಹಿಂದುಳಿದ ವರ್ಗಗಳಿಂದ ಮತ್ತು
7.5% ಅಲ್ಪಸಂಖ್ಯಾತ ವಿಭಾಗಗಳಿಂದ ಬಂದವರು.
2000ದ ನಂತರ ಪಕ್ಷವನ್ನು ಸೇರಿದ ಪ್ರತಿನಿಧಿ/ವೀಕ್ಷಕರ ಪ್ರಮಾಣ 40%.
50ವರ್ಷದ ಕೆಳಗಿರುವವರ ಪ್ರಮಾಣ ಸುಮಾರು 40%



ನಿರಂಕುಶ ವ್ಯವಸ್ಥೆಯಾಗುತ್ತಿರುವ ಆಧಾರ್ ಕಡ್ಡಾಯ ಕೊನೆಗಾಣಿಸಿ



ಆಧಾರ್ ಒಂದು ಸರ್ವಾಧಿಕಾರಶಾಹಿ ಸರ್ಕಾರದ ಕೈಗಳಲ್ಲಿ ದಮನದ ಮತ್ತೊಂದು ಅಸ್ತ್ರವಾಗುತ್ತಿದೆ. ಕಳೆದ 5 ವರ್ಷಗಳಿಂದ ಇದರ ವಿರುದ್ಧ ಹೂಡಿರುವ ಅರ್ಜಿಗಳು ಸುಪ್ರೀಂ ಕೋರ್ಟ್ ಮುಂದೆ ಬಾಕಿಯಾಗುಳಿದಿವೆ. ನ್ಯಾಯಾಲಯ ಈ ಜೀವನ್ಮರಣ ಪ್ರಶ್ನೆಯನ್ನು ಪರಿಶೀಲಿಸುವಲ್ಲಿ ಉದಾಸೀನವಾಗಿದೆ. ಈ ಅವಧಿಯಲ್ಲಿ ಸರ್ಕಾರ ಆಧಾರನ್ನು ಒಂದು ನಿರಂಕುಶ, ಕಡ್ಡಾಯ ವ್ಯವಸ್ಥೆಯಾಗಿ ಮಾಡುವತ್ತ ಮುಂದೊತ್ತಿಕೊಂಡು ಬಂದಿದೆ. ಈ ಗರಜಿಸಿರುವ ಐವರು ನ್ಯಾಯಾಧೀಶರ ಸಂವಿಧಾನ ಪೀಠ ಈ ವಿಷಯದಲ್ಲಿ ಸಾಧ್ಯವಾದಷ್ಟು ಬೇಗನೇ ತೀರ್ಪು ಕೊಡಬೇಕಾಗಿದೆ. ಏಕೆಂದರೆ ಇದು ಜನಗಳಿಗೆ ಮತ್ತು ದೇಶದಲ್ಲಿ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳಿಗೆ ಒಂದು ಜೀವನ್ಮರಣ ಸಂಗತಿಯಾಗಿದೆ.

*** ಪ್ರಕಾಶ್‌ಕಾರಟ್**

"ಟ್ರಿಬ್ಯೂನ್" ಪತ್ರಿಕೆ ಜನವರಿ 4 ರಂದು ಪ್ರಕಟಿಸಿದ ತನಿಖಾ ವರದಿಯಲ್ಲಿ ಹೇಗೆ ತನ್ನ ವರದಿಗಾರರಿಗೆ 100 ಕೋಟಿ ಆಧಾರ್ ಸಂಖ್ಯೆಗಳ ವಿವರಗಳು ಸುಲಭದಲ್ಲಿ ಲಭ್ಯವಾದವು ಎಂದು ಪ್ರಕಟಿಸಿತು. ಅವರು 500 ರೂ. ಪೇಟಿಎಂ ಮುಖಾಂತರ ಪಾವತಿಸಿದಾಗ ಒಂದು ಗೇಟ್‌ವೇ ಸೃಷ್ಟಿಯಾಗಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆದರು. ಅದನ್ನು ಬಳಸಿ ಆಕೆ 'ಭಾರತದ ವಿಶಿಷ್ಟ ಗುರುತು ಪ್ರಾಧಿಕಾರ' (ಯುಐಡಿಎಐ)ನಲ್ಲಿ ಅಂದರೆ ದಾಖಲಿಸಿಕೊಂಡ ಯಾವುದೇ ವ್ಯಕ್ತಿಯ ಹೆಸರು, ಪೋಟೊ, ದೂರವಾಣಿ ಸಂಖ್ಯೆ ಇಮೇಲ್ ಪಡೆಯುವುದ ಸಾಧ್ಯವಾಗಿದೆ.

ಬಯೋಮೆಟ್ರಿಕ್(ಬೆರಳುಗಳು, ಕಣ್ಣುರೆಪ್ಪೆ ಮುಂತಾದ ದೈಹಿಕ) ಮಾಹಿತಿ ಲಭ್ಯವಾಗದಿದ್ದರತೀ ಸ್ಫೋಟಕ ಪ್ರಕಟಣೆ ತಮ್ಮ ಅಧಾರ್ ಮಾಹಿತಿಗಳು ಅಭೇದ್ಯ ಎಂಬ ಯುಐಎಡಿಐ ಮತ್ತು ಕೇಂದ್ರ ಸರ್ಕಾರದ ನಿಲುವು ಸುಳ್ಳೆಂದು ಸಾಬೀತು ಮಾಡಿದೆ.

ಯುಪಿಎ ಸರ್ಕಾರ ಈ ಆಧಾರ್ ಯೋಜನೆಯನ್ನು ಪ್ರಾರಂಭಿಸಿತು. ಆಗಲೇ ಸಿಪಿಐ(ಎಂ) ಈ ವಿಷಯದಲ್ಲಿ ಹಲವಾರು ಆಕ್ಷೇಪಗಳನ್ನು ಎತ್ತಿತ್ತು. ಅವುಗಳಲ್ಲಿ ಒಂದು, ಎರಡು ಅಮೆರಿಕನ್ ಕಂಪನಿಗಳು ಇದಕ್ಕೆ ಬೇಕಾದ ತಂತ್ರಾಂಶ ವಿನ್ಯಾಸವನ್ನು ಸಿದ್ಧಪಡಿಸಿದ್ದು ಮತ್ತು ಅವುಗಳೊಂದಿಗಿನ ಕಾಂಟ್ರಾಕ್ಟ್ ಪ್ರಕಾರ ಆ ಸಂಸ್ಥೆಗಳಿಗೆ ಸಂಗ್ರಹಿಸಿದ್ದ ಎಲ್ಲ ಮಾಹಿತಿಕೋಶಲಭ್ಯವಾಗಿರುತ್ತದೆ. ಆದ್ದರಿಂದ ಈಗಾಗಲೇ ಆಧಾರ್ ಕಾರ್ಡುದಾರರ ಮಾಹಿತಿಕೋಶ ಅಮೇರಿಕನ್ ಭದ್ರತಾ ಸಂಸ್ಥೆಗಳೊಂದಿಗೆ ಸಂಪರ್ಕ ಇರುವ ಈ ಎರಡು ಅಮೆರಿಕನ್ ಕಂಪನಿಗಳಿಗೆ ಲಭ್ಯವಾಗಿದೆ.

ಈ ರೀತಿ ಸಂಗ್ರಹಿಸಿದ ಬೃಹತ್ ಪ್ರಮಾಣದ ಮಾಹಿತಿಕೋಶವನ್ನು ಖಾಸಗಿ ವಾಣಿಜ್ಯ ಹಿತಾಸಕ್ತಿಗಳಿಗೆ ಬಳಕೆಗೆ ದೊರೆಯುತ್ತದೆ ಎಂಬುದು ಮತ್ತೊಂದು ಆಕ್ಷೇಪಣೆ. ಈಗಾಗಲೇ ಸರ್ಕಾರದ ವೆಬ್ ಸೈಟ್‌ಗಳಲ್ಲಿ ಆಧಾರ್ ವಿವರಗಳು ಕಾಣಿಸುತ್ತಿರುವ ಹಲವಾರು ನಿದರ್ಶನಗಳಿವೆ. ಟ್ರಿಬ್ಯೂನ್ ತನಿಖಾ ವರದಿ 'ಆಧಾರ್' ಭದ್ರತಾ ವ್ಯವಸ್ಥೆಯನ್ನು ಎಷ್ಟು ಸುಲಭವಾಗಿ ಬೇಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದೆ.

ಅಧಾರ್ ಬಯೋಮೆಟ್ರಿಕ್ ಮಾಹಿತಿಯ ದುರುಪಯೋಗವಾಗಿರುವ ಇನ್ನೊಂದು ಆಘಾತಕಾರಿ ನಿದರ್ಶನ ಕಳೆದ ತಿಂಗಳು ಹೊರಬಂದಿದೆ. 'ಏರ್‌ಟೆಲ್' ದೂರವಾಣಿ ನೆಟ್‌ವರ್ಕ್ ಸಂಸ್ಥೆಗೆ ಅದರ ಗ್ರಾಹಕರ ಮೊಬೈಲ್‌ಗಳನ್ನು ಅವರ ಆಧಾರ್ ಸಂಖ್ಯೆಯೊಂದಿಗೆ ಜೋಡಿಸಲು ಅಧಿಕಾರ ನೀಡಲಾಗಿತ್ತು. ಅದು ಹಾಗೆ ಮಾಡುವಾಗಲೇ ಗ್ರಾಹಕರ ಒಪ್ಪಿಗೆಯಿಲ್ಲದೇ 'ಏರಟೆಲ್ ಪೇಮೆಂಟ್ ಬ್ಯಾಂಕ್'ನಲ್ಲಿ ಖಾತೆಯನ್ನು ತೆರೆಯಲು ದೊಡ್ಡ ಪ್ರಮಾಣದಲ್ಲಿ ದುರುಪಯೋಗ ಮಾಡಿಕೊಂಡಿದೆ. ಫಲಾನುಭವಿಗಳ ಖಾತೆಗೆ ನೇರ ಪಾವತಿ ವ್ಯವಸ್ಥೆಯಲ್ಲಿ ಸಬಿಸಿಡಿಗಳನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ಈಗಿರುವ ನಿಯಮಗಳ ಪ್ರಕಾರ ಪ್ರಕಾರ ಗ್ಯಾಸ್ ಸಿಲಿಂಡರ್‌ಗೆ ಸಿಗಬೇಕಿರುವ ಸಬ್ಸಿಡಿ ಮುಂತಾದವುಗಳನ್ನು ಅವರ ಹೆಸರಿನಲ್ಲಿ ತೆರೆದ ಇತ್ತೀಚಿನ ಬ್ಯಾಂಕಿನ ಖಾತೆಗೆ ಸಂದಾಯ ಮಾಡಲಾಗುತ್ತಿದೆ.

ಈ ಪ್ರಕಾರ ಏರಟೆಲ್ ಪೇಮೆಂಟ್ ಬ್ಯಾಂಕ್ ಇಂತಹ ಸಬ್ಸಿಡಿಗಳಿಂದ 190 ಕೋಟಿ ರೂ. ಹಣವನ್ನು ತನ್ನ ಗ್ರಾಹಕರ ಬ್ಯಾಂಕ್ ಖಾತೆಗಳಿಂದ ಸಂಗ್ರಹಿಸಿದೆ. ಇದು ಗ್ರಾಹಕರು ತಮ್ಮ ಮಾಮೂಲಿ ಖಾತೆಗೆ ಬರಬೇಕಿದ್ದ ಸಬ್ಸಿಡಿ ಸಂದಾಯವಾಗದಿದ್ದಾಗ ಬೆಳಕಿಗೆ ಬಂದಿರುತ್ತದೆ. ವಿಶಿಷ್ಟ ಗುರುತು ಪ್ರಾಧಿಕಾರ ಈಗ ಏರಟೆಲ್ ಪೇಮೆಂಟ್ ಬ್ಯಾಂಕ್ ಅಮಾನತ್ತುಗೊಳಿಸಿ 2.5 ಕೋಟಿ ರೂ. ದಂಡವನ್ನು ವಿಧಿಸಿದೆ. ಆದರೆ ಈ ಮೋಸದ ಪ್ರಮಾಣವನ್ನು ಗುರುತು ಪ್ರಾಧಿಕಾರ ಕನಿಷ್ಟಕ್ಕಿಳಿಸಿದೆ.

ಸಿಪಿಐ(ಎಂ) ಮೊದಲಿಂದಲೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ರೇಷನ್, ಸಾಮಾಜಿಕ ಮತ್ತು ಸಾಮಾಜಿಕ ಭದ್ರತಾ ಸೌಕರ್ಯಗಳಿಗೆ ಆಧಾರ್ ಕಡ್ಡಾಯಗೊಳಿಸುವುದನ್ನು ತೀವ್ರವಾಗಿ ವಿರೋಧಿಸುತ್ತ ಬಂದಿದೆ. ರೇಷನ್ ಸಾಮಗ್ರಿಗಳನ್ನು ಇದರಲ್ಲಿ ಬಯೋ ಮೆಟ್ರಿಕ್ ದಾಖಲಾತಿಯ ಮೂಲಕವೇ ಪಡೆಯಬೇಕಿದೆ. ರಾಜಸ್ಥಾನ್, ಜಾರ್ಖಂಡ್, ತೆಲಂಗಾಣದಲ್ಲಿ ಬಯೋಮೆಟ್ರಿಕ್ ಕಡ್ಡಾಯಗೊಳಿಸಿರುವುದರಿಂದ ಲಕ್ಷಾಂತರ ಕುಟುಂಬಗಳು ರೇಷನ್ ಪಡೆಯುವುದರಿಂದ ವಂಚಿತರಾಗಿದ್ದಾರೆ. ರೇಷನ್ ಅಂಗಡಿಗಳಲ್ಲಿ ಬೆರಳಚ್ಚು ಗುರುತಿಸುವ ಯಂತ್ರಗಳು ಕೆಲಸ ಮಾಡದಿರುವುದೇ ಇದಕ್ಕೆ ಕಾರಣವಾಗಿದೆ. ಹಲವಾರು ಪ್ರಕರಣಗಳಲ್ಲಿ ರೇಷನ್ ಕಾರ್ಡ್‌ಗಳನ್ನು ಆಧಾರನೊಂದಿಗೆ ಜೋಡಿಸಿರುವುದಿಲ್ಲ.

ಪರಿಣಾಮವಾಗಿ ಜಾರ್ಖಂಡ್‌ನ 11 ವರ್ಷದ ಸಂತೋಷಿ ಕುಮಾರಿ ಹಸಿವಿನಿಂದ ಸತ್ತ ದಾರುಣ ಘಟನೆ ನಡೆದಿದೆ. ಉತ್ತರಪ್ರದೇಶ ಮತ್ತಿತರ ಕಡೆಗಳಿಂದ ಇಂತಹ ಸಾವುಗಳ ಇತರ ವರದಿಗಳೂ ಬಂದಿವೆ. ಹೀಗೆ ರೇಶನ್‌ಗಾಗಿ ಆಧಾರ ಕಡ್ಡಾಯ ದೇಶದ ಬಡ ನಾಗರಿಕರ ಆಹಾರ ಭದ್ರತೆಗೆ ಮಾರಕವಾಗಿರುತ್ತದೆ.

ಸರ್ಕಾರ ಈಗ ಆಧಾರ್ ಒತ್ತಾಯವನ್ನು ಜೀವನದ ಎಲ್ಲ ವಲಯಗಳಿಗೆ, ಹುಟ್ಟು, ಸಾವು, ನೋಂದಣಿಗೂ ವಿಸ್ತರಿಸುತ್ತಿದೆ. ಇದು ಎಂತಹ ಮಟ್ಟ ಮುಟ್ಟಿದೆಯೆಂದರೆ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಯನ್ನು ದಾಖಲು ಮಾಡಿಕೊಳ್ಳಲು ಕೂಡ ಆಧಾರ್ ಕಾರ್ಡ್‌ಕೇಳುತ್ತಾರೆ. ಆಧಾರ್ ಗುರುತು ಇಲ್ಲದಿದ್ದಲ್ಲಿ ವ್ಯಕ್ತಿಗಳು ನಾಗರಿಕರಾಗಿ ಉಳಿಯುವುದಿಲ್ಲ, ಅಸ್ತಿತ್ವ ರಹಿತರಾಗುತ್ತಾರೆ.

ಆಧಾರ್ ಒಂದು ಸರ್ವಾಧಿಕಾರಶಾಹಿ ಸರ್ಕಾರದ ಕೈಗಳಲ್ಲಿ ದಮನದ ಮತ್ತೊಂದು ಅಸ್ತ್ರವಾಗುತ್ತದೆ. ನಾಗರೀಕರ ಖಾಸಗಿತನ ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾಡಿ ಅವರ ಮೇಲೆ ಮೇಲೆ ನಿಗಾ ಇಡಲು ಸೌಕರ್ಯ ಮಾಡಿಕೊಡುತ್ತದೆ.

ಸರ್ಕಾರ ಮತ್ತು ವಿಶಿಷ್ಠ ಗುರುತು ಪ್ರಾಧಿಕಾರದ ಧೋರಣೆ ಟ್ರಿಬ್ಯೂನ್ ಪತ್ರಿಕೆ ವರದಿಗಾರರ ಮೇಲೆ ಆಧಾರ್ ಭದ್ರತೆಯನನು ಬೇಧಿಸಿದರೆಂದು ಮೊಕದ್ದಮೆ ದಾಖಲಿಸಿರುವುದರಿಂದ ವ್ಯಕ್ತವಾಗುತ್ತದೆ.

ಆಧಾರ್ ದೋಷಪೂರ್ಣವಾದ ಅಪರಿಪೂರ್ಣ ವ್ಯವಸ್ಥೆ ಎಂದು ಒಪ್ಪಿಕೊಳ್ಳುವುದರ ಬದಲು ಅದು ಸಂದೇಶವಾಹಕರ ಬೇಟೆಗೇ ಇಳಿದಿವೆ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡುತ್ತಿವೆ.

ಈ ಕುರುಡುಗಲ್ಲಿಯಿಂದ ಹೊರಬರುವ ಏಕೈಕ ದಾರಿಯೆಂದರೆ ಎಲ್ಲ ಮೂಲಭೂತ ಸೇವೆಗಳಿಗೂ ಆಧಾರ್ ಕಡ್ಡಾಯ ಮಾಡುವುದನ್ನು ನಿಲ್ಲಿಸುವುದು. ಸರ್ಕಾರ ಬ್ಯಾಂಕ್ ಖಾತೆಗಳಿಗೂ ಮತ್ತು ಮೊಬೈಲ್‌ಗೂ ಆಧಾರ ಕಡ್ಡಾಯಗೊಳಿಸಿರುವುದನ್ನು ಹಿಂಪಡೆಯಬೇಕು.

ಕಳೆದ 5 ವರ್ಷಗಳಿಂದ ಆಧಾರ್ ವಿರುದ್ಧ ಹೂಡಿರುವ ಅರ್ಜಿಗಳು ಸುಪ್ರೀಂ ಕೋರ್ಟ್ ಮುಂದೆ ಬಾಕಿಯಾಗುಳಿದಿವೆ. ನ್ಯಾಯಾಲಯ ಈ ಜೀವನ್ಮರಣ ಪ್ರಶ್ನೆಯನ್ನು ಪರಿಶೀಲಿಸುವಲ್ಲಿ ಉದಾಸೀನವಾಗಿದೆ. ಈ ಅವಧಿಯಲ್ಲಿ ಸರ್ಕಾರ ಆಧಾರನ್ನು ಒಂದು ನಿರಂಕುಶ, ಕಡ್ಡಾಯ ವ್ಯವಸ್ಥೆಯಾಗಿ ಮಾಡುವತ್ತ ಮುಂದೊತ್ತಿಕೊಂಡು ಬಂದಿದೆ. ಒಂದು ಐವರು ನ್ಯಾಯಾಧೀಶರ ಸಂವಿಧಾನ ಪೀಠವನ್ನು ನವೆಂಬರ್ 2017 ರಲ್ಲಿ ರಚಿಸಲಾಗಿದೆ. ಅದೀಗ ಅರ್ಜಿಗಳ ವಿಚಾರಣೆಯನ್ನು ನಡೆಸುತ್ತಿದೆ. ನ್ಯಾಯಾಲಯ ಈ ವಿಷಯದಲ್ಲಿ ಸಾಧ್ಯವಾದಷ್ಟು ಬೇಗನೇ ತೀರ್ಪು ಕೊಡಬೇಕಾಗಿದೆ. ಏಕೆಂದರೆ ಇದು ಜನಗಳಿಗೆ ಮತ್ತು ದೇಶದಲ್ಲಿ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳಿಗೆ ಒಂದು ಜೀವನ್ಮರಣ ಸಂಗತಿಯಾಗಿದೆ.

ಅನು: ಎಂ.ಜಿ.

ಆಧಾರ್ ದುರ್ಬಳಕೆ: ಎಫ್‌ಐಆರ್‌ಗೆ ಖಂಡನೆ, ಪತ್ರಕರ್ತರ ಪ್ರಶ್ನೆ– ಯುಐಡಿಎಐ ಸಂದೇಶವಾಹಕರನ್ನೇ ಬೇಟೆಯಾಡುತ್ತಿರುವುದೇಕೆ?

ಆಧಾರ್ ವ್ಯವಸ್ಥೆಯಲ್ಲಿನ ಸೋರಿಕೆಗಳನ್ನು ಬಯಲಿಗೆಳೆದಿರುವ ಚಂಡೀಗಢದ ಪತ್ರಿಕೆ 'ಟ್ರಿಬ್ಯೂನ್'ನ ವರದಿಗಾರರಾದ ರಚನಾ ಖೈರ ಮತ್ತು ಆಕೆಗೆ ಮಾಹಿತಿ ನೀಡಿದವರ ಮೇಲೆ ಎಫ್‌ಐಆರ್ ಹಾಕಿರುವುದನ್ನು ರಾಷ್ಟ್ರೀಯ ಪತ್ರಕರ್ತರ ಮೈತ್ರಿಕೂಟ ಮತ್ತು ದಿಲ್ಲಿ ಪತ್ರಕರ್ತರ ಸಂಘ ಬಲವಾಗಿ ಖಂಡಿಸಿದೆ. ನಿಜ ಹೇಳಬೇಕೆಂದರೆ, ಯುಐಡಿಎಐ(ಭಾರತದ ವಿಶಿಷ್ಟ ಗುರುತು ಪ್ರಾಧಿಕಾರ) ಅಭೇಧ್ಯ ಎಂದು ಹೇಳುತ್ತಿರುವ ಆಧಾರ್ ಮಾಹಿತಿಗಳನ್ನು ಮಧ್ಯವರ್ತಿಗಳು ಮತ್ತು ಮಾಹಿತಿ ಕದಿಯುವವರು ಎಷ್ಟು ಸುಲಭವಾಗಿ ಪಡೆಯಬಲ್ಲರು, ಅದೂ ಕೇವಲ 500ರೂ. ಕೊಟ್ಟು ಎಂಬುದನ್ನು ತನಿಖೆ ಮಾಡಿ ಬೆಳಕಿಗೆ ತಂದುದಕ್ಕೆ ಆಕೆಯನ್ನು ಪ್ರಶಂಸಿಸಬೇಕಾಗಿದೆ ಎಂದು ಅವು ಹೇಳಿವೆ. ಹೀಗೆ ವ್ಯಕ್ತಿಗಳ ವಿಳಾಸಗಳು, ಮೊಬೈಲ್ ನಂಬರುಗಳು, ಇ–ಮೇಲ್ ವಿಳಾಸಗಳು, ಮತ್ತು ಫೋಟೋಗಳನ್ನು ಸುಲಭವಾಗಿ ಕೊಡಿಸಲು ಸಾಧ್ಯವಾಗುತ್ತಿರುವುದು ಜನಗಳ ಖಾಸಗಿತನಕ್ಕೆ ಈ ಆಧಾರ್ ವ್ಯವಸ್ಥೆಯ ಮೂಲಕ ಅತಿಕ್ರಮಣದ ಪ್ರಶ್ನೆಯನ್ನು ಎತ್ತಿವೆ ಎಂದು ಈ ಪತ್ರಕರ್ತರ ವೇದಿಕೆಗಳು ಹೇಳಿವೆ.



ರಚನಾ ಖೈರ ಮತ್ತು ಟ್ರಿಬ್ಯೂನ್ ಪತ್ರಿಕೆ ಈ ಮೂಲಕ ರಾಷ್ಟ್ರಸೇವೆ ಮಾಡಿದ್ದಾರೆ, ಅವರ ಮೇಲೆ ಎಫ್‌ಐಆರ್‌ನ್ನು ಯುಐಡಿಎಐ ಎಫ್‌ಐಆರ್ ಹಾಕಿರುವುದು ಅದರ ದ್ವೇಷಸಾಧಕತನವನ್ನು ತೋರಿಸುತ್ತದೆ ಎಂದಿರುವ ಪತ್ರಕರ್ತರು ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯೇ ಆಗಿದೆ ಎಂದು ಹೇಳಿದ್ದಾರೆ. ಪತ್ರಕರ್ತರ, ಪತ್ರಿಕಾ ಸಂಪಾದಕರುಗಳ ಇತರರ ಹಲವು ಸಂಘಟನೆಗಳು ಇದನ್ನು ಖಂಡಿಸಿರುವುದರ ಬಗ್ಗೆ ಈ ಎರಡು ಸಂಘಟನೆಗಳು ಹರ್ಷ ವ್ಯಕ್ತಪಡಿಸಿವೆ.

ಸರ್ವಾಧಿಕಾರಶಾಹಿ ಅಹಂಕಾರ–ಸಿಐಟಿಯು ಖಂಡನೆ

ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಕೂಡ ಈ ಪತ್ರಕರ್ತೆಯನ್ನು ಪ್ರಶಂಸಿಸುವ ಬದಲು ಎಫ್‌ಐಆರ್ ಹಾಕಿರುವುದನ್ನು ಬಲವಾಗಿ ಖಂಡಿಸಿದೆ. ಇದು ಸರಕಾರದ ಸರ್ವಾಧಿಕಾರಶಾಹಿ ಅಹಂಕಾರವನ್ನು ತೋರಿಸುತ್ತದೆ ಎಂದು ಅದು ಹೇಳಿದೆ. ಆಧಾರ್ ವ್ಯವಸ್ಥೆಯ ಈ ದೋಷಗಳನ್ನು, ದೌರ್ಬಲ್ಯಗಳನ್ನು ಈ ಹಿಂದೆಯೂ ಹಲವು ಸಂಸ್ಥೆಗಳು ಎತ್ತಿ ತೋರಿವೆ, ಸಂಸತ್ತಿನಲ್ಲೂ ಇದನ್ನು ಎತ್ತಲಾಗಿದೆ. ಆದರೂ **ಈ ದೋಷಗಳನ್ನು ಮತ್ತು ಕೊರತೆಗಳನ್ನು ಗುರುತಿಸಲೂ ಸರಕಾರದ ಅಹಂಕಾರ ಅಡ್ಡ ಬರುತ್ತಿರುವುದು, ಯಾವುದೇ ಸರಿಪಡಿಕೆ ಕ್ರಮವನ್ನು ಕೈಗೊಳ್ಳದಿರುವುದು, ಅದು ಕೂಡ ವಿವಿಧ ಪಟ್ಟಭದ್ರರಿಗೆ ಲಾಭವಾಗಲಿ ಎಂದು ಈ ಸೋರಿಕೆಯ ಅಂಶಗಳನ್ನು ಉಳಿಸಿಕೊಳ್ಳಬಯಸುತ್ತದೆಯೋ ಎಂಬ ಗಂಭೀರ ಸಂದೇಹವನ್ನು ಉಂಟು ಮಾಡುತ್ತಿದೆ ಎಂದು ಸಿಐಟಿಯು ಹೇಳಿದೆ.** ತಕ್ಷಣವೇ ಈ ಎಫ್‌ಐಆರ್‌ಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಈ ನಡುವೆ ಯುಐಡಿಎಐ ಒಂದು ವರ್ಚುವಲ್ ನಂಬರ್ ಪ್ರತಿ ಆಧಾರ್ ಧಾರಕನಿಗೆ ಕೊಡುವುದಾಗಿ, ಅದು ಇದನ್ನು ಯಾರೂ ಬೇಧಿಸದಂತೆ ಮಾಡುತ್ತದೆ ಎಂದು ಹೇಳಿದೆ. ಈ ಮೂಲಕ ಅದು ಅಬೇಧ್ಯ ಎಂಬ ತನ್ನ ಮಾತನ್ನೇ ಹುಸಿಗೊಳಿಸಿದೆ, ಪತ್ರಕರ್ತರ ಮೇಲಿನ ಎಫ್‌ಐಆರ್ ಅರ್ಥಹೀನ ಎಂದು ತೋರಿಸಿಕೊಟ್ಟಿದೆ. ಎಫ್‌ಐಆರ್‌ಗೆ ಬೆದರದ ಪತ್ರಕರ್ತೆ ಇದು ಸಮುದ್ರ ಅಡಿಯಿರುವ ಹಿಮಗಡ್ಡೆಯ ತುದಿಯಷ್ಟೇ ಎಂದಿದ್ದಾರೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



22ನೇ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ

ಮೋದಿ–ಶಾ 'ಅಶ್ವಮೇಧ'ದ ಕುದುರೆಯನ್ನು ರೈತ–ಕಾರ್ಮಿಕರು ತಡೆಯಲಿದ್ದಾರೆ : ಯೆಚುರಿ



"ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಜೋಡಿ ಭ್ರಷ್ಟಾಚಾರವನ್ನು ಮುಚ್ಚಿಹಾಕುವ ಉದ್ದೇಶದಿಂದ ವಿರೋಧ ಪಕ್ಷಗಳನ್ನು ಸಂಪೂರ್ಣ ನಾಶ ಮಾಡಲು ಕೈಗೆತ್ತಿಕೊಂಡಿರುವ 'ಅಶ್ವಮೇಧ ಯಾಗದ ಕುದುರೆ'ಗೆ ಕಾರ್ಮಿಕರು ಮತ್ತು ರೈತರು ತಡೆಯೊಡ್ಡಲಿದ್ದಾರೆ' ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾಂ ಯೆಚುರಿ ಹೇಳಿದರು.

ಸಿಪಿಐ(ಎಂ) 22ನೇ ರಾಜ್ಯ ಸಮ್ಮೇಳನದ ಅಂಗವಾಗಿ ಮೂಡುಬಿದಿರೆಯ ಸ್ವರಾಜ್ ಮೈದಾನದಲ್ಲಿ "ಫಿಡೆಲ್ ಕ್ಯಾಸ್ಟ್ರೊ ನಗರ"ದಲ್ಲಿ ಜನವರಿ 2ರಂದು ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ನಡೆಯುತ್ತಿರುವ ಕಾರ್ಮಿಕ, ರೈತ, ವಿದ್ಯಾರ್ಥಿ ಚಳವಳಿಯನ್ನು ಕೇಂದ್ರ ಸರ್ಕಾರ ಹಗುರವಾಗಿ ಪರಿಗಣಿಸುತ್ತಿದೆ. ನಾವು ಚುನಾವಣೆ ಗೆಲ್ಲುತ್ತಿದ್ದೇವೆ ಎಂಬ ಅಹಂಕಾರವನ್ನು ಬಿಜೆಪಿ ಪ್ರದರ್ಶಿಸುತ್ತಿದೆ. ಈ ಅಶ್ವಮೇಧವನ್ನು ಯಾರೂ ತಡೆಯಲಾರರು ಎಂದು ಭಾವಿಸಿದ್ದರೆ ಅದು ಅವರ ಭ್ರಮೆ' ಎಂದರು. ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯನ್ನು ಅವಳಿ ಮಕ್ಕಳಾದ ಲವ ಮತ್ತು ಕುಶ ತಡೆದಿದ್ದರು. ಮೋದಿ–ಶಾ ಕುದುರೆಯನ್ನು ಇನ್ನೊಂದು ಅವಳಿಗಳು – ಕಾರ್ಮಿಕರು ಮತ್ತು ರೈತರು – ನಿಲ್ಲಿಸಲಿದ್ದಾರೆ. ಈ ಅವಳಿಗಳನ್ನು ಕುಡುಗೋಲು–ಸುತ್ತಿಗೆಯಲ್ಲಿ ಪ್ರತಿನಿಧೀಕರಿಸಿರುವ ಕೆಂಬಾವುಟದಲ್ಲಿ ಆ ಶಕ್ತಿ ಇದೆ ಎಂದು ಬಣ್ಣಿಸಿದರು. ಬಹಿರಂಗ ಸಭೆಗಿಂತ ಮೊದಲು ಆಕರ್ಷಕ ಮೆರವಣಿಗೆ ನಡೆದಿತ್ತು.



ಆಕರ್ಷಕ ಮೆರವಣಿಗೆ

ಜನವರಿ 2 ರಿಂದ 5ರವರೆಗೆ ಮೂಡುಬಿದಿರೆಯಲ್ಲಿ ನಡೆದ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಹಲವು ದಿನಗಳ ಮೊದಲೇ ಪಟ್ಟಣದ ಮುಖ್ಯ ಬೀದಿಗಳಲ್ಲಿ ಹಾಕಿದ ಕೆಂಪು ತೋರಣಗಳಿಂದ ಕೆಂಬಾವುಟಗಳಿಂದ, ಹಲವು ವೃತ್ತ ಚೌಕಗಳಲ್ಲಿ ಶೋಭಿಸುತ್ತಿದ್ದ ಘೋಷಣೆಗಳ ಕಮ್ಯುನಿಸ್ಟ್ ನಾಯಕರ ಪೋಸ್ಟರುಗಳು ಫ್ಲೆಕ್ಸ್ ಬ್ಯಾನರುಗಳಿಂದ ಕೆಂಪಾಗಿತ್ತು. ಜನವರಿ 2ರಂದು ಸುಮಾರು 11ಗಂಟೆಗೆ ಪಟ್ಟಣದ ಹೊರವಲಯದಲ್ಲಿರುವ ಅಲಂಗಾರ್ ಎಂಬಲ್ಲಿಂದ ಬಹಿರಂಗ ಸಭೆ ನಡೆಯುವ ಸ್ವರಾಜ್ ಮೈದಾನದತ್ತ ಮೆರವಣಿಗೆ ಆರಂಭವಾಯಿತು. ಮೊದಲಿಗೆ ಬ್ಯಾಂಡ್ ಸೆಟ್, ಅದರ ಹಿಂದೆ 22ನೇ ಸಮ್ಮೇಳನ ಪ್ರತಿನಿಧಿಸುವ 22 ಧ್ವಜಗಳನ್ನು ಹಿಡಿದ ಕೆಂಪು ಸ್ವಯಂಸೇವಕರು, ಅವರ ಹಿಂದೆ ಸಮ್ಮೇಳನದ ಪ್ರಧಾನ ಬ್ಯಾನರ್ ಹಿಡಿದ ರಾಜ್ಯ ನಾಯಕತ್ವ ಮತ್ತು ರಾಜ್ಯ ಸಮ್ಮೇಳನದ ಪ್ರತಿನಿಧಿಗಳು, ಆ ಮೇಲೆ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರು, ಸ್ವಯಂಸೇವಿಕೆಯರು, ಇನ್ನೊಂದು ಮಹಿಳಾ ಬ್ಯಾಂಡ್, ಮೂಡಬಿದಿರೆ ತಾಲೂಕು ಸಮಿತಿಯ ಬ್ಯಾನರ್ ಹಿಂದೆ ತಾಲೂಕಿನ ದ.ಕ. ಜಿಲ್ಲೆಯ ಸಾವಿರಾರು ಸಂಗಾತಿಗಳು ಹೆಜ್ಜೆ ಹಾಕಿದರು. ಅಲ್ಲಲ್ಲಿ ಸಂಗಾತಿಗಳು ಮೆರವಣಿಗೆಯನ್ನು ಸೇರಿಕೊಂಡರು. ಮೆರವಣಿಗೆಯಲ್ಲಿ ಪಾಲುಗೊಂಡ ಕೀಲು ಕುದುರೆ ವೇಷಧಾರಿಗಳೂ ಗಮನ ಸೆಳೆದರು.

ಕೆಂಪು ಸ್ವಯಂಸೇವಕರು, ಸ್ವಯಂಸೇವಿಕೆಯರು ಬ್ಯಾಂಡಿನ ಸಂಗೀತಕ್ಕೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತಿದ್ದರೆ, ಇತರ ಸಂಗಾತಿಗಳು ಸ್ಫೂರ್ತಿದಾಯಕ ಘೋಷಣೆಗಳನ್ನು ಹಾಕುತ್ತಿದ್ದರು. ಕೆಂಪು ಸ್ವಯಂಸೇವಕರು ಕೆಂಪು ಲುಂಗಿ ಮತ್ತು ಬಿಳಿ ಶರ್ಟು

ಪುಟ 12 ಕ್ಕೆ

ಮೊದಲು ನಾನು ಭಾರತೀಯ ಎನ್ನುವವರು ಜಾತ್ಯತೀತರು

ಕರ್ನಾಟಕದವರೇ ಆದ ಕೇಂದ್ರ ಸಚಿವರೊಬ್ಬರು ಜಾತ್ಯತೀತರ ವಂಶಪರಂಪರೆ, ಗುರುತಿನ ಬಗ್ಗೆ ಪ್ರಶ್ನಿಸಿದ್ದಾರೆ. ತಮ್ಮ ಧರ್ಮ, ಜಾತಿ, ಕುಲದ ಗುರುತುಗಳನ್ನು ಬದಿಗಿಟ್ಟು ಮೊದಲು ನಾನು ಭಾರತೀಯ ಎಂದು ಹೇಳುವವರೇ ಜಾತ್ಯತೀತರು. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಸಿಖ್, ಪಾರ್ಸಿ ಸೇರಿದಂತೆ ಯಾವುದೇ ಧರ್ಮವಿದ್ದರೂ ಜಾತ್ಯತೀತ ಮನಸ್ಸು ಭಾರತೀಯನೆಂದು ಹೇಳಿಕೊಳುವುದಕ್ಕೆ ತುಡಿಯುತ್ತಿರುತ್ತದೆ. ಕೋಮು ಧ್ರುವೀಕರಣಕ್ಕಾಗಿ ಇಂತಹ ಕುಚೋದ್ಯದ ಪ್ರಶ್ನೆಗಳನ್ನು ಎತ್ತುತ್ತಾರೆ. ಸಂವಿಧಾನದ ಹೆಸರಿನಲ್ಲಿ ಅಧಿಕಾರ ಸ್ವೀಕರಿಸಿ, ಅದನ್ನೇ ಬದಲಾಯಿಸುವ ಮಾತನಾಡುತ್ತಾರೆ.

– ಸೀತಾರಾಂ ಯೆಚುರಿ

ತ್ರಿವಳಿ ತಲಾಖ್

ನಿಜವಾಗಿಯೂ ಬೇಕಾಗಿರುವುದು (ತ್ರಿವಳಿ ತಲಾಖ್ ಸೇರಿದಂತೆ) ಬೇಕಾಬಿಟ್ಟಿ ಹೆಂಡತಿಯನ್ನು ತ್ಯಜಿಸುವ ಯಾವುದೇ ಗಂಡಸು (ಅವನು ಯಾವುದೇ ಧರ್ಮದವರಿರಲಿ) ಆಕೆಗೆ ಅಗತ್ಯ ಪರಿಹಾರ ಕೊಡುವಂತೆ ಮಾಡುವ ಕಾನೂನು. ಆದರೆ ಇಂತಹ ಕಾನೂನು ಮಾಡಿದರೆ ಸಮಸ್ಯೆ ಎಂದರೆ 'ಅತ್ಯಂತ ಉನ್ನತ ಮಟ್ಟದಲ್ಲಿ" ಇದರ ಜಾರಿ ಆರಂಭಿಸಬೇಕಾಗುತ್ತದೆ !

– ಸೀತಾರಾಂ ಯೆಚುರಿ

ನೇತಾ ಬೇಕಿಲ್ಲ, ನೀತಿ ಬೇಕು

ಭಾರತಕ್ಕೆ ಯಾರು ನಾಯಕರಾಗಬೇಕು ಎಂಬುದೇ ಈಗ ಹೆಚ್ಚು ಚರ್ಚೆಯಲ್ಲಿದೆ. ಆದರೆ, ದೇಶ ಬಲಿಷ್ಠವಾಗಿದೆ. ಭಾರತಕ್ಕೀಗ ನಾಯಕರು ಬೇಕಿಲ್ಲ. ಒಳ್ಳೆಯ ನೀತಿಗಳು ಬೇಕು. 'ನೇತಾ ನಹೀ, ನೀತಿ ಚಾಹಿಯೇ' ಎಂದು ನಾವು ಕೇಳಬೇಕು. ಜನರ ಪರವಾಗಿರುವ ಅಥವಾ ಜನರ ವಿರುದ್ಧವಾಗಿರುವ ನೀತಿಗಳ ಬಗ್ಗೆ ಹೆಚ್ಚು ಚರ್ಚೆ ಆಗಬೇಕು. ಬೆರಳೆಣಿಕೆಯ ವ್ಯಕ್ತಿಗಳ ಹೆಸರಿನಲ್ಲಿ ನಾಯಕತ್ವದ ಚರ್ಚೆ ಬೇಕಿಲ್ಲ.

– ಸೀತಾರಾಂ ಯೆಚುರಿ



22ನೇ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ......

ಪುಟ 11 ರಿಂದ



ತೊಟ್ಟದ್ದು ವಿಶೇಷವಾಗಿತ್ತು. ಈ ಶಿಸ್ತುಬದ್ಧ ಕೆಂಪು ಮೆರವಣಿಗೆ ಮೂಡಬಿದಿರೆಯ ಮುಖ್ಯ ಬೀದಿಗಳನ್ನು ಹಾದು ಹೋಗುತ್ತಿರುವಾಗ ರಸ್ತೆಯ ಇಕ್ಕೆಲಗಳಲ್ಲೂ ಜನ ಅಚ್ಚರಿಯಿಂದ ಗುಂಪುಕೂಡಿ ನೋಡುತ್ತಿದ್ದರು. ಮೂಡಬಿದಿರೆಯ ಜನ ಬಹುಶಃ ಇಷ್ಟು ಶಿಸ್ತುಬದ್ಧ ಕೆಂಪು ಮೆರವಣಿಗೆಯನ್ನು ಎಂದೂ ನೋಡೇ ಇರಲಿಲ್ಲ. ಮೆರವಣಿಗೆ ಸ್ವರಾಜ್ ಮೈದಾನದಲ್ಲಿದ್ದ "ಫಿಡೆಲ್ ಕ್ಯಾಸ್ಟ್ರೊ ನಗರ" ತಲುಪಿ ಬಹಿರಂಗ ಸಭೆಗೆ



ರಾಮನ ಗುಡಿ, ಚೋಮನ ಭೂಮಿ

ನೀವು ರಾಮನ ಗುಡಿಯ ಬಗ್ಗೆ ದ.ಕ. ಜಿಲ್ಲೆಯಲ್ಲಿ ದಶಕಗಳಿಂದ ಮಾತನಾಡುತ್ತಾ ಬಂದಿದ್ದೀರಿ? ಎಂದಾದರೂ ಇದೇ ಜಿಲ್ಲೆಯ ಚೋಮನ ಭೂಮಿ ಬಗ್ಗೆ ಚಿಂತಿಸಿದ್ದೀರಾ?

– ಜಿ.ವಿ. ಶ್ರೀರಾಮರೆಡ್ಡಿ

ತಯಾರಿ ಆರಂಭವಾಯಿತು. ಅಲ್ಲಿ ಆಗಲೇ ನೆರೆದಿದ್ದ ಜನರೊಂದಿಗೆ ಮೆರವಣಿಗೆಯಲ್ಲಿ ಬಂದ ಸಂಗಾತಿಗಳು ಸೇರಿದ್ದರು.

ಭಂಡತನವಾ ಧೈರ್ಯವಾ?!

ಕಾ. ಸೀತಾರಾಂ ಯೆಚುರಿ ಆಗಮಿಸುತ್ತಿದ್ದಂತೆ, ಬಹಿರಂಗ ಸಭೆ ಆರಂಭವಾಯಿತು. "ಹಿಂದುತ್ವದ ಪ್ರಯೋಗಶಾಲೆ ಎನ್ನಲಾಗಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ರಾಜ್ಯ ಸಮ್ಮೇಳನ ನಿಗದಿಯಾಗಿರುವುದನ್ನು ಕೇಳಿದ ದೆಹಲಿಯ ಕೆಲವರು, ಇದು ಭಂಡತನವಾ ಅಥವಾ ಧೈರ್ಯವಾ ಎಂದು ಕೇಳಿದ್ದರು. ಇದು ಧೈರ್ಯ. ಭಂಡತನವಲ್ಲ. ಕೋಮುವಾದಿಗಳ ಪ್ರಯೋಗಶಾಲೆಯಲ್ಲೇ ನಿಂತು ಅವರನ್ನು ಎದುರಿಸುವ ಶಕ್ತಿ ಸಿಪಿಐ(ಎಂ)ಗೆ ಇದೆ ಎಂದು ನಾನು ಹೇಳಿದೆ. ಹಿಂದೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭೇಟಿ ವಿರೋಧಿಸಿದಾಗಲೂ ಎದುರಿಸಿದ್ದೇವೆ. ಮುಂದೆಯೂ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎದುರಿಸುತ್ತೇವೆ' ಎಂದು ಕಾ. ಯೆಚುರಿ ತಮ್ಮ ಭಾಷಣ ಆರಂಭಿಸಿದರು.

ಭ್ರಷ್ಟರಿಗೆ ರಕ್ಷಣೆ:

ಭ್ರಷ್ಟಾಚಾರ ಮುಕ್ತ ಭಾರತ ನಿರ್ಮಾಣದ ಹೆಸರಿನಲ್ಲಿ ಮೋದಿ ಅಧಿಕಾರಕ್ಕೆ ಬಂದರು. ನಂತರ ಭ್ರಷ್ಟರಿಗೆ ರಕ್ಷಣೆ ನೀಡುವ ಕೆಲಸ ಮಾಡುತ್ತಿದ್ದಾರೆ. ಪನಾಮಾ ದಾಖಲೆಗಳಲ್ಲಿ ಹೆಸರಿದೆ ಎಂಬ ಕಾರಣಕ್ಕೆ ಪಾಕಿಸ್ತಾನದ ಪ್ರಧಾನಿ ರಾಜೀನಾಮೆ ನೀಡಿದರು. ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಗೆ ಸಂಬಂಧಿಸಿದ ಪನಾಮಾ ದಾಖಲೆಗಳಲ್ಲಿ ಮೋದಿಯ ಹೆಸರೂ ಇದೆ. ಅವರೇಕೆ ರಾಜೀನಾಮೆ ನೀಡುತ್ತಿಲ್ಲ ಎಂದು ಯೆಚುರಿ ಪ್ರಶ್ನಿಸಿದರು.

ಮಧ್ಯಪ್ರದೇಶದ ವ್ಯಾಪಂ ಹಗರಣ, ರಾಜಸ್ತಾನದ ಲಲಿತ್ ಮೋದಿ ಐಪಿಎಲ್ ಹಗರಣ, ಬಿಹಾರದ ಭೂ ಹಗರಣ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಪುತ್ರನ ಆಸ್ತಿಯಲ್ಲಿ ದಿಢೀರ್ ಏರಿಕೆ, ಭದ್ರತಾ ಸಲಹೆಗಾರ ಅಜಿತ್ ಢೋಬಾಲ್ ಮಗನ ಸಂಸ್ಥೆ ಅಕ್ರಮ ವಂತಿಗೆ ಸಂಗ್ರಹಿಸಿರುವುದು ಸೇರಿದಂತೆ ಮೂರು ವರ್ಷಗಳಲ್ಲಿ ಹೊರಬಂದ ಯಾವ ಭ್ರಷ್ಟಾಚಾರದ ಪ್ರಕರಣದ ಬಗ್ಗೆಯೂ ತನಿಖೆ ಆಗಿಲ್ಲ. ಭ್ರಷ್ಟಾಚಾರದ ವಿರುದ್ಧದ ಬದ್ಧತೆ ಎಲ್ಲಿ ಹೋಯಿತು ಎಂದು ಕೇಳಿದರು.

ಕಾನೂನು ರಚನೆಯಲ್ಲೂ ಪ್ರಚಾರ

'ಕಾನೂನು ರಚನೆ ಪ್ರಚಾರಕ್ಕಾಗಿ ಮಾಡಬೇಕಾದ ಕೆಲಸ ಅಲ್ಲವೇ ಅಲ್ಲ. ಅದು ಅತ್ಯಂತ ಗಂಭೀರವಾದ ಕೆಲಸ. ಆದರೆ, ಬಿಜೆಪಿ ಸರ್ಕಾರ ಉಳಿದೆಲ್ಲದರಲ್ಲೂ ಅತಿಯಾದ ಪ್ರಚಾರ ಬಯಸಿದಂತೆ ಕಾನೂನು ರಚನೆಯಲ್ಲೂ ಪ್ರಚಾರಕ್ಕಾಗಿ ಎದುರು ನೋಡುತ್ತಿದೆ' ಎಂದು ಯೆಚುರಿ ಟೀಕಿಸಿದರು.

ತ್ರಿವಳಿ ತಲಾಖ್ ನಿಷೇಧಿಸುವ ಮಸೂದೆಯನ್ನು ಅವಲೋಕಿಸಿದರೆ ಕೇಂದ್ರ ಸರ್ಕಾರ ಪ್ರಚಾರಕ್ಕಾಗಿ ಈ ಕೆಲಸ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಮದುವೆ ಒಂದು ಸಿವಿಲ್ ಒಪ್ಪಂದ. ಅದನ್ನು ಕ್ರಿಮಿನಲ್ ಅಪರಾಧವನ್ನಾಗಿಸುವ ತಪ್ಪನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಈ ಕುರಿತ ಗಂಭೀರ ಚರ್ಚೆಗೂ ಅವಕಾಶ ನೀಡಿಲ್ಲ. ಇದು ಬಿಜೆಪಿಯ ಕೋಮುವಾದಿ ರಾಜಕಾರಣದ ಭಾಗವೂ ಹೌದು ಎಂದರು.

'ತ್ರಿವಳಿ ತಲಾಖ್ ನಿಷೇಧಿಸುವುದನ್ನು ಸಿಪಿಎಂ ಎಷ್ಟೋ ವರ್ಷಗಳಿಂದ ಆಗ್ರಹಿಸಿದೆ. ಅದರ ಜತೆಯಲ್ಲೇ ಪರಿತ್ಯಕ್ತ ಮಹಿಳೆಯರು ಹಾಗೂ ಮಕ್ಕಳ ಭವಿಷ್ಯವನ್ನು ಭದ್ರಪಡಿಸುವ ಕೆಲಸವೂ ಆಗಬೇಕು. ಆದರೆ, ಈಗಿನ ಮಸೂದೆ ತಲಾಖ್ ನೀಡಿದ ಪತಿಯನ್ನು ಜೈಲಿಗೆ ಕಳಿಸುವುದಕ್ಕೆ ಸೀಮಿತವಾಗಿದೆ. ಪರಿತ್ಯಕ್ತ ಮಹಿಳೆ, ಮಕ್ಕಳ ಗತಿ ಏನು' ಎಂದು ಪ್ರಶ್ನಿಸಿದರು.

'ಮಹಿಳೆಯರು ಒಂಟಿಯಾಗಿ ಹಜ್ ಯಾತ್ರೆ ಕೈಗೊಳ್ಳಲು ಅವಕಾಶ ನೀಡುವುದಾಗಿ ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಕಟಿಸಿತು. ಮುಸ್ಲಿಂ ಮಹಿಳೆಯರ ಪರವಾಗಿ ಐತಿಹಾಸಿಕ ನಿರ್ಧಾರ ಕೈಗೊಂಡಿರುವುದಾಗಿ ಪ್ರಧಾನಿ ಬಡಾಯಿ ಕೊಚ್ಚಿಕೊಂಡರು. ಆದರೆ, ವಾಸ್ತವವಾಗಿ ಸೌದಿ ಅರೇಬಿಯಾ ಸರ್ಕಾರ 2015ರಲ್ಲೇ ಇಂತಹ ನಿರ್ಧಾರ ಕೈಗೊಂಡಿತ್ತು. ಅದನ್ನು ಮುಚ್ಚಿಟ್ಟು ಪ್ರಚಾರ ಪಡೆಯಲು ಪ್ರಧಾನಿ ಮೋದಿ ಹವಣಿಸಿದರು' ಎಂದು ಟೀಕಿಸಿದರು.

ಜನಸಾಮಾನ್ಯರ ಬದುಕು ಹೈರಾಣ

ಕೇಂದ್ರ ಸರ್ಕಾರ ಕೈಗೊಂಡ ನೋಟು ನಿಷೇಧ, ಸರಕು ಮತ್ತು ಜಿ.ಎಸ್.ಟಿ. ಜಾರಿಯಂತಹ ನಿರ್ಧಾರಗಳಿಂದ ಸಾಮಾನ್ಯ ಜನರ ಬದುಕು ಹೈರಾಣಾಗಿದೆ. ಆಳ ಸಮುದ್ರಕ್ಕೆ ಹೊಗಿ ಮೀನು ಹಿಡಿದು ತಂದವರು ಅದನ್ನು ಮಾರಾಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಹೊಣೆ ಹೊರಬೇಕಾದ ಆಡಳಿತ ಪಕ್ಷ ಕೋಮುವಾದಿ ಕಾರ್ಯಸೂಚಿಯ ಮೂಲಕ ಜನರ ದಿಕ್ಕು ತಪ್ಪಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

'ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ದೊಡ್ಡ ಬಂಡವಾಳಷಾಹಿಗಳ ಸಂಪತ್ತು, ಲಾಭ ಹೆಚ್ಚಿಸಲು ಪೂರಕವಾಗಿ ಕೆಲಸ ಮಾಡುತ್ತಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದ ಒಟ್ಟು ನಿವ್ವಳ ಉತ್ಪನ್ನದ (ಜಿಡಿಪಿ) ಶೇಕಡ 49ರಷ್ಟು ಶೇ 1ರಷ್ಟು ಜನರ ಬಳಿ ಇತ್ತು. ಈಗ ಜಿಡಿಪಿಯ ಶೇ 60ರಷ್ಟು ಶೇ 1ರಷ್ಟು ಜನರ ಬಳಿ ಇದೆ. ಕಾರ್ಪೊರೇಟ್ ಕಂಪೆನಿಗಳಿಗೆ ನೀಡಿದ್ದ 11 ಲಕ್ಷ ಕೋಟಿ ಸಾಲವನ್ನು ವಸೂಲಾಗದ ಸಾಲ ಎಂದು ಪರಿಗಣಿಸಲು ಕೇಂದ್ರ ಸರ್ಕಾರ ಹೊರಟಿದೆ' ಎಂದು ಹೇಳಿದರು.

ಈಗ ಸಾಮಾನ್ಯ ಜನರ ಸಂಪತ್ತಿಗೂ ಕೇಂದ್ರ ಸರ್ಕಾರ ಕೈ ಹಾಕಿದೆ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಖಾತೆ ಹೊಂದಿದ ಜನರ ರೂ. 1,700 ಕೋಟಿಯನ್ನು ಸರ್ಕಾರವೇ ಲೂಟಿ ಮಾಡಿದೆ ಎಂದು ಆರೋಪಿಸಿದರು.

ಏಕತೆ ಸಮಗ್ರತೆ ರಕ್ಷಿಸಲು ಕೆಂಬಾವುಟ ಸಶಕ್ತ

'ಬಿಜೆಪಿ ಮತ್ತು ಆರೆಸ್ಸೆಸ್ ಮತೀಯ ಧ್ರುವೀಕರಣಕ್ಕಾಗಿ ಹೆಣದ ರಾಜಕೀಯ ಆರಂಭಿಸಿವೆ. ಕೇರಳ ಸೇರಿದಂತೆ ಹಲವು ಕಡೆಗಳಲ್ಲಿ ನಮ್ಮ ಪಕ್ಷದ ಕಚೇರಿಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಸಿಪಿಎಂ ಕಾರ್ಯಕರ್ತರನ್ನು ಬಿಜೆಪಿ, ಆರೆಸ್ಸೆಸ್ ಕಾರ್ಯಕರ್ತರು ಕೊಚ್ಚಿ ಕೊಲೆ ಮಾಡುತ್ತಿದ್ದಾರೆ. ಸಿಪಿಎಂ ಕಾರ್ಯಕರ್ತರ ವಿರುದ್ಧವೇ ಹತ್ಯೆಯ ಆರೋಪ ಹೊರಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.

ಈಗ ದೇಶದ ಆಡಳಿತ ಆರೆಸ್ಸೆಸ್ ಮತ್ತು ಮೋದಿಯವರ ಖಾಸಗಿ 'ಸೇನೆ'ಯ ಕೈಯಲ್ಲಿದೆ ಎಂಬ ಸಂದೇಶವನ್ನು ಮತೀಯ ರಾಜಕಾರಣದ ಮೂಲಕ ನೀಡಲಾಗುತ್ತಿದೆ. ಇದನ್ನು ತಡೆಯಲು ಸುತ್ತಿಗೆ ಮತ್ತು ಕುಡುಗೋಲು ಸಶಕ್ತವಾಗಿವೆ. ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಬಂದಾಗ ಅದನ್ನು ರಕ್ಷಿಸಲು ಕೆಂಬಾವುಟ ಸಿದ್ಧವಾಗಿದೆ ಎಂದರು.

> ತೆಂಗು, ಬೀಡಿ–ಹಂಚು, ಮೀನುಗಾರಿಕೆ ಮುಂತಾದವುಗಳಿಗೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಪರಿಹರಿಸುವ ಕ್ರಮಗಳಿಗೆ ಪ್ರಯತ್ನಿಸುವ ಬದಲು, ಇಲ್ಲಿನ ಸಂಸದರು ಪ್ರತಿಯೊಂದು ಸಾವು ಆದಾಗಲೂ ಅದಕ್ಕೆ ಕೋಮುವಾದಿ ಬಣ್ಣ ಬಳಿದು ಜಿಲ್ಲೆಗೆ ಬೆಂಕಿ ಹಚ್ಚಲು ಹೊರಟಿದ್ದಾರೆ.
>
> *– ಎಸ್. ವರಲಕ್ಷ್ಮಿ*



ಬಹುತ್ವದ ನಾಶ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮ ರೆಡ್ಡಿ ಅಂದಿನ ಎರಡು ಆತಂಕಕಾರಿ ಘಟನೆಗಳ ಕಡೆಗೆ ಗಮನ ಸೆಳೆದು ಮಾತು ಆರಂಭಿಸಿದರು. ದ.ಕ.ದಲ್ಲಿ ಅಂದು ವರದಿಯಾಗಿದ್ದ ಇನ್ನೊಂದು 'ಲವ್–ಜಿಹಾದ್' ಪ್ರಕರಣ ಮತ್ತು ಮಹಾರಾಷ್ಟ್ರದ ಕೋರೆಗಾಂವ್ ವಿಜಯದ 200ನೇ ವಾರ್ಷಿಕೋತ್ಸವದ ಮೇಲೆ ಕೇಸರಿ ಪಡೆಗಳ ದಾಳಿಯೇ ಆ ಎರಡು ಘಟನೆಗಳು. 'ಆರೆಸ್ಸೆಸ್ ಹೆಸರು ರಾಷ್ಟ್ರೀಯ ಸರ್ವನಾಶಕ ಸಂಘ ಎಂದು ಬದಲಾಗಿದೆ. 5,000 ವರ್ಷಗಳಿಂದ ಭಾರತ ಕಾಪಾಡಿಕೊಂಡು ಬಂದಿರುವ ಬಹುತ್ವವನ್ನು ನಾಶಮಾಡಲು ಅದು ಯತ್ನಿಸುತ್ತಿದೆ. ಕೇಂದ್ರ ಸರ್ಕಾರದಲ್ಲಿ ಕೌಶಲ ಅಭಿವೃದ್ಧಿ ಮಂತ್ರಿಯಾಗಿರುವ ಅನಂತಕುಮಾರ್ ಹೆಗಡೆ ಬೆಂಕಿ ಹಚ್ಚುವ ಕೌಶಲ ತೋರಿಸುತ್ತಿದ್ದಾರೆ. ಇತ್ತೀಚೆಗೆ ಉಡುಪಿಯಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಮಾತನಾಡಿದವರು ಮೂರನೇಯ ದರ್ಜೆಯ ಗೂಂಡಾಗಳ ಭಾಷೆಯಲ್ಲಿ ಮಾತನಾಡಿದ್ದಾರೆ' ಎಂದು ವಾಗ್ದಾಳಿ ನಡೆಸಿದರು. ಹೊನ್ನಾವರದಲ್ಲಿ ಪರೇಶ್ ಮೇಸ್ತ ಸಾವಿನ ಹೆಸರಿನಲ್ಲಿ ಸಮಾಜಕ್ಕೆ

ಪುಟ 14 ಕ್ಕೆ



ಎಡಶಕ್ತಿಗಳು ಮಾತ್ರ ಜನತೆ ಮತ್ತು ದೇಶದ ಮೇಲಿನ ದಾಳಿಗೆ ಪ್ರತಿರೋಧ ಒಡ್ಡಬಲ್ಲವು: ಯೆಚುರಿ



ಗುಜರಾತ್ ಮಾದರಿ ಆಡಳಿತ

ಮೋದಿ ಮುಖ್ಯಮಂತ್ರಿಯಾಗಿದ್ದಷ್ಟೂ ವರ್ಷಗಳಲ್ಲಿ ಗುಜರಾತಿನ ವಿಧಾನ ಸಭೆಯ ಕಲಾಪಗಳು ಎಂದೂ ವರ್ಷಕ್ಕೆ 25 ದಿನಗಳನ್ನು ದಾಟಿಲ್ಲ. ಕಲಾಪಗಳಲ್ಲಿ ಭಾಗವಹಿಸದೆ, ಸರ್ವಾಧಿಕಾರಿ ಧೋರಣೆಯನ್ನು ತೋರುತ್ತಾ ಸಂಸದೀಯ ಪ್ರಜಾಪ್ರಭುತ್ವಕ್ಕೆ ಸವಾಲು ಹಾಕುವ ಗುಜರಾತ್ ಮಾದರಿ ಆಡಳಿತವನ್ನು ಅವರು ಮುಂದಿಟ್ಟಿದ್ದಾರೆ.

– ಸೀತಾರಾಂ ಯೆಚುರಿ

"ಇಂದು ಕೋಮುವಾದ ಹಾಗೂ ನವ ಉದಾರವಾದಿ ಆರ್ಥಿಕತೆ ವಿರುದ್ಧದ ಹೋರಾಟಗಳನ್ನು ಜೊತೆಜೊತೆಗೆ ಕೊಂಡೊಯ್ಯಬೇಕಾದ ಅಗತ್ಯವಿದೆ. ನಾವು ಅದನ್ನು ಮಾಡುತ್ತಿದ್ದೇವೆ. ಈ ಎರಡೂ ಹೋರಾಟಗಳ ಮೂಲಕ ಪ್ರತಿರೋಧ ಒಡ್ಡುವುದು ನಮ್ಮಿಂದ ಮಾತ್ರ ಸಾಧ್ಯ ಎನ್ನುವುದು ಅವರಿಗೆ ತಿಳಿದಿದೆ." ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾಂ ಯೆಚುರಿ ಘೋಷಿಸಿದರು. ಅವರು ಮೂಡುಬಿದಿರೆಯಲ್ಲಿ ಸಿಪಿಐ(ಎಂ)ನ 22ನೇ ಕರ್ನಾಟಕ ರಾಜ್ಯ ಸಮ್ಮೇಳನದ ಜನವರಿ 2ರಂದು ಸಾಯಂಕಾಲ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಮ್ಯುನಿಸ್ಟ್ ರೈತ ನಾಯಕರ ಹೆಸರಿಡಲಾಗಿತ್ತು. ಸಮ್ಮೇಳನದ ವೇದಿಕೆಯನ್ನು ಇತ್ತೀಚೆಗೆ ನಿಧನರಾದ ಪ್ರಮುಖ ಕಮ್ಯುನಿಸ್ಟ್ ಕಾರ್ಮಿಕ ನಾಯಕರ ನೆನಪಿನಲ್ಲಿ "ಪ್ರಸನ್ನ ಕುಮಾರ್ ವೇದಿಕೆ" ಎಂದು ಇಡಲಾಗಿತ್ತು. ಪ್ರತಿನಿಧಿ ಅಧಿವೇಶನ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಪ್ರೊ. ಫಾದರ್ ಜಾನ್ ಫೆರ್ನಾಂಡೀಸ್ ಅವರ ಸ್ವಾಗತ ಭಾಷಣದೊಂದಿಗೆ ಆರಂಭವಾಯಿತು.

"ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೆಲವು ಸಂಘಟನೆಗಳ ಪ್ರೇರಣೆಯಿಂದಲೇ ಏಕಧರ್ಮ, ಏಕಸಂಸ್ಕೃತಿ, ಏಕಭಾಷೆ ಮತ್ತು ಏಕರೀತಿಯ ಆರ್ಥಿಕತೆಯನ್ನು ಹೇರಲಾಗುತ್ತಿದೆ. ದೇಶದ ಬಹುಸಂಸ್ಕೃತಿ ಮೇಲೆ ದಾಳಿ ಮಾಡಲಾಗುತ್ತಿದೆ. ದುರ್ಬಲರು, ವಂಚಿತರು, ಮತ್ತು ಅಂಚಿನಲ್ಲಿರುವವರಿಗೆ ರಕ್ಷಣೆ ಕೊಡುವವರು ಎಡಪಕ್ಷಗಳ ಹೊರತು ಬೇರೆಯವರು ಕಾಣಿಸುತ್ತಿಲ್ಲ.. .. ಬಹುತ್ವದ ಮೇಲೆ ನಡೆಯುತ್ತಿರುವ ದಾಳಿಗೆ ವಿರುದ್ಧವಾಗಿ, ಅಲ್ಪಸಂಖ್ಯಾತರ ಪರವಾಗಿ ದ.ಕ. ಜಿಲ್ಲೆಯಲ್ಲಿ ದನಿ ಎತ್ತುತ್ತಿರುವ ಪ್ರಮುಖ ಸಂಘಟನೆ ಸಿಪಿಐ(ಎಂ) ಆಗಿದೆ. .. ಎಲ್ಲ ಧರ್ಮಗಳ ಮೂಲದಲ್ಲಿ ಬಡಜನರಿಗೆ, ದುರ್ಬಲರಿಗೆ ರಕ್ಷಣೆಯನ್ನು ಹೇಳಲಾಗಿದೆ. ಎಲ್ಲ ಜನರೂ ಸುಖಿಗಳಾಗಲಿ ಎಂದು ಸಮಾನತೆಯನ್ನೇ



ಅಲ್ಪಸಂಖ್ಯಾತರ ದನಿ ಸಿಪಿಐ(ಎಂ) : ಫಾ. ಫೆರ್ನಾಂಡೀಸ್

ಇದಕ್ಕಿಂತ ಮೊದಲು ಸಮ್ಮೇಳನದ ಪ್ರತಿನಿಧಿ ಅಧಿವೇಶನ ಪಕ್ಷದ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಧ್ವಜಾರೋಹಣವನ್ನು ಹಿರಿಯ ಸಂಗಾತಿ ಕಾ. ಕೆ.ಆರ್.ಶ್ರೀಯಾನ್ ನೆರವೇರಿಸಿ ಮಾತನಾಡಿದರು. ಆ ಮೇಲೆ ಹುತಾತ್ಮರಿಗೆ ಪುಷ್ಪನಮನ ಸಲ್ಲಿಸಲಾಯಿತು. ಪ್ರತಿನಿಧಿ ಸಂಗಾತಿಗಳ ನೋಂದಣಿಯ ನಂತರ ಪ್ರತಿನಿಧಿ ಸಭೆಯ ಉದ್ಘಾಟನಾ ಅಧಿವೇಶನ ಆರಂಭವಾಯಿತು. ಸಮ್ಮೇಳನದ ಪ್ರತಿನಿಧಿ ಅಧಿವೇಶನ ಮೂಡುಬಿದಿರೆಯ ಒಂಟಿಕಟ್ಟೆಯ ಸಂಜೀವ ಶೆಟ್ಟಿ ಮಲ್ಟಿ–ಪರ್ಪಸ್ ಹಾಲಿನಲ್ಲಿ ನಡೆಯಿತು. ಸಮ್ಮೇಳನ ನಡೆಯುವ ಈ ಸ್ಥಳಕ್ಕೆ "ಅಬ್ರಹಾಂ ಕರ್ಕಡ ನಗರ" ಎಂದು ಅವಿಭಜಿತ ದ.ಕ. ಜಿಲ್ಲೆಯ ಹಿರಿಯ

> ಬಹುತ್ವದ ಮೇಲೆ ನಡೆಯುತ್ತಿರುವ ದಾಳಿಗೆ ವಿರುದ್ಧವಾಗಿ, ಅಲ್ಪಸಂಖ್ಯಾತರ ಪರವಾಗಿ ದ.ಕ. ಜಿಲ್ಲೆಯಲ್ಲಿ ದನಿ ಎತ್ತುತ್ತಿರುವ ಪ್ರಮುಖ ಸಂಘಟನೆ ಸಿಪಿಐ(ಎಂ) ಆಗಿದೆ.
>
> *– ಪ್ರೊ. ಫಾದರ್ ಜಾನ್ ಫೆರ್ನಾಂಡೀಸ್, ಸ್ವಾಗತ ಸಮಿತಿ ಗೌರವಾಧ್ಯಕ್ಷ*

ಸಾರಲಾಗಿದೆ. ಧರ್ಮಗಳ ಈ ಮೂಲ ಆಶಯವನ್ನು ಕಮ್ಯುನಿಸ್ಟ್ ಪಕ್ಷ ಮುಂದುವರೆಸುತ್ತಿದೆ." ಎಂದು ಫಾ. ಫೆರ್ನಾಂಡೀಸ್ ಮಾರ್ಮಿಕವಾಗಿ ನುಡಿದರು.

ಶೋಷಿತರ ದಮನಿತರ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ, ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ, ಅಗಲಿದ ಹುತಾತ್ಮರಾದ ನಾಯಕರು ಕಾರ್ಯಕರ್ತರುಗಳಿಗೆ ಶ್ರದ್ಧಾಂಜಲಿ



ಸಲ್ಲಿಸುವ ನಿರ್ಣಯವನ್ನು ಕಾ. ನಿತ್ಯಾನಂದ ಸ್ವಾಮಿ ಮಂಡಿಸಿದರು. ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಾಲ್ಕು ಆಯಾಮಗಳ ದಾಳಿಗಳು

ಪ್ರತಿನಿಧಿ ಅಧಿವೇಶನದ ಉದ್ಘಾಟನಾ ಭಾಷಣ ಮಾಡಿದ ಕಾ. ಸೀತಾರಾಂ ಯೆಚುರಿ ಕಳೆದ ಮೂರು ವರ್ಷಗಳಲ್ಲಿ ದೇಶ ಮತ್ತು ಜನತೆ ಮೇಲೆ ನಾಲ್ಕು ಆಯಾಮಗಳ ದಾಳಿಗಳು ನಡೆಯುತ್ತಿವೆ ಎಂದರು. ಮೊದಲನೆಯದಾಗಿ ನವ–ಉದಾರೀಕರಣದ ದಾಳಿಗಳು ಹೆಚ್ಚೆಚ್ಚು ಆಕ್ರಾಮಕವಾಗುತ್ತಿವೆ. ಕೋಮುವಾದಿ ಧ್ರುವೀಕರಣದ ಪ್ರಕ್ರಿಯೆ ಬಿರುಸಿನಿಂದ ತೀಕ್ಷ್ಣಗೊಳ್ಳುತ್ತಿದೆ. ಸಾಂವಿಧಾನಿಕ ವ್ಯವಸ್ಥೆ, ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಹಾಗೂ ಸರ್ವಾಧಿಕಾರಿ ಪ್ರವೃತ್ತಿ ತೀಕ್ಷ್ಣವಾಗಿ ಬೆಳೆಯುತ್ತಿದೆ. ನಾಲ್ಕನೆಯದಾಗಿ ದೇಶದ ಸರಕಾರ ಎಂದೂ ಇಷ್ಟು ರಾಜಾರೋಷಾಗಿ ಅದೂ ರಾಜತಾಂತ್ರಿಕ ರಂಗದಲ್ಲಿ ಮಾತ್ರವಲ್ಲ – ಆರ್ಥಿಕ, ರಕ್ಷಣೆ, ವೈಜ್ಞಾನಿಕ – ಹೀಗೆ ಎಲ್ಲಾ ರಂಗಗಳಲ್ಲೂ ಅಮೆರಿಕದ ಜೂನಿಯರ್ ಪಾರ್ಟ್ನರ್ ಆಗಿರಲಿಲ್ಲ.

ಭಾರತದ ಇಂದಿನ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಯು ನವಉದಾರವಾದದ ದುಷ್ಪರಿಣಾಮ ಎಂದು ಬಣ್ಣಿಸಿದ ಸೀತಾರಾಮ ಯೆಚೂರಿ, "2008ರಲ್ಲಿ ಆರಂಭವಾದ ಜಾಗತಿಕ ಆರ್ಥಿಕ ಬಿಕ್ಕಟ್ಟು ಈಗಲೂ ಮುಂದುವರೆದಿದೆ. ಸಾಮ್ರಾಜ್ಯಶಾಹಿಯು ನವ–ಉದಾರವಾದದ ನಂತರದಲ್ಲಿ ಲಾಭವನ್ನು ಅತಿ ಹೆಚ್ಚುಗೊಳಿಸುವ ಪ್ರಯತ್ನ ನಡೆಸಿತು. ಲಾಭದ ಲೆಕ್ಕಾಚಾರ ಸುಲಭದ್ದಲ್ಲ. ಇದು ಸಾಧ್ಯವಾಗಬೇಕೆಂದರೆ, ಒಂದು ವರ್ಗದ ಜನ ಇನ್ನಷ್ಟು ಶ್ರೀಮಂತರೂ ಮತ್ತೊಂದು ವರ್ಗದ ಜನ ಇನ್ನಷ್ಟು ಬಡವರೂ ಆಗುತ್ತಾ ಹೋಗುತ್ತಾರೆ. ಈಗ ಇಂಡಿಯಾದಲ್ಲಿ ಆಗಿರುವುದೂ ಅದೇ. ಜನರು ಬಡವರಾದಂತೆಲ್ಲ ಕೊಳ್ಳುವ ಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋಗುತ್ತಾರೆ. ಜನರಿಗೆ ಕೊಳ್ಳುವ ಶಕ್ತಿ ನೀಡಲು ಬ್ಯಾಂಕುಗಳು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಮುಂದಾಗುತ್ತವೆ. ಆದರೆ ಸಾಲ ಪಡೆಯುವ ಬಹುತೇಕರು ಅದನ್ನು ಮರುಪಾವತಿ ಮಾಡಲು ಶಕ್ತರಾಗುವುದಿಲ್ಲ. ಇದರಿಂದ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ದಿವಾಳಿಯತ್ತ ಸಾಗುತ್ತವೆ. ಬ್ಯಾಂಕುಗಳಿಗೆ ಸಹಾಯ ನೀಡಲು ಸರ್ಕಾರಗಳು ಬೈಲೌಟ್ ಪ್ಯಾಕೇಜನ್ನು ಘೋಷಿಸುತ್ತವೆ. ಆದರೆ ಇದರಿಂದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಬ್ಯಾಂಕುಗಳ ಬದಲು ಸರಕಾರಗಳು ದಿವಾಳಿಯತ್ತ ಸಾಗುತ್ತವೆ. ಸರಕಾರಗಳು ದಿವಾಳಿಯಾಗುವುದನ್ನು ತಪ್ಪಿಸಲು ಜನ ಕಲ್ಯಾಣ ಯೋಜನೆಗಳಲ್ಲಿ ತೀವ್ರ ಕಡಿತ ಮಾಡುತ್ತವೆ." ಎಂದು ಅವರು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪ್ರಕ್ರಿಯೆಯನ್ನು ಬಣ್ಣಿಸಿದರು. ಸಾಮ್ರಾಜ್ಯಶಾಹಿ ಈ ಬಿಕ್ಕಟ್ಟಿನಿಂದ ಪಾರಾಗುವ ಉಪಾಯಗಳು ಆರ್ಥಿಕ ಬಿಕ್ಕಟ್ಟನ್ನು ಇನ್ನಷ್ಟು ದೀರ್ಘ ಆಳಗೊಳಿಸುವ ಪ್ರಕ್ರಿಯೆಯನ್ನೂ ಅವರು ಬಣ್ಣಿಸಿದರು.

ನೋಟು ನಿಷೇಧ ಹಾಗೂ ಜಿಎಸ್‌ಟಿ ದಾಳಿಗಳು

ನೋಟು ನಿಷೇಧ ಹಾಗೂ ಜಿಎಸ್‌ಟಿ ಬಗ್ಗೆ ಮಾತನಾಡಿದ ಯೆಚೂರಿ, "ನೋಟು ನಿಷೇಧ ಮಾಡಿದ್ದು ಕಪ್ಪುಹಣ ತರಲಿಕ್ಕಾಗಿ ಅಲ್ಲ, ಭ್ರಷ್ಟಾಚಾರ ತಡೆಯಲಿಕ್ಕಾಗಿಯೂ ಅಲ್ಲ. ಭಯೋತ್ಪಾದನೆಗೆ ಕಡಿವಾಣ ಹಾಕಲಿಕ್ಕಾಗಲೀ ಖೋಟಾ ನೋಟು ಹಾವಳಿಯನ್ನು ನಿಯಂತ್ರಿಸಲಾಗಲೀ ಖಂಡಿತಾ ಅಲ್ಲ. ನೋಟು ನಿಷೇಧವನ್ನು ಜಾರಿಗೊಳಿಸಿದ್ದು ಡಿಜಿಟಲ್

ಪುಟ 14 ಕ್ಕೆ

ಅಧ್ಯಕ್ಷೀಯ ಮಂಡಳಿ
ವಿ.ಜೆ.ಕೆ. ನಾಯರ್, ಎಸ್.ವರಲಕ್ಷ್ಮಿ, ಗೋಪಾಲಕೃಷ್ಣ ಅರಳಹಳ್ಳಿ, ಕೆ.ಎಸ್.ಲಕ್ಷ್ಮಿ, ಸೈಯದ್ ಮುಜೀಬ್

ನಿರ್ಣಯ ಸಮಿತಿ
ನಿತ್ಯಾನಂದ ಸ್ವಾಮಿ (ಸಂಚಾಲಕರು), ಜಿ.ಎನ್. ನಾಗರಾಜ್, ಮೀನಾಕ್ಷಿಸುಂದರಂ, ಎಸ್. ವೈ.ಗುರುಶಾಂತ್, ಸುನಂದ ಎಚ್.ಎಸ್., ಮಾಳಮ್ಮ, ನಾಗರಾಜ್ ಎನ್.

ದಾಖಲಾತಿ ಸಮಿತಿ
ಧರ್ಮೇಶ್(ಸಂಚಾಲಕ), ಗುರುರಾಜ ದೇಸಾಯಿ, ಯಮುನಾ ಗಾಂವ್ಕರ್, ಮಾಲಿನಿ ಮೇಸ್ತ, ಲಿಂಗರಾಜು

ಅರ್ಹತಾ ಸಮಿತಿ
ಕೆ.ಶಂಕರ್(ಸಂಚಾಲಕ), ಮುನಿವೆಂಕಟಪ್ಪ, ಎಂ.ಆರ್.ಶೆಣೈ, ಕೆ.ಎಸ್.ವಿಮಲ

ಅನುವಾದ ಸಮಿತಿ
ಕೆ.ಎನ್.ಉಮೇಶ್, ಸುರೇಶ್ ಜೆ., ಸಿ.ಆರ್.ಶಾನಭಾಗ್, ಪ್ರತಾಪ್ ಸಿಂಹ

ಎಡಶಕ್ತಿಗಳು ಮಾತ್ರ ಜನತೆ ಮತ್ತು ದೇಶದ ಮೇಲಿನ.... ಪುಟ 13 ರಿಂದ

ಆರ್ಥಿಕತೆಯನ್ನು ಪರಿಚಯಿಸಲಿಕ್ಕಾಗಿ. ಡಿಜಿಟಲ್ ಆರ್ಥಿಕತೆಯು ಬಂಡವಾಳಷಾಹಿಗಳಿಗೆ ಲಾಭವನ್ನು ಹೆಚ್ಚುಗೊಳಿಸುವ ಆರ್ಥಿಕತೆ. ಜಗತ್ತಿನ ಎಲ್ಲ ಕಡೆ ಒಟ್ಟು 4 ಬಗೆಯ ಕಾರ್ಡ್‌ಗಳು ಚಾಲ್ತಿಯಲ್ಲಿವೆ. ನಾವು ಪ್ರತಿ ಬಾರಿ ಡಿಜಿಟಲ್ ವ್ಯವಹಾರ ನಡೆಸಿದಾಗೆಲ್ಲ ಅವರಿಗೆ ಲಾಭವಾಗುತ್ತದೆ. ಈ ಡಿಜಿಟಲ್ ಆರ್ಥಿಕತೆಗೆ ನಮ್ಮ ದೇಶದ ಆರ್ಥಿಕತೆಯನ್ನು ವರ್ಗಾಯಿಸುವುದು ಅಂದರೆ ಅವರ ಲಾಭವನ್ನು ಹೆಚ್ಚಿಸುವುದು ಎಂದೇ ಅರ್ಥ" ಎಂದು ಹೇಳಿದರು.

"ನೋಟು ನಿಷೇಧದಿಂದ ಚಿಕ್ಕಪುಟ್ಟ ಕೈಗಾರಿಕೆಗಳಿಗೆ, ಉದ್ಯಮಗಳಿಗೆ, ವಿಶೇಷವಾಗಿ ಕೃಷಿಗೆ ದೊಡ್ಡ ಹೊಡೆತ ಬಿದ್ದಿದೆ. ಇವು ನಡೆಯುವುದೇ ನಗದು ವ್ಯವಹಾರದ ಮೇಲೆ. ದೇಶದ 80% ಜನ ನಗದು ವ್ಯವಹಾರವನ್ನು ಅವಲಂಬಿಸಿದ್ದಾರೆ. ಅವರ ಮೇಲೆ ಡಿಜಿಟಲ್ ಆರ್ಥಿಕತೆಯನ್ನು ಹೇರಲಾಗುತ್ತಿದೆ. 'ಒಂದೇ ದೇಶ, ಒಂದೇ ತೆರಿಗೆ' ಅನ್ನುವ ಘೋಷಣೆಯಡಿ ಜಿಎಸ್.ಟಿ.ಯನ್ನು ಜಾರಿಗೊಳಿಸಲಾಗಿದೆ. ಇದು ನೇರವಾಗಿ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಕೈಗಾರಿಕೆಗಳಿಗೆ ದೊಡ್ಡ ಹೊಡೆತ ನೀಡುತ್ತಿದೆ. ಇಂಡಿಯಾವನ್ನು ಪ್ರವೇಶಿಸಲಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಏಕರೂಪ ತೆರಿಗೆಯು ಲಾಭದ ಹೊಳೆಯನ್ನೇ ಹರಿಸಲಿದೆ. ಅವುಗಳ ಎದುರು ಪೈಪೋಟಿ ನೀಡಲಾಗದ ದೇಸೀ ಕೈಗಾರಿಕೆಗಳು ನೆಲಕಚ್ಚಲಿವೆ. ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ನೂರಾರು ಕೈಗಾರಿಕೆಗಳು ಬಾಗಿಲು ಹಾಕಿವೆ. ಈ ಮೂಲಕ ದೇಶದ ಆಂತರಿಕ ಉತ್ಪನ್ನದಲ್ಲಿ 60%ರಷ್ಟು ಕಡಿಮೆಯಾಗುತ್ತದೆ. ಕೃಷಿ ಭೂಮಿಯ ವಿಸ್ತೀರ್ಣ ಹಾಗೂ ಕೃಷಿಗಾರಿಕೆಗೆ ಬಿದ್ದ ಹೊಡೆತದಿಂದಾಗಿ ಆಹಾರೋತ್ಪನ್ನಗಳಿಗಾಗಿ ಹೊರದೇಶಗಳನ್ನು ಅವಲಂಬಿಸುವ ಸ್ಥಿತಿ ಬಂದಿದೆ. ಅಂಥ ಅವಲಂಬನೆಯನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯು ಸೃಷ್ಟಿಸಿದೆ" ಎಂದು ಅವರು ವಿಶ್ಲೇಷಿಸಿದರು.

ಗುಜರಾತ್ ಮಾದರಿ ಆಡಳಿತ

"ಗುಜರಾತ್ ಮಾದರಿ ಎಂದು ಹೇಳುವ ಮೂಲಕ ಅವರು ಮುಂದಿಡುತ್ತಿರುವುದು ಸರ್ವಾಧಿಕಾರಿ ಧೋರಣೆಯನ್ನು. ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿದ್ದಷ್ಟೂ ವರ್ಷಗಳಲ್ಲಿ ಗುಜರಾತಿನ ವಿಧಾನ ಸಭೆಯ ಕಲಾಪಗಳು ಎಂದೂ ವರ್ಷಕ್ಕೆ 25 ದಿನಗಳನ್ನು ದಾಟಿಲ್ಲ. ಕಲಾಪಗಳಲ್ಲಿ ಭಾಗವಹಿಸದೆ, ಸರ್ವಾಧಿಕಾರಿ ಧೋರಣೆಯನ್ನು ತೋರುತ್ತಾ ಸಂಸದೀಯ ಪ್ರಜಾಪ್ರಭುತ್ವಕ್ಕೆ ಸವಾಲು ಹಾಕುವ ಗುಜರಾತ್ ಆಡಳಿತ ಮಾದರಿಯನ್ನು ಅವರು ಮುಂದಿಟ್ಟಿದ್ದಾರೆ" ಎಂದು ಹೇಳಿದ ಯೆಚೂರಿ, "ಜೆಎನ್.ಯು. ಮೊದಲಾದ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ಹೇರುವ ಮೂಲಕ ಅವರು ಚಿಂತಕ ವಿಭಾಗವನ್ನು ಇಲ್ಲವಾಗಿಸಲು ಹೊರಟಿದ್ದಾರೆ. ಶಿಕ್ಷಣ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸುವ ಮೂಲಕ ತಮ್ಮ ವಿಚಾರಧಾರೆಗಳನ್ನು ಹರಡುವುದು ಅವರ ಯೋಜನೆ. ಆಹಾರದ ಮೇಲೆ, ಸಂಸ್ಕೃತಿಯ ಮೇಲೆ, ಸಿನೆಮಾಗಳ ಮೇಲೆ ಹೀಗೆ ಸಮಾಜದ ವಿವಿಧ ಕ್ಷೇತ್ರಗಳ ಮೇಲೆ ನಿಯಂತ್ರಣ ಹೇರುತ್ತಾ ಅವರು ಸಮಾಜವನ್ನು ಛಿದ್ರಗೊಳಿಸುತ್ತಿದ್ದಾರೆ. ಇದರ ವಿರುದ್ಧ ಜನರು ಸಂಘಟಿತರಾಗಿ ಹೋರಾಟ ನಡೆಸದಂತೆ ಕೋಮುಧ್ರುವೀಕರಣದ ಮೂಲಕ ಒಡಕು ಮೂಡಿಸುತ್ತಿದ್ದಾರೆ. ಜಾತೀಯತೆಯ ಮೂಲಕ ಅಂತರ ಸೃಷ್ಟಿಸುವ ಹುನ್ನಾರ ಎಂದಿನಿಂದಲೂ ನಡೆಸಿದ್ದಾರೆ" ಎಂದು ಹೇಳಿದರು.

ಜನವಿರೋಧಿ, ಕಾರ್ಮಿಕವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಟದ ಅಗತ್ಯವಿದೆ ಎಂದು ಪ್ರತಿಪಾದಿಸಿದ ಯೆಚೂರಿಯವರು ಕರ್ನಾಟಕದಲ್ಲಿ ಕಳೆದ ವರ್ಷ ನಡೆದ ಅಂಗನವಾಡಿ ಹೋರಾಟದ ಯಶಸ್ಸನ್ನು ಉದಾಹರಣೆಯಾಗಿ ನೀಡಿದರು. ಅದರಂತೆಯೇ ರೈತರ ಕಿಸಾನ್ ಸಂಸದ್, ಕಾರ್ಮಿಕರ ಮಹಾ ಪಡಾವ್ ಮೊದಲಾದ ಹೋರಾಟಗಳನ್ನೂ ಉಲ್ಲೇಖಿಸಿದರು.

"ಇಂದು ಕೋಮುವಾದ ಹಾಗೂ ನವ ಉದಾರವಾದಿ ಆರ್ಥಿಕತೆ ವಿರುದ್ಧದ ಹೋರಾಟಗಳನ್ನು ಜೊತೆಜೊತೆಗೆ ಕೊಂಡೊಯ್ಯಬೇಕಾದ ಅಗತ್ಯವಿದೆ. ನಾವು ಅದನ್ನು ಮಾಡುತ್ತಿದ್ದೇವೆ. ಈ ಎರಡೂ ಹೋರಾಟಗಳ ಮೂಲಕ ಪ್ರತಿರೋಧ ಒಡ್ಡುವುದು ನಮ್ಮಿಂದ ಮಾತ್ರ ಸಾಧ್ಯ ಎನ್ನುವುದು ಅವರಿಗೆ ತಿಳಿದಿದೆ. ಆದ್ದರಿಂದಲೇ ಅವರು ನಮ್ಮ ಮೇಲೆ ಮುಗಿಬಿದ್ದಿದ್ದಾರೆ. ಕೇರಳದಲ್ಲಿ ಹಿಂಸಾಚಾರ ನಡೆಸುವ ಮೂಲಕ ನಮ್ಮ ಶಕ್ತಿಯನ್ನು ಕುಂದಿಸುವ ಪ್ರಯತ್ನ ನಡೆಸಿದ್ದಾರೆ. ಅಖಂಡ ಭಾರತದ ಬಗ್ಗೆ ಮಾತನಾಡುವ ಅವರು, ತ್ರಿಪುರಾದಲ್ಲಿ ಪ್ರತ್ಯೇಕತಾವಾದಿಗಳೊಡನೆ ಸೇರಿ ಹಿಂಸಾಚಾರಕ್ಕೆ ಇಳಿದಿದ್ದಾರೆ ಹಾಗೂ ಎಡಶಕ್ತಿಯನ್ನು ಸೋಲಿಸುವ ಪ್ರಯತ್ನ ಶುರುವಿಟ್ಟಿದ್ದಾರೆ. ಪಶ್ಚಿಮ ಬಂಗಾಳದಲ್ಲಂತೂ ಸ್ಪರ್ಧಾತ್ಮಕವಾದ ಕೋಮುವಾದ ನಡೆಯುತ್ತಿದೆ. ಈ ಎಲ್ಲಕ್ಕೂ ಪ್ರಜಾಸತ್ತಾತ್ಮಕ ಹೋರಾಟವೇ ಪ್ರತ್ಯುತ್ತರ. ನಾವು ಅದನ್ನು ಸಮೂಹ ಸಂಘಟನೆಗಳ ಮೂಲಕ, ಸಮಾಜದ ವಿವಿಧ ಪ್ರಗತಿಪರ ಸಂಘಟನೆಗಳ ಜೊತೆಗೆ ಹಾಗೂ ಪಕ್ಷದ ಮೂಲಕವೂ ನಡೆಸುತ್ತ ಬಂದಿದ್ದೇವೆ. ಮುಂದೆ ಇನ್ನಷ್ಟು ಸಂಘಟಿತರಾಗಿ, ಇನ್ನಷ್ಟು ಬಲದಿಂದ ಈ ಹೋರಾಟವನ್ನು ಮುನ್ನಡೆಸೋಣ" ಎಂದು ಕರೆ ನೀಡಿದರು.

ವರದಿ ಮಂಡನೆ, ಚರ್ಚೆ

ಉದ್ಘಾಟನೆಯ ನಂತರ ಪ್ರತಿನಿಧಿ ಅಧಿವೇಶನದ ಪ್ರಕ್ರಿಯೆ ಆರಂಭವಾಯಿತು. ಮೊದಲಿಗೆ ಅಧ್ಯಕ್ಷೀಯ ಮಂಡಳಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಆ ನಂತರದ ಕಲಾಪಗಳನ್ನು ಅಧ್ಯಕ್ಷೀಯ ಮಂಡಳಿ ನಡೆಸಿತು. ಸಮ್ಮೇಳನದ ವಿವಿಧ ಕಲಾಪಗಳನ್ನು ನಡೆಸಲು ಅನುವಾಗುವಂತೆ ನಿರ್ಣಯ ಸಮಿತಿ, ದಾಖಲಾತಿ ಸಮಿತಿ, ಅರ್ಹತಾ ಸಮಿತಿ, ಪಿ.ಬಿ.ಸದಸ್ಯರಿಗೆ ಕಲಾಪಗಳ ಇಂಗ್ಲಿಷ್ ಅನುವಾದ ಕೊಡಲು ಅನುವಾದ ಸಮಿತಿ ಗಳನ್ನು ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷೀಯ ಮಂಡಳಿ ಮತ್ತು ವಿವಿಧ ಸಮಿತಿಗಳ ಸದಸ್ಯರ ಹೆಸರುಗಳ ಪಟ್ಟಿಯನ್ನು ಜತೆಗಿರುವ ಬಾಕ್ಸಿನಲ್ಲಿ ಕೊಡಲಾಗಿದೆ.

ಮುಂದಿನ ಕಲಾಪ ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಅವರಿಂದ ರಾಜ್ಯ ಸಮಿತಿಯ ಕರಡು ವರದಿಯ ಮಂಡನೆಯಾಗಿತ್ತು. 244 ಪುಟಗಳ ವರದಿಯನ್ನು ನೋಂದಣಿ ಜತೆ ಪ್ರತಿನಿಧಿ ಮತ್ತು ವೀಕ್ಷಕರಿಗೆ ಕೊಡಲಾಗಿತ್ತು. ವರದಿಯಲ್ಲಿ – ಪ್ರಸ್ತಾವನೆ, ಸಾಮಾಜಿಕ–ಆರ್ಥಿಕ ಪರಿಸ್ಥಿತಿ,

ಪುಟ 23 ಕ್ಕೆ

22ನೇ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ.... ಪುಟ 12 ರಿಂದ

ಕಿಚ್ಚು ಹಚ್ಚಿದವರು ದಕ್ಷಿಣ ಕನ್ನಡ ಜಿಲ್ಲೆಯ ಹರೀಶ್ ಪೂಜಾರಿ, ವಿನಾಯಕ ಬಾಳಿಗ ಕೊಲೆ ಆದಾಗ ಎಲ್ಲಿಗೆ ಹೋಗಿದ್ದರು. ಉಡುಪಿಯ ಪ್ರವೀಣ್ ಪೂಜಾರಿ ಕೊಲೆಯ ಕುರಿತು ಏಕೆ ಮಾತನಾಡಲಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ಮೂರು ಪ್ರಧಾನ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಗಳು ಜನರ ಸಮಸ್ಯೆಯನ್ನು ಎಂದೂ ಎತ್ತಿಕೊಂಡಿಲ್ಲ. ಪರಸ್ಪರ ದೂಷಣೆ ಮಾಡುವುದು ಬಿಟ್ಟು ಇನ್ನೇನೂ ಮಾಡಿಲ್ಲ ಎಂದು ಟೀಕಿಸಿದರು. ಕಾಂಗ್ರೆಸ್ ಸರಕಾರ ಕೋಮುವಾದಿ ಹಿಂಸಾಚಾರವನ್ನು ನಿಗ್ರಹ ಮಾಡುವಲ್ಲಿ ಆಡಳಿತಾತ್ಮಕವಾಗಿಯೂ ರಾಜಕೀಯವಾಗಿಯೂ ವಿಫಲವಾಗಿದೆ. ಕಾರ್ಮಿಕರು ಕನಿಷ್ಟ ಕೂಲಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ಮುಂತಾದ ಇತರ ಹಕ್ಕೊತ್ತಾಯಗಳಿಗೆ ಐದನೇ ಬಾರಿ ವಿಧಾನಸೌಧದ ಮುಂದೆ ಬಂದಿದ್ದಾರೆ. ಆದರೆ ಕಾಂಗ್ರೆಸ್ ಸರಕಾರ ಪ್ರತಿ ಬಾರಿ ಕೊಟ್ಟ ಭರವಸೆಗಳನ್ನು ಈಡೇರಿಸಿಲ್ಲ. ಹಾಗೆನೇ ರೈತರ ಭೂಮಿ, ನೀರು, ಸಾಲಮನ್ನಾ ಮತ್ತಿತರ ಸಮಸ್ಯೆಗಳ ಮತ್ತು ಬಡಜನರ ಮನೆ ನಿವೇಶನದ ನಿರ್ದಿಷ್ಟ ಹಕ್ಕೊತ್ತಾಯಗಳ ಬಗ್ಗೆ ನಿರ್ಲಕ್ಷ ತೋರಿದೆ. ಕರ್ನಾಟಕದ ಪ್ರಜೆಗಳ ಮೇಲಿರುವ ಸಾಲದ ಹೊರೆ ಮಾತ್ರ ಹೆಚ್ಚಾಗಿದೆ ಎಂದು ದೂರಿದರು. ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಗಳ ರಾಜಕಾರಣಕ್ಕೆ ಪರ್ಯಾಯ ನೀತಿಗಳ ಮೇಲೆ ಆಧಾರಿತ ಪರ್ಯಾಯ ರಾಜಕಾರಣಕ್ಕೆ ಕರೆ ನೀಡಿದರು.

ಕೋರೆಗಾಂವ್ ಹಿಂಸಾಚಾರದ ಖಂಡನೆ

ಕೋರೆಗಾಂವ್ ನಲ್ಲಿ ಹಿಂದುತ್ವವಾದಿಗಳು 200ನೇ ವಿಜಯೋತ್ಸವ ದಿನಾಚರಣೆ ಕಾರ್ಯಕ್ರಮಕ್ಕೆ ತೆರಳಿದ ದಲಿತರ ಮೇಲೆ ಕಲ್ಲು ಬೀಸಿ ದಾಂಧಲೆ ನಡೆಸಿ ಹಿಂಸಾಚಾರಣೆಗೆ ಇಳಿದಿದ್ದು ಅತ್ಯಂತ ಹೇಯ ಕೃತ್ಯವಾಗಿದೆ. ಇದನ್ನು ಕರ್ನಾಟಕದ 22ನೇ ರಾಜ್ಯ ಸಮ್ಮೇಳನದ ವೇದಿಕೆಯಿಂದ ಸಿಪಿಐ(ಎಂ) ಪಕ್ಷವು ತೀವ್ರವಾಗಿ ಖಂಡಿಸುತ್ತದೆ.

ಸಮಸ್ಯೆಗಳ ಪರಿಹಾರದ ಬದಲು ಬೆಂಕಿ ಇಡಲು ಹೊರಟಿದ್ದಾರೆ

ದಕ್ಷಿಣ ಕನ್ನಡದ ಜಿಲ್ಲೆಯ ದುಡಿಯುವ ಜನತೆ – ತೆಂಗಿಗೆ ಲಾಭದಾಯಕ ಬೆಲೆ, ಬೀಡಿ–ಹಂಚು ಮುಂತಾದ ಕೈಗಾರಿಕೆಗಳ ಬಿಕ್ಕಟ್ಟು, ಮೀನುಗಾರಿಕೆಯ ಸಮಸ್ಯೆಗಳು – ಮುಂತಾದ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದನ್ನು ಪರಿಹರಿಸುವ ಕ್ರಮಗಳಿಗೆ ಪ್ರಯತ್ನಿಸುವ ಬದಲು ಇಲ್ಲಿನ ಸಂಸದರು ಪ್ರತಿಯೊಂದು ಸಾವು ಆದಾಗಲೂ ಅದಕ್ಕೆ ಕೋಮುವಾದಿ ಬಣ್ಣ ಬಳಿದು ಜಿಲ್ಲೆಗೆ ಬೆಂಕಿ ಹಚ್ಚಲು ಹೊರಟಿದ್ದಾರೆ. ತಾವೇ ಪಾಕಿಸ್ತಾನದ ಬಾವುಟ ಹಾರಿಸಿ ಕೋಮುಗಲಭೆ ಹರಡಲು ಇಂಡಿಯಲ್ಲಿ ಪ್ರಯತ್ನಿಸಿದ ಹಾಗೂ ದಾನಮ್ಮ ಸಾಮೂಹಿಕ ಅತ್ಯಾಚಾರದ ಪ್ರಕರಣದಲ್ಲೂ ಬಿಜೆಪಿ–ಸಂಘಿಗಳು ಸಿಕ್ಕಿಹಾಕಿಕೊಂಡಿದ್ದಾರೆ ಎಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾ. ಎಸ್. ವರಲಕ್ಷ್ಮಿ ಟೀಕಿಸಿದರು.

ಗುತ್ತಿಗೆ, ಹೊರಗುತ್ತಿಗೆ, ಅರೆಕಾಲಿಕ, ಅತಿಥಿ, ಸ್ವಯಂ–ಸೇವೆ ಮುಂತಾದ ಹಲವು ಹೆಸರುಗಳಲ್ಲಿ ಖಾಯಮೇತರ ಕಾರ್ಮಿಕರ ಮೇಲೆ ಹೊಸ ಗುಲಾಮ ಪದ್ಧತಿಯನ್ನು ಹೇರುವತ್ತ, ಐ.ಎಲ್.ಓ.ದ ಮತ್ತು ಸುಪ್ರೀಂ ಕೋರ್ಟು ತೀರ್ಪಿನ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನದ ಹಕ್ಕೊತ್ತಾಯದ ಬಗ್ಗೆ, ಕಾರ್ಮಿಕ ಕಾನೂನು ಬದಲಾವಣೆ ಹೆಸರಲ್ಲಿ ಇದ್ದ ಬದ್ದ ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುವತ್ತ, ಅಂಗನವಾಡಿ ಬಿಸಿಯೂಟ ಆಶಾ ಕಾರ್ಯಕ್ರಮಗಳನ್ನು ಮುಚ್ಚಿ ಖಾಸಗಿಯವರಿಗೆ ಕೊಡುವ ಹುನ್ನಾರದ ಬಗ್ಗೆ ಅವರು ಗಮನ ಸೆಳೆದರು.

ಕಾ. ಮುನೀರ್ ಕಾಟಿಪಳ್ಳ ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಕರ್ನಾಟಕ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯ ಸದಸ್ಯರುಗಳಾದ ವಿ.ಜೆ.ಕೆ.ನಾಯರ್, ಜಿ.ಎನ್.ನಾಗರಾಜ್, ನಿತ್ಯಾನಂದ ಸ್ವಾಮಿ, ಕೆ.ಶಂಕರ್, ಯು.ಬಸವರಾಜ್, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್, ಮುನಿವೆಂಕಟಪ್ಪ, ಸ್ಥಳೀಯ ಕಾರ್ಮಿಕ ನಾಯಕರಾದ ರಮಣಿ, ಹಿರಿಯ ಸಿಪಿಐ(ಎಂ) ನಾಯಕ ಕೆ.ಆರ್.ಶ್ರೀಯಾನ್ ಮತ್ತು ಪೊಲಿಟ್ ಬ್ಯುರೋ ಸದಸ್ಯ ಕಾ. ಎಂ.ಎ.ಬೇಬಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಕಾ. ಜೆ.ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಇನ್ನೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಕಾ. ವಸಂತ ಅಚಾರಿ ವಂದನಾರ್ಪಣೆ ಮಾಡಿದರು.





ನಿಜವಾಗಿ 1818ರಲ್ಲಿನ ಮೂರನೆಯ ಆಂಗ್ಲೋ-ಮರಾಠ ಯುದ್ಧವು ಸ್ವಾತಂತ್ರ್ಯ ಹೋರಾಟವೇನಾಗಿರಲಿಲ್ಲ. ಅದಿನ್ನು ಅಂದು ರೂಪುಗೊಂಡಿರಲಿಲ್ಲ. ಅಂದು ನಡೆದದ್ದು ಎರಡು ಶತ್ರು ಪ್ರಭುತ್ವಗಳ ನಡುವಿನ ಯುದ್ಧವಾಗಿತ್ತು. ಅಲ್ಲಿ ರಾಷ್ಟ್ರೀಯತೆಯ ಪ್ರಶ್ನೆ ಇರಲಿಲ್ಲ. ದಲಿತರಿಗೆ-ಮಹರ್ ಜನರಿಗೆ ಪೇಶ್ವಾಶಾಹಿ ಹೇಗೆ ಆಳುವವರಾಗಿದ್ದರೋ ಬ್ರಿಟಿಷರೂ ಅದೇ ರೀತಿಯಲ್ಲಿ ಆಳುವವರಾಗಿದ್ದರು. ಆದರೆ ಸ್ಥಳೀಯವಾಗಿ ದಲಿತರು ಅನುಭವಿಸುತ್ತಿದ್ದ ಅನ್ಯಾಯ, ಶೋಷಣೆ, ಪ್ರತ್ಯೇಕೀಕರಣ. ಅವಮಾನ ಮುಂತಾದ ಅಮಾನವೀಯ ಆಚರಣೆಗಳಿಂದಾಗಿ ಅವರು ಬ್ರಿಟಿಷರ ಪರವಾಗಿ ನಿಲ್ಲಬೇಕಾಯಿತು. ಈ ಚರಿತ್ರೆಯ ಸತ್ಯವನ್ನು ಮನಗಾಣದಿದ್ದರೆ ಭೀಮಕೋರೆಗಾಂವ್ ವಿಜಯೋತ್ಸವವನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ವಿಶೇಷ ಲೇಖನ



ದಲಿತರನ್ನು ಮುಟ್ಟಿದರೆ – ಭೀಮಕೋರೆಗಾಂವ್ ಆಸ್ಫೋಟ

ಪ್ರೊ. ಟಿ. ಆರ್. ಚಂದ್ರಶೇಖರ

ಭೀಮಕೋರೆಗಾಂವ್ ಅನ್ನುವುದು ಮಹಾರಾಷ್ಟ್ರದ ಪುಣೆ ಜಿಲ್ಲೆಯ ಶಿರೂರ್ ತಾಲ್ಲೂಕಿನ ಒಂದು ಗ್ರಾಮ ಪಂಚಾಯತಿ ಕೇಂದ್ರ(ಭೀಮ ನದಿಯ ದಂಡೆಯಲ್ಲಿದಿರುವ ಊರು). ಬ್ರಿಟಿಷರು ಮತ್ತು ಮರಾಠ ನಡುವೆ 1818ರ ಜನವರಿ 1 ರಂದು ಇಲ್ಲಿ ನಡೆದ ಯುದ್ಧದಲ್ಲಿ ಪೇಶ್ವೆ ಸಾಮ್ರಾಜ್ಯ ಕೊನೆಗೊಂಡಿತು. ಬ್ರಿಟಿಷರು ಅಲ್ಲಿ ಜಯ ಸಾಧಿಸಿದ್ದರು. ಬ್ರಿಟಿಷರ ಸೈನ್ಯದಲ್ಲಿ ಅನೇಕ ಮಹರ್ ಸಮುದಾಯದವರಿದ್ದರು. ಈ ಯುದ್ಧದ ವಿಜಯದ ಸ್ಮರಣೆಗಾಗಿ ಅಲ್ಲಿ ಬ್ರಿಟಿಷರು 60 ಅಡಿ ಎತ್ತರದ 'ರಣ ಸ್ತಂಬ'ವನ್ನು ನಿಲ್ಲಿಸಿದ್ದಾರೆ. ಅದರಲ್ಲಿ ಹುತಾತ್ಮರಾದ ಬ್ರಿಟಿಷ್ ಸೈನ್ಯದ 49 ಜನರ ಹೆಸರುಗಳನ್ನು ಕೆತ್ತಲಾಗಿದೆ. ಅವರಲ್ಲಿ 22 ಸೈನಿಕರು ಮಹರ್ ಸಮುದಾಯಕ್ಕೆ ಸೇರಿದರಾಗಿದ್ದರು. ಪೇಶ್ವಾಶಾಹಿ/ಬ್ರಾಹ್ಮಣಶಾಹಿ ಆಳ್ವಿಕೆಯಲ್ಲಿ ದಲಿತರು, ಮಹರ್ ಸಮುದಾಯ ಅನೇಕ ಬಗೆಯ ದಬ್ಬಾಳಿಕೆ, ಹಿಂಸೆ, ದೌರ್ಜನ್ಯ ಅನುಭವಿಸುತ್ತಿದ್ದರು. ಅವರನ್ನು ಅವಮಾನಗೊಳಿಸಲಾಗುತ್ತಿತ್ತು. ಪುಣೆ ನಗರದಲ್ಲಿ ದಲಿತರು ರಸ್ತೆಯಲ್ಲಿ ನಡೆದು ಬರಬೇಕಾದರೆ ಬೆನ್ನಿಗೆ ಹಿಡಗಲನ್ನು ಕಟ್ಟಿಕೊಂಡು ತಾವು ಕಾಲಿಟ್ಟ ಸ್ಥಳವನ್ನು ಗುಡಿಸಿಕೊಂಡು ಹೋಗಬೇಕಾಗಿತ್ತು. ಈ ಯುದ್ಧವನ್ನು ದಲಿತರು, ಮುಖ್ಯವಾಗಿ ಮಹರ್ ಸಮುದಾಯವು ಪೇಶ್ವಾಶಾಹಿ/ಬ್ಯಾಹ್ಮಣಶಾಹಿಯ ಮೇಲಿನ ವಿಜಯವೆಂದು ಭಾವಿಸಿದ್ದಾರೆ. ಇದನ್ನು ಸಮಾಜವು ಅಸ್ಪೃಶ್ಯತೆಯ, ಅಸಮಾನತೆಯ, ಜಾತೀಯತೆಯ ಮೇಲಿನ ವಿಜಯವನ್ನಾಗಿ ಪರಿಗಣಿಸಿದೆ. ಹೀಗಾಗಿ ಜನವರಿ ಒಂದನೆ ತಾರೀಕನ್ನು ಪ್ರತಿ ವರ್ಷ ಪೇಶ್ವಾಶಾಹಿ ವಿರುದ್ಧ ದಲಿತರು ಸಾಧಿಸಿದ ವಿಜಯದ ದಿನಾಚರಣೆಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು 1927 ಜನವರಿ 1 ರಂದು ಇಲ್ಲಿಗೆ ಭೇಟಿ ನೀಡಿದ್ದರು. ಅಂದಿನಿಂದ ಧಾರ್ಮಿಕ ಶ್ರದ್ಧೆಯೋಪಾದಿಯಲ್ಲಿ ದಲಿತರು ಭೀಮಕೋರೆಗಾಂವ್ ವಿಜಯೋತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಆರಂಭದಲ್ಲಿ ನೂರಾರು, ನಂತರ ಸಾವಿರಾರು ಸಂಖ್ಯೆಯಲ್ಲಿ ಸೇರಿ ಇದನ್ನು ಆಚರಿಸಲಾಗುತ್ತಿತ್ತು. ಇಂದು ಅಲ್ಲಿ ಲಕ್ಷಾಂತರ ದಲಿತರು ಸೇರುತ್ತಾರೆ.

ಬೀಮಕೋರೆಗಾಂವ್ ರಣಸ್ತಂಭ ಸೇವಾ ಸಂಘವು ಜನವರಿ 1, 2018ರಂದು ಅದರ ದ್ವಿಶತಮಾನೋತ್ಸವನ್ನು ಆಚರಿಸಲು ಬೃಹತ್ ಸಿದ್ಧತೆ ನಡೆಸಿತ್ತು. ಅಂದು ದಲಿತರು ಪುಣೆಯ ಶನಿವಾರವಾಡೆ ಪ್ರದೇಶದಲ್ಲಿ ವಿಜಯೋತ್ಸವವನ್ನು ಆಚರಿಸಲು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ವಿಜಯೋತ್ಸವವನ್ನು ಆಚರಿಸಲು ಅಲ್ಲಿ ಸೇರಿದ್ದ ದಲಿತರ ಮೇಲೆ ದಲಿತ ವಿರೋಧಿಗಳು ಕಲ್ಲು ತೂರಾಟ ನಡೆಸಿ ಅವರ ಮೇಲೆ ದೌರ್ಜನ್ಯವೆಸಗಲಾಯಿತು. ಇದಕ್ಕೆ ಎರಡು ಕಾರಣಗಳಿದ್ದವು. ಮೊದಲನೆಯದು ಬ್ರಿಟಿಷರು ಮತ್ತು ಪೇಶ್ವೆಗಳ ನಡುವಿನ ಯುದ್ಧದಲ್ಲಿನ ಪೇಶ್ವೆಗಳ ಸೋಲನ್ನು ವಿಜಯೋತ್ಸವವನ್ನಾಗಿ ಆಚರಿಸುವುದರ ಬಗ್ಗೆ ಮೇಲು ಜಾತಿಯವರ, ಮುಖ್ಯವಾಗಿ ನವಪೇಶ್ವಾಶಾಹಿಯನ್ನು ಬೆಳೆಸುತ್ತಿರುವ ಬಲಪಂಥೀಯರ ವಿರೋಧವಿತ್ತು. ಎರಡನೆಯದಾಗಿ ಅದನ್ನು ಪೇಶ್ವೆಗಳ ಆಸ್ಥಾನವಿದ್ದ ಪವಿತ್ರ ಸ್ಥಾನ ಶನಿವಾರವಾಡೆ ದಲಿತರ ಆಚರಣೆಯಿಂದ ಅದು ಅಪವಿತ್ರವಾಗಿದೆ-ಮೈಲಿಗೆಯಾಗಿದೆ ಅನ್ನುವ ಭಾವನೆಯ ಕಾರಣವಾಗಿಯೂ ಅದಕ್ಕೆ ವಿರೋಧವೂ ಇತ್ತು. ಈ ಆಚರಣೆಯನ್ನು ಅಖಿಲ ಭಾರತ ಬ್ರಾಹ್ಮಣ ಮಹಾಸಭಾ, ಹಿಂದೂ ಏಕತಾ ಅಗಾಡಿ, ಶಿವರಾಜ್ ಸಂಬಾಜಿ ಪ್ರತಿಷ್ಠಾನ ಮುಂತಾದ ಸಂಘಟನೆಗಳು ವಿರೋಧಿಸುತ್ತಿವೆ. ಅವುಗಳ ಪ್ರಕಾರ ಸದರಿ ಯುದ್ಧವು ಬ್ರಿಟಿಷರು ಮತ್ತು ಮರಾಠರ ನಡುವೆ ಅಥವಾ ರಾಷ್ಟ್ರೀಯತೆ ಮತ್ತು ವಿದೇಶಿ ಆಳ್ವಿಕೆಗಳ ನಡುವಿನ ಯುದ್ಧವಾಗಿದೆ. ಇದರಲ್ಲಿ ಸಂಭ್ರಮಾಚರಣೆ ಏನಿದೆ ಅನ್ನುವುದು ಬ್ರಾಹ್ಮಣಶಾಹಿ ಶಕ್ತಿಗಳ ಅಭಿಪ್ರಾಯವಾಗಿದೆ.

ದಲಿತರ/ಮಹರ್ ಸಮುದಾಯದ ದೃಷ್ಟಿಯಿಂದ ಪೇಶ್ವಾಶಾಹಿ ಮತ್ತು ಬ್ರಿಟಿಷರ ಆಳ್ವಿಕೆಗಳ ನಡುವೆ ಗುಣಾತ್ಮಕ ಭಿನ್ನತೆಯೇನು ಇರಲಿಲ್ಲ. ದಲಿತರು ಅಂದು ಎರಡು ರೀತಿಯ ಶೋಷಣೆ ಅನುಭವಿಸುತ್ತಿದ್ದರು. ಮೊದಲನೆಯದು ರಾಷ್ಟ್ರೀಯ-ಆಂತರಿಕ ಶೋಷಣೆಯಾಗಿದ್ದರೆ ಎರಡನೆಯದು ವಿದೇಶಿ ಆಳ್ವಿಕೆಯ ಶೋಷಣೆಯಾಗಿತ್ತು. ಮೊದಲನೆಯದು ವರ್ಣಪದ್ಧತಿ ಆಧಾರಿತ ಬ್ರಾಹ್ಮಣಶಾಹಿಯು ದಲಿತರ ಮೇಲೆ ನಡೆಸುತ್ತಿದ್ದ ಶೋಷಣೆಯಾಗಿತ್ತು ಮತ್ತು ಎರಡನೆಯದು ಬ್ರಿಟಿಷರು ಸ್ಥಳೀಯರ ಮೇಲೆ ನಡೆಸುತ್ತಿದ್ದ ಶೋಷಣೆಯಾಗಿತ್ತು. ದಲಿತೇತರರು ಎರಡನೆಯ ಬಗೆಯ ಶೋಷಣೆಗೆ ಒಳಗಾಗಿದ್ದರೆ ದಲಿತರು ಎರಡೂ ಬಗೆಯ ಶೋಷಣೆಯನ್ನು ಎದುರಿಸಬೇಕಾಗಿತ್ತು. ಅಖಿಲ ಭಾರತ ಬ್ರಾಹ್ಮಣ ಮಹಾಸಭೆಯ ಮುಂದಾಳುಗಳಿಗೆ ಮೂರನೆಯ ಆಂಗ್ಲೋ-ಮರಾಠ ಯುದ್ಧವು ರಾಷ್ಟ್ರೀಯತೆ ಮತ್ತು ವಿದೇಶಿ ಶಕ್ತಿಗಳ ವಿರುದ್ಧದ ಹೋರಾಟವಾಗಿತ್ತು. ಪೇಶ್ವಾಶಾಹಿ ಆಳ್ವಿಕೆಗೆ ಎರಡು ನೆಲೆಗಳಿದ್ದವು. ಒಂದು ಅದು ಬ್ರಿಟಿಷರ ಅನ್ನುವುದಕ್ಕಿಂತ ಶತ್ರುಗಳ ವಿರುದ್ಧದ ಆಕ್ರೋಶ. ಎರಡನೆಯದಾಗಿ ಅದು ಜಾತೀಯತೆ ಆಧಾರದಲ್ಲಿ ದಲಿತರನ್ನು ಶೋಷಣೆಗೆ ಒಳಪಡಿಸಿದ್ದುದಾಗಿತ್ತು. ಈ ಒಳಸುಳಿಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಭೀಮಕೋರೆಗಾಂವ್ ವಿಜಯೋತ್ಸವದ ಅರ್ಥವಾಗುವುದಿಲ್ಲ. ಈ ವಿಜಯೋತ್ಸವವು ಮಹರ್ ಸಮುದಾಯಕ್ಕೆ ನೈತಿಕ ಜಯದ ಸಂಕೇತವಾಗಿದೆ. ಒಂದು ವಿದೇಶಿ ವಸಾಹತುಶಾಹಿ. ಎರಡನೆಯದು ಆಂತರಿಕ ವಸಾಹತುಶಾಹಿ. ಈ ಕಾರಣದಿಂದ ಪೇಶ್ವೇಶಾಹಿಯ ಸೋಲನ್ನು ದಲಿತ/ಮಹರ್ ಸಮುದಾಯವು ಬ್ರಿಟಿಷರ ಗೆಲುವೆಂದು ತಿಳಿಯುವುದಕ್ಕೆ ಪ್ರತಿಯಾಗಿ ಬ್ರಾಹ್ಮಣಶಾಹಿಯ-ಆಂತರಿಕ ವಸಾಹತುಶಾಹಿಯ ವಿರುದ್ಧದ ಗೆಲುವು ಎಂದು ಭಾವಿಸಿದ್ದರಲ್ಲಿ ಆಶ್ಚರ್ಯ ಪಡುವಂತಹುದೇನಿರಲಿಲ್ಲ.

ಮಾಧ್ಯಮಗಳು (ದಿ ವೈರ್, ದಿ ಕ್ವಿಂಟ್ ಮುಂತಾದ ಅಪವಾದ ಬಿಟ್ಟು) ಮಹಾರಾಷ್ಟ್ರ ಪುಣೆ, ಕೊಲ್ಲಾಪುರ, ಲಾತೂರ್, ಅಹಮದ್‌ನಗರ, ಔರಂಗಾಬಾದ್, ನಾಂದೇಡ್, ಪ್ರಬಾನಿ ಮುಂತಾದ ಕಡೆ ಭೀಮಕೋರೆಗಾಂವ್ ವಿಜಯದ ದ್ವಿಶತಮಾನೋತ್ಸವದ ಸಂದರ್ಭದಲ್ಲಿ ನಡೆದ ಹಿಂಸಾಚಾರವನ್ನು ಜಾತಿ ಘರ್ಷಣೆಯೆಂದೇ ವರದಿ ಮಾಡುತ್ತಿವೆ. ಈ ವರದಿಗಳು ಸಮಸ್ಯೆಯ ಒಂದು ಮುಖವನ್ನಷ್ಟೇ ತೆರೆದಿಡುತ್ತಿವೆ. ಪೇಶ್ವೇಶಾಹಿಯು ಯಾವ ರೀತಿಯಲ್ಲಿ ದಲಿತರನ್ನು ಶೋಷಿಸುತ್ತಿತ್ತು, ಅವಮಾನಗೊಳಿಸುತ್ತಿತ್ತು, ಅವರನ್ನು ಹೇಗೆ ನಡೆಸಿಕೊಳ್ಳಲಾಗುತ್ತಿತ್ತು, ಅವರ ಬದುಕು ಎಷ್ಟು ದುಸ್ಥಿತಿಯಲ್ಲಿತ್ತು ಎಂಬುದರ ಬಗ್ಗೆ ಬರೆಯುತ್ತಿಲ್ಲ. ಇದು ಜಾತೀಯ ಘರ್ಷಣೆ ಅನ್ನುವುದು ತಪ್ಪು. ಇದು ವೈಚಾರಿಕತೆಯ, ಎರಡು ವಿಚಾರ ಪ್ರಣಾಳಿಕೆಗಳ ನಡುವಿನ ಘರ್ಷಣೆಯಾಗಿದೆ. ದಲಿತರು ಅನುಭವಿಸುತ್ತಿರುವ ಅವಮಾನ, ಶೋಷಣೆ, ಅವರ ಬದುಕಿನ ದುಸ್ಥಿತಿಯ ಬಗ್ಗೆ ಮಾಧ್ಯಮಗಳು ಮೌನ ವಹಿಸಿವೆ. ಎರಡನೆಯ ಬಾಜಿರಾವ್ ಪೇಶ್ವೆಯು ದಲಿತರನ್ನು ಅವಮಾನಿಸುತ್ತಿದ್ದ ಎನ್ನಲಾಗಿದೆ. ಈ ಬಗೆಯ ಅವಮಾನ, ಶೋಷಣೆ, ಅಸ್ಪೃಶ್ಯತೆ, ಪತ್ಯೇಕೀಕರಣ ಮುಂತಾದವುಗಳ ಕಾರಣವಾಗಿ ಮಹರ್ ಸಮುದಾಯ ಜನರು ಬ್ರಿಟಿಷ್ ಸೈನ್ಯವನ್ನು ಅಪಾರ ಸಂಖ್ಯೆಯಲ್ಲಿ ಸೇರುತ್ತಿದ್ದರು. ಇದು ಅವರಿಗೆ ಬದುಕಿನ ಪ್ರಶ್ನೆಯಾಗಿತ್ತು. ಅಕ್ಷರ ಸಂಸ್ಕೃತಿಯನ್ನು ದಲಿತರಿಗೆ ವಂಚಿಸಲಾಗಿತ್ತು. ಈ ಚರಿತ್ರೆಯನ್ನು ಹೇಗೆ ಮರೆ ಮಾಡುತ್ತೀರಿ? ದಲಿತರಿಗೆ ಬ್ರಿಟಿಷ್ ಸರ್ಕಾರ ಶಿಕ್ಷಣದ ಬಾಗಿಲು ತೆರೆಯಿತು. ಅವರನ್ನು ಸಮಾನವಾಗಿ ಕಾಣತೊಡಗಿತು. ಘನತೆಯಿಂದ ಬದುಕುವ ಅವಕಾಶ ದಲಿತರಿಗೆ ಅತ್ಯಂತ ಸೀಮಿತ ನೆಲೆಯಲ್ಲಾದರೂ ಬ್ರಿಟಿಷರ ಆಳ್ವಿಕೆಯಲ್ಲಿ ದೊರೆಯತೊಡಗಿತು. ಈ ಕಾರಣದಿಂದಾಗಿ ಅಂದು ವಸಾಹತುಶಾಹಿಯನ್ನು ದಲಿತ ಜನಾಂಗ ವಿಮೋಚನೆಯ ಆಳ್ವಿಕೆಯೆಂದು ಪರಿಗಣಿಸಿತ್ತು. ಭೀಮಕೋರೆಗಾಂವ್ ವಿಜಯೋತ್ಸವವು ರಾಷ್ಟ್ರೀಯತೆ-ವಿದೇಶಿ ಆಳ್ವಿಕೆಗಳ ನಡುವಿನ ಯುದ್ಧವೆನ್ನುವುದು ಎಷ್ಟು ಸತ್ಯವೋ ಅದು ದಲಿತರ ವಿಮೋಚನೆಯ ಸಂಕೇತವೂ ಆಗಿತ್ತು ಅನ್ನುವುದು ಅಷ್ಟೇ ಸತ್ಯವಾಗಿತ್ತು.

ಚರಿತ್ರೆಯನ್ನು ತಿರುಚುವುದರಿಂದ ಅಥವಾ ಮುಚ್ಚಿ ಹಾಕುವುದರಿಂದ ಸತ್ಯವನ್ನು ಮರೆಮಾಚಲು ಬರುವುದಿಲ್ಲ. ಪೇಶ್ವಾಶಾಹಿಯು ದಲಿತರ ಮೇಲೆ ಶೋಷಣೆ ನಡೆಸಿತ್ತು, ಅವರನ್ನು ಅಸ್ಪೃಶ್ಯರನ್ನಾಗಿ ನೋಡಿಕೊಳ್ಳುತ್ತಿತ್ತು ಎಂಬುದು ಚರಿತ್ರೆ. ಮಹರ್ ಸಮುದಾಯವು ಬ್ರಿಟಿಷರನ್ನು ಏಕೆ ಬೆಂಬಲಿಸಿದರು ಅನ್ನುವುದರ ಹಿಂದಿನ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಅವರೆಲ್ಲ ದೇಶದ್ರೋಹಿಗಳೇನಾಗಿರಲಿಲ್ಲ ಅಥವಾ ಸ್ವಾತಂತ್ರ್ಯದ ಹೋರಾಟದ ವಿರೋಧಿಗಳಾಗಿರಲಿಲ್ಲ. ವಾಸ್ತವವಾಗಿ ಸಂಬಾಜಿ ಮಹಾರಾಜರು ಔರಂಗಜೇಬನ ಸೈನ್ಯಕ್ಕೆ ಸೆರೆ ಸಿಕ್ಕಲು ಅವನ ಸಂಬಂಧಿಕರೇ ನೆರವಾಗಿದ್ದರು ಎನ್ನಲಾಗಿದೆ. ಇವೆಲ್ಲ ಊಹಾಪೋಹಗಳೂ ಇರಬಹುದು. ನಿಜವಾಗಿ 1818ರಲ್ಲಿನ ಮೂರನೆಯ ಆಂಗ್ಲೋ-ಮರಾಠ ಯುದ್ಧವು ಸ್ವಾತಂತ್ರ್ಯ ಹೋರಾಟವೇನಾಗಿರಲಿಲ್ಲ. ಅದಿನ್ನು ಅಂದು ರೂಪುಗೊಂಡಿರಲಿಲ್ಲ. ಅಂದು ನಡೆದದ್ದು ಎರಡು ಶತ್ರು ಪ್ರಭುತ್ವಗಳ ನಡುವಿನ ಯುದ್ಧವಾಗಿತ್ತು. ಅಲ್ಲಿ ರಾಷ್ಟ್ರೀಯತೆಯ ಪ್ರಶ್ನೆ ಇರಲಿಲ್ಲ. ದಲಿತರಿಗೆ-ಮಹರ್ ಜನರಿಗೆ ಪೇಶ್ವಾಶಾಹಿ ಹೇಗೆ ಆಳುವವರಾಗಿದ್ದರೋ ಬ್ರಿಟಿಷರೂ ಅದೇ ರೀತಿಯಲ್ಲಿ ಆಳುವವರಾಗಿದ್ದರು. ಆದರೆ ಸ್ಥಳೀಯವಾಗಿ ದಲಿತರು ಅನುಭವಿಸುತ್ತಿದ್ದ ಅನ್ಯಾಯ, ಶೋಷಣೆ, ಪ್ರತ್ಯೇಕೀಕರಣ. ಅವಮಾನ ಮುಂತಾದ ಅಮಾನವೀಯ ಆಚರಣೆಗಳಿಂದಾಗಿ ಅವರು ಬ್ರಿಟಿಷರ ಪರವಾಗಿ ನಿಲ್ಲಬೇಕಾಯಿತು. ಈ ಚರಿತ್ರೆಯ ಸತ್ಯವನ್ನು ಮನಗಾಣದಿದ್ದರೆ ಭೀಮಕೋರೆಗಾಂವ್ ವಿಜಯೋತ್ಸವವನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಮಹಾರಾಷ್ಟ್ರದಲ್ಲಿ ಬೀಮಕೋರೆಗಾಂವ್ ಆಚರಣೆಯ ಸಂದರ್ಭದಲ್ಲಿ ಮತ್ತು ಅದರ ನಂತರದ ದಿನಗಳಲ್ಲಿ ನಡೆದ ಹಿಂಸಾಚಾರದಿಂದ ಸಮಾಜ ಪಾಠ ಕಲಿಯಬೇಕು. ಈ ರೀತಿಯ ದಂಗೆಯನ್ನು ಪ್ರಚೋದಿಸುವ ಶಕ್ತಿಗಳ ವಿರುದ್ಧ, ದಲಿತರ ಸಮಾದಿಗಳನ್ನು ಅಪವಿತ್ರಗೊಳಿಸುವ ಕ್ರೌರ್ಯದ ಬಗ್ಗೆ ಸಮಾಜ ಎಚ್ಚೆತ್ತುಕೊಳ್ಳಬೇಕು. ಸಂವಿಧಾನ ಬಸಲಾಯಿಸುತ್ತೇವೆ, ಬಾಬಾ ಸಾಹೇಬ್ ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆಯಲಿಲ್ಲ, ಮೀಸಲಾತಿಯ ಕಾಲ ಮುಗಿದು ಹೋಯಿತು, ಮನುಧರ್ಮವನ್ನು ಗೌರವಿಸದಿರುವವರು ಪಾಕಿಸ್ತಾನಕ್ಕೆ ಹೋಗಲಿ-- ಮುಂತಾದ ಮಾತುಗಳನ್ನು ಆಡಲಾಗುತ್ತಿದೆ. ನಮ್ಮ ದೇಶದಲ್ಲಿ 20.13 ಕೋಟಿ ದಲಿತರಿದ್ದಾರೆ ಮತ್ತು 10.42 ಕೋಟಿ ಬುಡಕಟ್ಟು ಜನರಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಇವರ ಪ್ರಮಾಣ ಶೇ25.24. ಈ ಜನಸ್ತೋಮದ ಸಂಯಮವನ್ನು ಕೆದುಕುವುದು ಅಪಾಯಕಾರಿ. ಮನುವಾದದ ಆಳ್ವಿಕೆಯನ್ನು ನಾಡು ಸಹಿಸಿಕೊಳ್ಳುವುದಿಲ್ಲ. ಏಕೆಂದರೆ ಮನುಧರ್ಮಶಾಸ್ತ್ರದ ಚಾತುರ್ವರ್ಣ ವ್ಯವಸ್ಥೆಯಲ್ಲಿ ದಲಿತರಿಗೆ ಅವಕಾಶವನ್ನೇ ನೀಡಿಲ್ಲ. ಈ ಬಗೆಯ ಪ್ರತ್ಯೇಕೀಕರಣವನ್ನು ಇಂದು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಇಂದು ಈ ಬಗೆಯ ದಲಿತರ ಅವಮಾನ, ಅವರ ಮೇಲಿನ ಹಿಂಸೆ, ಹತ್ಯೆಗಳು ಮುಂದುವರಿದರೆ ದಲಿತರ ಆಕ್ರೋಶ ಆಸ್ಫೋಟವನ್ನು ದೇಶ ಎದುರಿಸಬೇಕಾಗುತ್ತದೆ. ಭೀಮಕೋರೆಗಾಂವ್ ಅದರ ಒಂದು ಸೂಚನೆಯಾಗಿರಬಹುದು!. •

ಶಿವಛತ್ರಪತಿಯ ಹಿರಿಯ ಮಗನ ಶವ ಸಂಸ್ಕಾರದ ವಿವಾದ

ಔರಂಗಜೇಬನ ಸೈನಿಕರಿಂದ ಸಾ. ಶ. 1689ರಲ್ಲಿ ಹತ್ಯೆಗೆ ಒಳಗಾಗಿದ್ದ ಶಿವಚತ್ರಪತಿಯ ಹಿರಿಯ ಪುತ್ರ ಸಂಭಾಜಿ ಮಹಾರಾಜರ ಶವದ ಅಂತ್ಯ ಸಂಸ್ಕಾರವನ್ನು ವಧುಬುದರಕ್ ಗ್ರಾಮದ ಗೋವಿಂದ ಗೋಪಾಲ್ ಮಹರ್ ಅನ್ನುವ ದಲಿತ ಮತ್ತು ಇತರರು ಮಾಡಿದ್ದರು ಎನ್ನಲಾಗಿದೆ. ಅದರ ಸ್ಮರಣಾರ್ಥ ವಧುಬುದರಕ್ ಎಂಬ ಊರಿನಲ್ಲಿ ಸಂಬಾಜಿ ಮಹಾರಾಜರ ಸ್ಮಾರಕವನ್ನು ನಿರ್ಮಿಸಲಾಗಿದೆ. ಅದರ ಪಕ್ಕದಲ್ಲಿ ಆತನ ಪ್ರಧಾನಮಂತ್ರಿಯಾಗಿದ್ದ ಕವಿಕಳಶ್ ಅವರ ಸಮಾದಿಯೂ ಇದೆ. ಸಂಬಾಜಿ ಮಹಾರಾಜರ ಶವ ಸಂಸ್ಕಾರ ಮಾಡಿದ್ದ ಗೋವಿಂದ ಮಹರ್ ಅವರ ಸಮಾದಿಯನ್ನು ಅಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ವಿವಾದವನ್ನು ಗಮನಿಸಬೇಕು. ವಧುಬುದರಕ್ ಗ್ರಾಮದಲ್ಲಿ ಸಂಬಾಜಿ ಮಹಾರಾಜರ ಶವ ಸಂಸ್ಕಾರ ಮಾಡಿದ್ದು ಮರಾಠರೇ ವಿನಾ ಗೋವಿಂದ ಮಹರ್ ಅಲ್ಲ ಅನ್ನುವುದು ಒಂದು ಗುಂಪಿನ ವಾದ. ಇತ್ತೀಚಿಗೆ ಇದನ್ನು ಹುಟ್ಟು ಹಾಕಲಾಗಿದೆ. ಡಿಸೆಂಬರ್ 29, 2017ರಂದು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಗೋವಿಂದ್ ಮಹರ್ ಸಮಾದಿಯ ಮೇಲಿದ್ದ ಫಲಕವನ್ನು ಹಿಂದೂಶಾಹಿ ಶಕ್ತಿಗಳು ಕಿತ್ತು ಹಾಕಿದ್ದವು ಎನ್ನಲಾಗಿದೆ. ಮುಂದೆ ಭೀಮಕೋರೆಗಾಂವ್ ದ್ವಿಶತಮಾನೋತ್ಸವಕ್ಕೆ ಸಂಬಂಧಿಸಿದಂತೆ ಜನವರಿ 1, 2018 ರಂದು ಮತ್ತು ಅನಂತರ ಮಹಾರಾಷ್ಟ್ರಾದ್ಯಂತ ನಡೆದ ಹಿಂಸಾಚಾರದ ಮೂಲ ವಧುಬುದರಕ್‌ನಲ್ಲಿ ನಡೆದ ಶವ ಸಂಸ್ಕಾರಕ್ಕೆ ಸಂಬಂಧಿಸಿದ ಮರಾಠ ಮತ್ತು ದಲಿತರ ನಡುವಿನ ವಿವಾದದಲ್ಲಿದೆ.

ಎನ್.ಎಂ.ಸಿ : ಸಾರ್ವಜನಿಕ ಹಿತಾಸಕ್ತಿ ಪರ ಅಲ್ಲ

ಡಾ. ಪ್ರಕಾಶ್ ಸಿ.ರಾವ್

ಎಂ.ಸಿ.ಐ. ನಲ್ಲಿ ಭ್ರಷ್ಟಾಚಾರದ ಮೂಲ ವೈದ್ಯಕೀಯ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ. ಸರಕಾರ ಈ ನೀತಿಯನ್ನು ರಭಸದಿಂದ ಮುಂದುವರೆಸುತ್ತಿದೆ. ಎನ್.ಎಂ.ಸಿ. ಕಾಯಿದೆಯಲ್ಲಿ ಮೇಲೆ ಹೇಳಿದಂತೆ ವ್ಯಾಪಾರೀಕರಣಕ್ಕೆ ಇದ್ದ ಕೆಲವು ಅಡೆತಡೆಗಳನ್ನು ತೆಗೆಯಲಾಗಿದೆ. ವೈದ್ಯರಿಂದ ಚುನಾಯಿತ ಸದಸ್ಯರ ಬದಲು, ಸರಕಾರದಿಂದ ನೇಮಕವಾದ ಸದಸ್ಯರು ಬಹುಮತದಲ್ಲಿರುವ ಸಂಸ್ಥೆ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ ಎಂದು ಯಾವ ಆಧಾರದಲ್ಲಿ ನಿರೀಕ್ಷಿಸಲಾಗುತ್ತಿದೆ? ಅದೂ ಸರಕಾರದ ನೀತಿ ಎಲ್ಲಾ ರಂಗಗಳಲ್ಲೂ ಖಾಸಗೀಕರಣ ಮತ್ತು ವ್ಯಾಪಾರೀಕರಣ ಉತ್ತೇಜಿಸುವುದು ಆಗಿರುವಾಗ. ವೈದ್ಯಕೀಯ ಶಿಕ್ಷಣದ ಹಾಗೂ ಸೇವಾ ಕ್ಷೇತ್ರದ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕ ಕಡಿವಾಣ ಹಾಕದೆ ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವಿಲ್ಲ.

ಇತ್ತೀಚೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆಗಳು ಆಗುತ್ತಿರುವುದು, ಜನಸಾಮಾನ್ಯರ ಗಮನಕ್ಕೆ ಬಂದಿದೆ. ಮುಷ್ಕರ, ಆಸ್ಪತ್ರೆ ಮುಚ್ಚುವಿಕೆ, ಹೊರರೋಗಿ ವಿಭಾಗ ಮುಚ್ಚುವಿಕೆಯಿಂದ ವೈದ್ಯರು ತಮ್ಮ ಅಸಮಾಧಾನ, ಆಕ್ರೋಶವನ್ನು ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತಿದೆ. ಕೆಲವು ತಿಂಗಳುಗಳ ಹಿಂದೆ ರಾಜ್ಯದ ಸಮಸ್ಯೆಯಾದ ಕೆ.ಪಿ.ಎಂ.ಇ. ಮಸೂದೆ 2017 ಸಂಬಂಧಿಸಿತ್ತು, ಆದರೆ 2ನೇ ಜನವರಿ 2018ರಂದು ನಡೆಸಿದ ಮುಷ್ಕರ ಎನ್.ಎಂ.ಸಿ. ಜಾರಿಗೆ ಬಂದದ್ದರಿಂದ.

ಏನಿದು ಎನ್.ಎಂ.ಸಿ. ಹಾಗೂ ಅದರಿಂದೇನು ಆಪತ್ತು?

1956ರಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆ್ಯಕ್ಟ್ ಜಾರಿಗೆ ಬಂದು, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ (ಎಂ.ಸಿ.ಐ) ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಇದರ ಮೂಲ ಉದ್ದೇಶ ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವುದು, ವೈದ್ಯಕೀಯ ಕ್ಷೇತ್ರದಲ್ಲಿ ನೀತಿ ನಿಯಮಗಳನ್ನು ಪಾಲಿಸದಿರುವವರ ಮೇಲೆ ಕ್ರಮ ಕೈಗೊಳ್ಳುವುದು.

ಇತ್ತೀಚೆಗಿನ ವರ್ಷಗಳಲ್ಲಿ ಎಂ.ಸಿ.ಐ ಕಾರ್ಯಕ್ಷಮತೆಯಲ್ಲಿ ಕುಂದುಕೊರತೆ, ಅವ್ಯವಹಾರಗಳು ಕಂಡುಬಂದದ್ದನ್ನು ಉಚ್ಛನ್ಯಾಯಾಲಯ ಖಂಡಿಸಿದೆ. ಪಾರ್ಲಿಮೆಂಟಿನ ಸ್ಟ್ಯಾಂಡಿಗ್ ಕಮಿಟಿ 2016ರಲ್ಲಿ, ಎಂ.ಸಿ.ಐ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತ ಅದನ್ನು ಕೂಲಂಕುಶವಾಗಿ ಪರೀಕ್ಷಿಸಿ ಸರಿಪಡಿಸಬೇಕೆಂದು ವರದಿ ನೀಡಿದೆ. ಎಂ.ಸಿ.ಐ ನ ಅಧಿಕಾರಿಗಳ ಭ್ರಷ್ಟಾಚಾರ ಬೆಳಕಿಗೆ ಬಂದಿದೆ. 1980 ರಲ್ಲಿ ಭಾರತದಲ್ಲಿ 100 ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ 12 ಖಾಸಗೀ ವೈದ್ಯಕೀಯ ಕಾಲೇಜುಗಳಿದ್ದರೆ 2016ರಲ್ಲಿ 205 ಸರಕಾರೀ ವೈದ್ಯಕೀಯ ಕಾಲೇಜುಗಳು ಹಾಗೂ 221 ಖಾಸಗೀ ವೈದ್ಯ ಕಾಲೇಜುಗಳಿವೆ. ಹೆಚ್ಚಿದ ವೈದ್ಯಕೀಯ ಸೀಟುಗಳಿಗೆ ಖಾಸಗೀ ಕಾಲೇಜುಗಳು ವಿಪರೀತ ಹಣ ತೆಗೆದುಕೊಳ್ಳುತ್ತಿದ್ದು, ವೈದ್ಯಕೀಯ ಶಿಕ್ಷಣ ಒಂದು ವ್ಯಾಪಾರವಾಗಿರುವುದು ಎಲ್ಲರ ಗಮನಕ್ಕೆ ಬಂದಿದೆ ಹಾಗೂ ಸರಕಾರ ಮೌನವಹಿಸಿದೆ. ಎಂ.ಸಿ.ಐ. ದಿವ್ಯ ಮೌನ ವಹಿಸಿದೆ!

ದೇಶದಲ್ಲಿ 2014 ರಿಂದ ಹೊಸ ಸರಕಾರ ಬಂದಿದೆ. ಅದು ಹಿಂದಿನ ಸರಕಾರದ ಎಲ್ಲ ಕಾರ್ಯಕ್ರಮಗಳ ಹೆಸರು ಬದಲಿಸಿ ತನ್ನ ಕಾರ್ಯಕ್ರಮವೆಂದು ಸಾರುತ್ತಿವೆ. ಈಗ ಈ ಎಂ.ಸಿ.ಐ ಸಂಸ್ಥೆಯ ಲೋಪದೋಷಗಳನ್ನು ಸರಿಪಡಿಸುವ ಬದಲು ಎಂ.ಸಿ.ಐ ಯನ್ನೇ ಬದಲಿಸಿ ಎನ್.ಎಂ.ಸಿ ತರಲು ಮುಂದಾಗಿದೆ.

ಎಂ.ಸಿ.ಐ (ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ) ಸಂಸ್ಥೆಯಡಿಯಲ್ಲಿಯೇ ಒಳ್ಳೆ ವೈದ್ಯರುಗಳು ತಯಾರಾಗಿದ್ದಾರೆ ಎನ್ನುವುದನ್ನು ಗಮನಿಸಬೇಕು. ಆದ್ದರಿಂದ ಇದನ್ನು (ಎಂ.ಸಿ.ಐ) ಸರಿಪಡಿಸಲು ಸರಕಾರಕ್ಕೆ ಸಾಧ್ಯ. ಅದರ ಬದಲು ಎನ್.ಎಂ.ಸಿ ಜಾರಿಗೆ ತಂದಿದ್ದಾರೆ ಏಕೆ? ಎನ್.ಎಂ.ಸಿ (ನ್ಯಾಷನಲ್ ಮೆಡಿಕಲ್ ಕೌನ್ಸಿಲ್) ಎಂಬ ಸಂಸ್ಥೆಯನ್ನು ಹುಟ್ಟುಹಾಕಲು ಸರಕಾರ ಮೊದಲಿನಿಂದಲೂ ತಯಾರಿ ನಡಸಿ ಡಿಸೆಂಬರ್ 15, 2017 ರಂದು ಕೇಂದ್ರ ಸಂಪುಟದಲ್ಲಿ ಅದನ್ನು ಜಾರಿಗೊಳಿಸಲು ಅನುಮತಿ ಪಡೆಯಿತು ಹಾಗೂ ಸಂಸತ್ತಿನಲ್ಲಿ ಮಂಡಿಸಿತು. ಆದರೆ ಅದನ್ನು ಜಾರಿಗೊಳಿಸದೆ, ಪಾರ್ಲಿಮೆಂಟಿನ ಸ್ಟಾಂಡಿಗ್ ಕಮಿಟಿಗೆ ಕಳಿಸಿ ಅಲ್ಲಿ ಪರಿಶೀಲನೆ ಯಾಗಬೇಕೆದು ತೀರ್ಮಾನಿಸಲಾಯಿತು.

ಎನ್.ಎಂ.ಸಿ ಯಲ್ಲೇನಿದೆ? :

ಎನ್.ಎಂ.ಸಿ ಈಗಿರುವ ಐ.ಎಂ.ಸಿಯ ಎಲ್ಲ ನೀತಿನಿಯಮಗಳನ್ನು ಬದಲಿಸಿ ಹೊಸ ನಿಯಮಗಳನ್ನು ಜಾರಿತರಲಿದೆ. ಐ.ಎಂ.ಸಿಯಲ್ಲಿ ಕುಂದುಕೊರತೆಗಳಿದ್ದು ಅದನ್ನು ಸರಿಪಡಿಸುವ ಬದಲು, ಬೇರೆ ಕಾನೂನನ್ನು ತರುವುದು ಅನುಮಾನಕ್ಕೆ ಎಡೆಮಾಡಿಕೊಡುತ್ತದೆ.



ಬ್ರಿಜ್‌ಕೋರ್ಸ್ :

ಈ ಎನ್.ಎಂ.ಸಿ ಒಂದು ಹೊಸ ಬ್ರಿಜ್ ಕೋರ್ಸ್ ಎಂಬುದನ್ನು ಜಾರಿಗೊಳಿಸಲಿದೆ. ಈ ಕೋರ್ಸ್‌ನಲ್ಲಿ ಆಯುರ್ವೇದ ಹಾಗೂ ಹೋಮಿಯೋಪತಿ ವೈದ್ಯರಿಗೆ ಆಧುನಿಕ ವೈಜ್ಞಾನಿಕ ವೈದ್ಯ ಪದ್ಧತಿ ಬಗ್ಗೆ ಕೆಲವು ವಾರಗಳ ತರಬೇತಿ ನೀಡಿ ಅವರೂ ಆಧುನಿಕ ವೈದ್ಯರಂತೆ ವೈದ್ಯ ಪರೀಕ್ಷೆ ಹಾಗೂ ಚಿಕಿತ್ಸೆ ಮಾಡಲು ಸಶಕ್ತರಾಗುವಂತೆ ಮಾಡಲು ತೀರ್ಮಾನಿಸಲಾಗಿದೆ.

ಕೆಲವು ವಾರಗಳ ತರಬೇತಿಯಿಂದ ಆಧುನಿಕ ವೈದ್ಯಪದ್ಧತಿಯನ್ನು ತಿಳಿಸಿಕೊಡುವುದು ಅಸಾಧ್ಯ. ಆಗ ಆಯುರ್ವೇದ ಹಾಗೂ ಹೋಮಿಯೋಪತಿ ವೈದ್ಯರು, ಆಯುರ್ವೇದ ಹಾಗೂ ಹೋಮಿಯೋಪತಿ ವಿಧಾನಕ್ಕೆ ಕೈಕೊಟ್ಟ ಅಲೋಪತಿ ಪದ್ಧತಿಯನ್ನು ಮುಂದುವರೆಸುತ್ತಾರೆ ಹಾಗೂ ಇದರಿಂದ ಆಯುರ್ವೇದ ಹಾಗೂ ಹೋಮಿಯೋಪತಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ.

ಈಗ ಆಧುನಿಕ ವೈದ್ಯರು ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ರೀತಿ ಮಾಡಲಾಗುತ್ತದೆ ಎಂಬ ಸರಕಾರದ ವಾದ ಬಾಲಿಶ. ಈ ತರಬೇತಿ ನೀಡಿದ ಆಯುರ್ವೇದ ವೈದ್ಯರು ಗ್ರಾಮೀಣ ಪ್ರದೇಶಕ್ಕೆ ಹೋಗುತ್ತಾರೆ ಎಂಬುದಕ್ಕೆ ಏನು ಗ್ಯಾರಂಟಿ ಇದೆ?

ಭಾರತದಲ್ಲಿ ವೈದ್ಯರ ಸಂಖ್ಯೆ ಕಡಿಮೆ ಆದ್ದರಿಂದ ಆಧುನಿಕ ವೈದ್ಯರನ್ನು ತಯಾರಿಸಲು ಇದೊಂದು ಸೂಕ್ತಮಾರ್ಗ ಎಂಬುದು ಸರಕಾರದ ವಾದ. ಇದು ಇನ್ನೂ ಮೂರ್ಖತನದ ತೀರ್ಮಾನ ನಾಳೆ ಬೇರೆ ಯಾವುದೋ ಪ್ರೊಫೇಶನ್ ನವರನ್ನು ಈ ತರಬೇತಿ ಕೊಟ್ಟು ವೈದ್ಯರನ್ನಾಗಿ ನೇಮಿಸಿಕೊಳ್ಳಲು ಸರಕಾರ ಹಿಂದೇಟು ಹಾಕುವುದಿಲ್ಲ ಎನ್ನಬಹುದೇ?

ಎನ್.ಎಲ್.ಇ: ನ್ಯಾಷನಲ್ ಲೈಸನ್ಸಿಯೇಟ್ ಎಕ್ಸಾಮಿನೇಷನ್ (ಓಐಇ) :

ವೈದ್ಯಕೀಯ (ಅಲೋಪತಿ) ತರಬೇತಿ ನಂತರ ವೈದ್ಯ ವೃತ್ತಿ ಪ್ರಾರಂಭಿಸುವುದಕ್ಕಿಂತ ಮುಂಚೆ ಎಲ್ಲ ವೈದ್ಯರೂ ಎನ್.ಎಲ್.ಇ ಪೂರ್ಣಗೊಳಿಸುವ ಅಗತ್ಯತೆ ಇದೆ ಎಂದು ಸರಕಾರ ಹೇಳುತ್ತದೆ. ಒಬ್ಬ ವೈದ್ಯ ಐದು ವರ್ಷ ವೈದ್ಯಕೀಯ ತರಬೇತಿ ಪಡೆದ ನಂತರ ಪರೀಕ್ಷೆಯಲ್ಲಿ ಪಾಸಾಗಿಯೂ ಈ ಪರೀಕ್ಷೆಯ ಅಗತ್ಯತೆ ಏನಿದೆ? ಅದು ಮೂರ್ಖತನದ ಪರಮಾವಧಿಯಲ್ಲವೇ?

ಆದರೆ ಬ್ರಿಜ್ ಕೋರ್ಸ್‌ನಂತರ ಆಯುರ್ವೇದ ಹಾಗೂ ಹೋಮಿಯೋಪತಿ ವೈದ್ಯರಿಗೆ ಈ ಪರೀಕ್ಷೆ ಇಲ್ಲವೇಕೆ?

ಪ್ರತಿನಿಧಿ :

ಈ ಕೌನ್ಸಿಲ್ ನಲ್ಲಿ 33 ಜನ ಸದಸ್ಯರಿರುತ್ತಾರೆ. ಅದರಲ್ಲಿ 5 ಜನ ಮಾತ್ರ 5 ಭಾಗಗಳಿಂದ (ರಾಜ್ಯಗಳಿಂದ) ಬಂದಿರುತ್ತಾರೆ ಹಾಗೂ ಅವರು ಆರಿಸಿ ಬಂದ ವೈದ್ಯರು ಆದರೆ ಉಳಿದವರೆಲ್ಲ ಸರಕಾರ ನೇಮಿಸಿದ ಸದಸ್ಯರು ಇದಕ್ಕೂ ಮೊದಲಿದ್ದ ಐ.ಎಂ.ಸಿ ಯಲ್ಲಿ 100 ಸದಸ್ಯರಿದ್ದು, ಅದರಲ್ಲಿ 2ನೇ 3 ಭಾಗದಷ್ಟು ಜನರು ವೈದ್ಯರುಗಳಿಂದ ಆರಿಸಿ ಬಂದವರು ಹಾಗೂ ಅವರು ಎಲ್ಲ ರಾಜ್ಯಗಳನ್ನು ಪ್ರತಿನಿಧಿಸುವವರು.

ರಾಜ್ಯ ಮೆಡಿಕಲ್ ಕೌನ್ಸಿಲ್‌ಗಳು :

ರಾಜ್ಯ ಮೆಡಿಕಲ್ ಕೌನ್ಸಿಲ್‌ಗಳು ಇನ್ನು ಮುಂದೆ ಈ ಎನ್.ಎಂ.ಸಿ ರಾಜ್ಯ ಮೆಡಿಕಲ್ ಕೌನ್ಸಿಲ್‌ಗಳನ್ನು ತನ್ನ ಅಡಿಯಲ್ಲಿಟ್ಟುಕೊಂಡು, ಅವು ತಾವೇ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ತಡೆಗಟ್ಟುತ್ತದೆ.

ವೈದ್ಯಕೀಯ ಯುನಿವರ್ಸಿಟಿ :

ವೈದ್ಯಕೀಯ ಯುನಿವರ್ಸಿಟಿಗಳಿಗೆ ಎನ್.ಎಂ.ಸಿ ವ್ಯವಹಾರದಲ್ಲಿ ಪ್ರವೇಶವಿಲ್ಲ, ಹಾಗೂ ಕಡೆಗಣಿಸಲ್ಪಟ್ಟಿವೆ.

ಹೊರದೇಶದ ಪದವೀಧರರು :

ಬೇರೆದೇಶದಲ್ಲಿರುವ ಪದವೀ ಪಡೆದ ವೈದ್ಯರು ಯಾವ ನಿಯಂತ್ರಣವಿಲ್ಲದೇ ಭಾರತದಲ್ಲಿ ವೈದ್ಯ ವೃತ್ತಿ ಪ್ರಾರಂಭಿಸಬಹುದು. ಆದರೆ ಈ ಮೊದಲು ಈ ಹೊರದೇಶದ ಪದವೀಧರರು ಭಾರತದಲ್ಲಿ ವೃತ್ತಿ ಪ್ರಾರಂಭಿಸಲು, ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾಗಿತ್ತು.

ಸೀಟುಗಳನ್ನು ಹೆಚ್ಚಿಸಿಕೊಳ್ಳಬಹುದು :

ಪ್ರತಿಯೊಂದು ವೈದ್ಯ ಕಾಲೇಜು ಯಾರ ಪರವಾನಗಿ ಇಲ್ಲದೇ ಪದವಿ–ಪೂರ್ವ ಹಾಗೂ ಸ್ನಾತಕೋತ್ತರ ಪದವಿಗೆ, ತಾವೇ ಸೀಟುಗಳನ್ನು ಹೆಚ್ಚಿಸಿಕೊಳ್ಳಬಹುದು. ಕೇವಲ 40% ಸೀಟುಗಳ ಮೇಲೆ ರಾಜ್ಯ ಸರಕಾರ ನಿಯಂತ್ರಣ ಪಡಬಹುದಾಗಿದ್ದು, ಇನ್ನುಳಿದ 60% ಸೀಟುಗಳ ಮೇಲೆ ಸಂಸ್ಥೆ ತನಗೆ ಬೇಕಾದಷ್ಟು ಹಣ ಪಡೆಯಬಹುದು. ಈ ರೀತಿ, ಎಲ್ಲ ನಿಯಂತ್ರಣಗಳ್ನು ತೆಗೆದುಹಾಕಿದೆ.

ಚರ್ಚೆ :

ಸರಕಾರದ ಎಲ್ಲ ನೀತಿಗಳನ್ನು ನೋಡಿದರೆ ಅದು 'ಸಂಪ್ರದಾಯ'ವನ್ನು ವೈಭವೀಕರಿಸುವ ಸರಕಾರವೆಂದು ಹೇಳಬಹುದು. ಅದರ ವೈಜ್ಞಾನಿಕ ನೀತಿಗಳನ್ನು ಪರಿಶೀಲಿಸಿದರೆ ಅದಕ್ಕೆ ಸರಕಾರವನ್ನು ನಡೆಸಲು ಬರುತ್ತದೆಯೊ ಎಂದು ಅನುಮಾನಬರುತ್ತದೆ.

ಐ.ಎಂ.ಸಿ. ಯಲ್ಲಿ ಅನೇಕ ತಪ್ಪುಗಳಾಗಿವೆ, ಅದನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯವಾಗಿತ್ತು. ಅದಕ್ಕೆ ಕಾರಣ ಈ ಕೆಳಗಿನಂತಿವೆ.

ಆಯುಷ್ ಪದ್ಧತಿ ಬಗ್ಗೆ ಸರಕಾರಕ್ಕೆ ಹೆಚ್ಚು ನಂಬಿಕೆ ಇದೆ. ನಮಗೆ ಗಿಡಮೂಲಿಕೆ ಚಿಕಿತ್ಸೆಗಳು ಯುನಾನಿ ಚಿಕಿತ್ಸೆಗಳು, ಕೆಲವು ಆಯುರ್ವೇದ ಚಿಕಿತ್ಸೆಗಳು ಈಗಲೂ ಪ್ರಸ್ತುತವಾಗಿವೆ. ಆದರೆ ಆಧುನಿಕ ಪದ್ಧತಿ ಇಲ್ಲದೇ, ಆರೋಗ್ಯ ಕ್ಷೇತ್ರವನ್ನು ಮುನ್ನಡೆಸಲು ಸಾಧ್ಯವಿಲ್ಲ. ಗ್ರಾಮೀಣ ಜನರ ದಿನನಿತ್ಯದ ಆರೋಗ್ಯ ಸಮಸ್ಯೆಗೆ ಆಧುನಿಕ ಪದ್ಧತಿ ಪ್ರಾಥಮಿಕ ಹಂತದಲೂ ಚಿಕಿತ್ಸೆಯಾಗಬಲ್ಲದು. ಸರಕಾರ ಆಯುಷ್ ಪದ್ಧತಿಯನ್ನು ವೈಭವೀಕರಿಸುತ್ತಿದೆ. ನಮ್ಮ ದೇಶದ ಪದ್ಧತಿಯನ್ನು ಪ್ರೋತ್ಸಾಹಿಸಬೇಕು ನಿಜ. ಆದರೆ ವೈಭವೀಕರಿಸುವುದು ಅಸಮಂಜಸ. ಇನ್ನು ಮುಂದೆ ಆಯುಷ್ ವೈದ್ಯರು ಆಧುನಿಕ ವೈದ್ಯರು ಆಗುತ್ತಾರಂತೆ!

ಎಂ.ಸಿ.ಐ ತೆಗೆದು ಹಾಕಲು ಹಾಗೂ ರಕ್ಷಿಸಲು ಸರಕಾರಕ್ಕೆ ಯಾವ ಆಧಾರವೂ ಇಲ್ಲ. ಇಲ್ಲಿ ಶಿಕ್ಷೆಯಾಗಬೇಕಾಗಿರುವುದು ಭ್ರಷ್ಟ ಎಂ.ಸಿ.ಐ ಅಧಿಕಾರಿಗಳಿಗೆ. ಆದರೆ ಇನ್ನೂವರೆಗೂ ಅವರ್ಯಾರಿಗೂ ಶಿಕ್ಷೆಯಾಗಿಲ್ಲ ಆದರೆ ಎಂ.ಸಿ.ಐ.ಗೆ ಶಿಕ್ಷೆಯಾಗಿದೆ! ಎಂ.ಸಿ.ಐ. ನಲ್ಲಿ ಭ್ರಷ್ಟಾಚಾರದ ಮೂಲ ವೈದ್ಯಕೀಯ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣ. ಸರಕಾರ ಈ ನೀತಿಯನ್ನು ರಭಸದಿಂದ ಮುಂದುವರೆಸುತ್ತಿದೆ. ಎನ್.ಎಂ.ಸಿ. ಕಾಯಿದೆಯಲ್ಲಿ ಮೇಲೆ ಹೇಳಿದಂತೆ ವ್ಯಾಪಾರೀಕರಣಕ್ಕೆ ಇದ್ದ ಕೆಲವು ಅಡೆತಡೆಗಳನ್ನು ತೆಗೆಯಲಾಗಿದೆ. ವೈದ್ಯರಿಂದ ಚುನಾಯಿತ ಸದಸ್ಯರ ಬದಲು, ಸರಕಾರದಿಂದ ನೇಮಕವಾದ ಸದಸ್ಯರು ಬಹುಮತದಲ್ಲಿರುವ ಸಂಸ್ಥೆ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ ಎಂದು ಯಾವ ಆಧಾರದಲ್ಲಿ ನಿರೀಕ್ಷಿಸಲಾಗುತ್ತಿದೆ? ಅದೂ ಸರಕಾರದ ನೀತಿ ಎಲ್ಲಾ ರಂಗಗಳಲ್ಲೂ ಖಾಸಗೀಕರಣ ಮತ್ತು ವ್ಯಾಪಾರೀಕರಣ ಉತ್ತೇಜಿಸುವುದು ಆಗಿರುವಾಗ. ವೈದ್ಯಕೀಯ ಶಿಕ್ಷಣದ ಹಾಗೂ ಸೇವಾ ಕ್ಷೇತ್ರದ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕ ಕಡಿವಾಣ ಹಾಕದೆ ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವಿಲ್ಲ.

ಎನ್.ಎಂ.ಸಿ ಜಾರಿಗೆ ತರುವುದು ಆಯುರ್ವೇದ ಹಾಗೂ ಹೋಮಿಯೋಪತಿಗೆ ವಿರುದ್ಧವಾಗಿದೆ. ಈಗಲೇ ಹೆಚ್ಚಿನ ಆಯುರ್ವೇದ ಹಾಗೂ ಹೋಮಿಯೋಪತಿ ತಜ್ಞರು ಅಲೋಪತಿ ಔಷಧಿಗಳನ್ನು ಬಳಸುತ್ತಿದ್ದಾರೆ. ಈಗ ಅಲೋಪತಿ ಔಷಧಿಗಳನ್ನು ಬಳಸಲು ಪರವಾನಗಿ ನೀಡಿದರೆ. ಆಯುರ್ವೇದವನ್ನು ಕೈಬಿಡಲು ಅವರು ಮುಂದಾಗುವುದನ್ನು ಸರಕಾರವೇ ನೋಡುತ್ತದೆ.

ಸರ್ವೋಚ್ಛ ನ್ಯಾಯಾಲಯ ಹಿಂದೆ ಈ ಆಯುರ್ವೇದ, ಅಥವಾ ಅಲೋಪತಿ ವೈದ್ಯ, ತರಬೇತಿ ಇಲ್ಲದೇ ಇತರೇ ಪದ್ಧತಿಯ ಔಷಧಿಗಳನ್ನು ಬಳಸುವುದನ್ನು ಖಂಡಿಸಿದೆ. ಈಗ ಬರುತ್ತಿರುವ ಎನ್.ಎಂ.ಸಿ. ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾದುದು.

ಅಲೋಪತಿ ವೈದ್ಯರು ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಕ್ರಮ ಅಗತ್ಯ ಎಂದು ಸರಕಾರ ಹೇಳುತ್ತದೆ. ಇದು ಅರ್ಥಹೀನ ಹಾಗೂ ಸರಕಾರದ ವೈಫಲ್ಯವನ್ನು ತೋರಿಸುತ್ತದೆ.

ಸರಕಾರ ಭ್ರಷ್ಟಾಚಾರ, ಸ್ವಜನ ಪಕ್ಷಪಾತಕ್ಕೆ ಒಂದೇ ಕಿಡಕಿಯನ್ನು ತೆಗೆದಿದೆ. ಸರಕಾರ ಖಾಸಗೀಕರಣ ನೀತಿಗೆ ಮುಂದಾಗಿದೆ. ಇದು ವೈದ್ಯರ ಜನ ಸಾಮಾನ್ಯ ಹಾಗೂ ಎಂ.ಸಿ.ಐ ವಿರುದ್ಧವಾಗಿದೆ ಹಾಗೂ ಇತರೇ ವೈದ್ಯಕೀಯ ಪದ್ಧತಿಯನ್ನು ನ್ಯಾಯಸಮ್ಮತ ಮಾಡಲು ಮುಂದಾಗಿದೆ. ಎನ್.ಎಂ.ಸಿ ಯಾವುದೇ ಸಾರ್ವಜನಿಕ ಹಿತಾಸಕ್ತಿಯ ಪರವಾಗಿಲ್ಲ.

ಇದನ್ನು ವಿರೋಧಿಸಲು ಭಾರತದ ಎಲ್ಲ ವೈದ್ಯರು 2ನೇ ಜನವರಿ 2018 ರಂದು ತಮ್ಮ ಹೊರರೋಗಿ ವಿಭಾಗವನ್ನು ಮುಚ್ಚಿ ವಿರೋಧ ವ್ಯಕ್ತಪಡಿಸಿದ್ದಾರೆ. ಸರಕಾರ ಇದನ್ನು ಗಮನಿಸಿದೆಯೇ? ಈ ಬೆಳವಣಿಗೆ ಭಾರತದ ವೈದ್ಯಕ್ಷೇತ್ರಕ್ಕೆ ಹಾಗೂ ಜನಸಾಮಾನ್ಯರಿಗೆ ಅಪಾಯ ತರುತ್ತದೆ. ●

ಕಂದಾವರ 147 ನಿವೇಶನ ರಹಿತ ಕುಟುಂಬಗಳ ಬಲವಂತ ತೆರವು

ವೆಂಕಟೇಶ ಕೋಣಿ



ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಕಂದಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಟ್ವಾಡಿಯಲ್ಲಿ 9.5 ಎಕ್ರೆ ಸರಕಾರಿ ಜಾಗದಲ್ಲಿ ತಾತ್ಕಾಲಿಕ ಶೆಡ್, ಜೋಪಡಿಗಳನ್ನು ನಿರ್ಮಿಸಿ ವಾಸಿಸುತ್ತಿದ್ದ 147 ಕುಟುಂಬಗಳಿಗೆ ಬೆಳ್ಳಂಬೆಳಿಗ್ಗೆ ಅಘಾತ ಎದುರಾಯಿತು. ಕುಂದಾಪುರ ತಹಶೀಲ್ದಾರ ನೇತೃತ್ವದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಪೊಲೀಸರ ಸಹಕಾರದೊಂದಿಗೆ 4–5 ತಿಂಗಳಿಂದ ಕಟ್ಟಿಕೊಂಡಿದ್ದ ಮನೆಗಳನ್ನು ಏಕಾಏಕಿ ಯಾವುದೇ ಪೂರ್ವ ಸೂಚನೆ ನೀಡದೇ ನೆಲಸಮ ಗೊಳಿಸಿದ್ದಾರೆ.

ಸುಮಾರು 200ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯ ನೆರವಿನಿಂದ ಜೆಸಿಬಿ ಬಳಸಿ ಶೆಡ್, ತಾತ್ಕಾಲಿಕ ಮನೆಗಳನ್ನು ಕಡವಿದ್ದಾರೆ. ಈ ವೇಳೆ ಪ್ರತಿರೋಧ ತೋರಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸಹಿತ ನಿವೇಶನ ರಹಿತ ಒಟ್ಟು 8 ಮಂದಿಯನ್ನು ಬಂಧಿಸಿದ್ದಾರೆ.

ಕಂದಾವರ ಗ್ರಾಮದಲ್ಲಿ ಸ್ವಂತ ಮನೆ, ಭೂಮಿ ಹೊಂದಿರದ ಹಾಗೂ ಬಾಡಿಗೆ ಮನೆಗಳಲ್ಲಿದ್ದ ಈ ಕುಟುಂಬಗಳು ಅದನ್ನು ಬಿಟ್ಟು ಇಲ್ಲಿ ಬಂದು ಶೆಡ್, ಜೋಪಡಿಗಳಲ್ಲಿ ವಾಸಿಸುತ್ತಿದ್ದರು. ಬೇರೆ ಸೂರಿನ ವ್ಯವಸ್ಥೆಯಿಲ್ಲದ ಕಾರಣ ಇಲ್ಲೆ ನೆಲೆಸಿದ್ದಾರೆ. ಆದರೆ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಮನೆಗಳ ಕೆಡವಿದ್ದಾರೆ. ಮನೆ ನಿವೇಶನಗಳನ್ನು ತೆರವು ಗೊಳಿಸುವ ಸಂದರ್ಭದಲ್ಲಿ ಕೆಲವು ಗುಡಿಸಲುಗಳಿಗೆ ಬೆಂಕಿ ಬಿದ್ದಿದ್ದು, ಗುಡಿಸಲು ಸಂಪೂರ್ಣ ಸುಟ್ಟು ಹೋಯಿತು. ಇದರಿಂದ ಕೆಲಕಾಲ ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಂತ್ರಸ್ತರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು.

ನಿವೇಶನ ರಹಿತರು 24 ಎಕ್ರೆ ಜಾಗದಲ್ಲಿ ಮನೆ ನಿರ್ಮಿಸಿ ನೆಲೆಸಿದ್ದವರ ಮೇಲೆ ಅಧಿಕಾರಿಗಳು ಪೊಲೀಸ್ ಬಲ ಬಳಸಿ ತೆರವುಗೊಳಿಸಿರುವುದು ಖಂಡನೀಯ. ನಿವೇಶನ ರಹಿತ ದಲಿತರಿಗೆ ಹಾಗೂ ಇತರರಿಗೆ ಮನೆ, ನಿವೇಶನ ಹಕ್ಕು ಪತ್ರ ಮತ್ತು ನಷ್ಟ ಪರಿಹಾರವನ್ನು ಕೂಡಲೇ ಸರಕಾರ ನೀಡಬೇಕು ಎಂದು ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಆಗ್ರಹಿಸಿದರು.

ನಿವೇಶನ ರಹಿತರ ಜೋಪಡಿ ತೆರವು ಮಾಡಿದ ಸರಕಾರದ ಜನವಿರೋಧಿ ಕ್ರಮವನ್ನು ಸಿಐಪಿ(ಎಂ) ಉಡುಪಿ ಜಿಲ್ಲಾ ಸಮಿತಿ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕೆ. ಶಂಕರ, ಮಹಾಬಲ ವಡೇರ ಹೋಬಳಿ, ಎಚ್. ನರಸಿಂಹ, ಸುರೇಶ ಕಲ್ಲಾಗರ ತೀವ್ರವಾಗಿ ಖಂಡಿಸಿದರು ಹಾಗೂ ಕಂದಾವರ ಗ್ರಾಮದ ನಿವೇಶನ ರಹಿತರ ಗುಡಿಸಲು ನೆಲಸಮವನ್ನು ಖಂಡಿಸಿ, ಅವರಿಗೆ ನಿವೇಶನ ನೀಡಿ ಹಕ್ಕು ಪತ್ರ ಕೊಡುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಕುಂದಾಪುರ ತಾಲೂಕು ಕಛೇರಿ ಮುತ್ತಿಗೆ ಹೋರಾಟ ಕಾರ್ಯಕ್ರಮಕ್ಕೆ ಬೆಂಬಲ ವ್ಯಕ್ತ ಪಡಿಸಲಾಯಿತು.

ಸುಮಾರು 70 ಪರಿಶಿಷ್ಠ ಜಾತಿ ಸೇರಿದಂತೆ ಒಟ್ಟು 150 ಕ್ಕೂ ಹೆಚ್ಚು ನಿವೇಶನ ರಹಿತ ಕುಟುಂಬಕ್ಕೆ ಸ್ಥಳೀಯ ಗ್ರಾಮ ಪಂಚಾಯತ್ ಆಡಳಿತ ನಿವೇಶನ ರಹಿತರ ಅಂತಿಮ ಪಟ್ಟಿ ಈವರೆಗೆ ಸಿದ್ಧಪಡಿಸದ ಕ್ರಮವನ್ನು ಖಂಡಿಸಿ– ಗ್ರಾಮ ಪಂಚಾಯತ್ ಕಛೇರಿ ಎದ್ರು ಕೂಡಾ ಸಂಘರ್ಷಾತ್ಮಕ ಹೋರಾಟ ನಡೆಸಲಾಗುವುದು ಎಂದು ಕೃಷಿ ಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ನಾಗರತ್ನ ನಾಡ, ಶೀಲಾವತಿ ಪಡುಕೋಣೆ ಹೇಳಿದರು.

150 ಕ್ಕೂ ಹೆಚ್ಚು ಗುಡಿಸಲುಗಳ ತೆರವು ಮಾಡಿರುವುದನ್ನು ಪ್ರತಿರೋಧ ವ್ಯಕ್ತ ಪಡಿಸಿದ ನಿವೇಶನ ರಹಿತರ ಹೋರಾಟ ಸಮಿತಿಯ ಮುಖಂಡರಾದ ವೆಂಕಟೇಶ ಕೋಣಿ, ದಿನೇಶ, ರಾಜೀವ ಮೂಡ್ಲಕಟ್ಟೆ, ಗಣೇಶ, ರವಿ ಅನಂತ, ಜಗದೀಶ ಚಂದ್ರ ಇವರನ್ನು ವಶಕ್ಕೆ ತೆಗೆದುಕೊಂಡ ಪೊಲೀಸರು ಮಧ್ಯಾಹ್ನ ಬಿಡುಗಡೆಗೊಳಿಸಿದರು.

ಇವರನ್ನು ಬಂಧಿಸಿ ಕಂಡ್ಲೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದು ಒಯ್ಯಲಾಯಿತು. ತೆರವು ಕಾರ್ಯಚರಣೆಯನ್ನು ತೀವ್ರವಾಗಿ ವಿರೋಧ ಮಾಡಿರುವ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಅವರು 10 ಎಕ್ರೆಗಿಂತ ಜಾಸ್ತಿ ಜಮೀನು ಹೊಂದಿರುವ ಭೂಮಾಲಿಕರಿಗೆ ಕುಮ್ಕಿ ಹಕ್ಕಿನ ನೆಪದಲ್ಲಿ ಎಕ್ರೆಗಟ್ಟಲೆ ಹೆಚ್ಚಿನ ಜಮೀನು ನೀಡಲಾಗುತ್ತಿದೆ. ಆದರೆ, ಸರಕಾರಿ ಜಾಗದಲ್ಲಿ ಮನೆ ಕಟ್ಟಿ ವಾಸಿಸುತ್ತಿರುವ ಬಡ ಕುಟುಂಬಗಳನ್ನು ಬಲವಂತವಾಗಿ ಓಡಿಸಲಾಗುತ್ತಿದೆ. 94ಸಿ ಅಡಿಯಲ್ಲಿ ಸರಕಾರಿ ಜಾಗ ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡವರಿಗೆ ಹಕ್ಕು ಪತ್ರ ನೀಡುತ್ತೇವೆ ಎನ್ನುವ ಸರಕಾರದ ಘೋಷಣೆಗೆ ವಿರುದ್ಧವಾಗಿದೆ ಎಂದು ಅವರು ಆರೋಪಿಸಿದರು.

ಜನವರಿ 16 ರಂದು ಹೋರಾಟ :

ಕಂದಾಯ ಇಲಾಖೆಯ ಕ್ರಮವನ್ನು ವಿರೋಧಿಸಿ 155 ಕುಟುಂಬಗಳಿಗೆ ನೆಲೆ ಒದಗಿಸುವ ಕಾರ್ಯ ಮಾಡದೆ ಏಕಾಏಕಿ ಅವರನ್ನು ತೆರವುಗೊಳಿಸಿ ಬೀದಿಗೆ ಅಟ್ಟಿದ ತಾಲೂಕು ಆಡಳಿತದ ವಿರುದ್ಧ ಜನವರಿ 16 ರಂದು ಉಗ್ರ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. ಶಾಸ್ತ್ರಿ ವೃತ್ತದಿಂದ ಬೃಹತ್ ಪ್ರತಿಭಟನಾ ಮೆರವಣಿಗೆಯ ಮೂಲಕ ತಾಲೂಕು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಲಾಗುವುದು.

ಘಟನೆ–1

ಜಿಗ್ನೇಶ್ ಮೇವಾನಿ ಆಗಷ್ಟೆ ಚುನಾವಣೆ ಗೆದ್ದಿದ್ದರು. ಮಿಶನ್ 150 ಎಂದು ಹೂಂಕರಿಸುತ್ತಿದ್ದವರು 99ಕ್ಕೆ ಬಂದು ನಿಂತಿದ್ದರು. ಮೇವಾನಿ ಕುಟುಕಿದರು, ಮೋದಿಜೀ ವಯಸ್ಸಾಯ್ತು ನಿಮಗೆ, ನಿಮ್ಮ ಮಾತು ಬೋರೋ ಬೋರು. ಹೇಳಿದ್ದೇ ಹೇಳ್ತೀರಿ. ಎರಡು ಕೋಟಿ ಜನರಿಗೆ ಉದ್ಯೋಗ ಕೊಡ್ತೀನಿ ಅಂದ್ರಿ, ಕೊಡಲಿಲ್ಲ. ಯಾಕೋ ಸುಸ್ತಾಗಿದ್ದೀರ. ಹಿಮಾಲಯಕ್ಕೆ ಹೋಗಿ, ಮೂಳೆ ಸವೆಸಿ ಎಂದುಬಿಟ್ಟರು. ಬಿಜೆಪಿಯ ಅಧಿನಾಯಕನನ್ನು ತಮ್ಮ ವಯೋಸಹಜ ತುಂಟತನದಿಂದ ಜಿಗ್ನೇಶ್ ಒಂಚೂರು ಜಾಸ್ತಿನೇ ಕಾಲೆಳೆದಿದ್ದರು.

ತಮಾಶೆ ಎಂದರೆ ಬಿಜೆಪಿಗರು ಮೇವಾನಿ ಮಾತಿಗೆ ರಿಯಾಕ್ಟ್ ಮಾಡೋದಕ್ಕೂ ಆಗದೆ ದಿಗ್ಭ್ರಮೆಯಲ್ಲಿದ್ದರೆ ಮೋದಿಭಕ್ತ ಮೀಡಿಯಾಗಳು ಜಿಗ್ನೇಶ್ ಮೇಲೆ ಬಿದ್ದವು. ಜಿಗ್ನೇಶ್ ಕ್ಷಮೆ ಕೇಳಬೇಕು ಅನ್ನೋದು ಅವುಗಳ ಆಗ್ರಹ. ಇಂದ್ರ, ಚಂದ್ರ, ಸೂಪರ್ ಸ್ಟಾರ್, ಜಗದೇಕವೀರ, ಪವರ್ ಸ್ಟಾರ್ ಇತ್ಯಾದಿ ಹಾಡಿಹೊಗಳುತ್ತಿದ್ದ ಮೀಡಿಯಾಗಳು ಇಂಥ ಮಾತನ್ನು ಅರಗಿಸಿಕೊಳ್ಳುವುದಾದರೂ ಹೇಗೆ ಸಾಧ್ಯವಿತ್ತು? ಜಿಗ್ನೇಶ್ ಮಾತನಾಡಿಸಿದ ರಿಪಬ್ಲಿಕ್ ಟಿವಿಯ ವರದಿಗಾರ್ತಿ ಎಂಬ ಭಕ್ತೆ ಅಕ್ಷರಶಃ ಕಣ್ಣೀರು ಹಾಕೋದೊಂದು ಬಾಕಿ ಇತ್ತು. ಸಾರಿ ಕೇಳಿ ಅಂತ ಇವಳು, ನಾನು ಕೇಳಲ್ಲ ಅಂತ ಇವನು. ಜಿಗ್ನೇಶ್ ಮೂತಿ ಬಳಿ ಮೈಕ್ ತಂದು ಮತ್ತೆ ಏನಾದರೂ ಬಾಂಬು ಹಾಕಿಬಿಟ್ಟಾನು ಎಂದು ಹೆದರಿ ಪದೇಪದೇ ಮೈಕು ಹಿಂದಕ್ಕೆ ಎಳೆದು ಆತನ ಮಾತು ಕೇಳದಂತೆ ಮಾಡಿದಳು. ಆದರೆ ಜಿಗ್ನೇಶ್ ಬಾಡಿ ಲಾಂಗ್ವೇಜ್, ಕಣ್ಣಿನ ಹೊಳಪು, ಆತ್ಮವಿಶ್ವಾಸದ ನುಡಿಗಳು ಆಕೆಯನ್ನು ಸೋಲಿಸಿಬಿಟ್ಟಿತ್ತು.

ಘಟನೆ–2

ಭೀಮಾ ಕೋರೆಗಾಂ ವಿಜಯೋತ್ಸವಕ್ಕೂ ಮುನ್ನ ಜಿಗ್ನೇಶ್ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ್ದರು. ನಾನು ಶಾಸಕನಾಗಿದ್ದೇನೆ, ಶಾಸನಸಭೆಯಲ್ಲಿ ಧ್ವನಿ ಎತ್ತುತ್ತೇನೆ. ಆದರೆ ಅಷ್ಟು ಸಾಲದು, ನಾವು ನಮ್ಮ ಸಂಘರ್ಷವನ್ನು ಜಾರಿಯಲ್ಲಿ ಇಟ್ಟರಬೇಕು ಎಂದರು. ಕೋರೆಗಾಂನಲ್ಲಿ ಚಿತ್ಪಾವನರು ಗಲಭೆ ಹೊತ್ತಿಸಿದರು. ದಲಿತರ ಮೇಲೆ ಹಲ್ಲೆ ನಡೆಸಿದರು. ರಿಪಬ್ಲಿಕ್ ಟಿವಿ ಮತ್ತೆ ತನ್ನ ತಲೆಹಿಡುಕ ಬುದ್ಧಿ ತೋರಿಸಿತು. ಜಿಗ್ನೇಶ್ ಹೇಳಿದ 'ಬೀದಿ ಸಂಘರ್ಷ' ಪದವನ್ನೇ ಇಟ್ಟುಕೊಂಡು, ಗಲಭೆಗೆ ಜಿಗ್ನೇಶ್ ಕುಮ್ಮಕ್ಕು ಕೊಟ್ಟಿದ್ದಾರೆ ಎಂದು ಅಬ್ಬರಿಸಿ ಬೊಬ್ಬಿರಿಯಿತು. ಅರ್ನಾಬ್ ಹೀಗೆ ಊಳಿಡುವಾಗ ಮಹಾರಾಷ್ಟ್ರ ಬಿಜೆಪಿ ಸರ್ಕಾರ ಸುಮ್ಮನೇ ಇರಲು ಸಾಧ್ಯವೇ? ಜಿಗ್ನೇಶ್ ಮೇಲೊಂದು ಎಫ್ ಐಆರ್ ಒಗೆದೇಬಿಟ್ಟಿತು.

ಘಟನೆ–3

ಜಿಗ್ನೇಶ್ ಕಳೆದ ವರ್ಷ ಆಗಸ್ಟ್ 15ರಂದು ಒಂದು ವಿಚಾರ ಸಂಕಿರಣದಲ್ಲಿ ಆಡಿದ್ದ ಮಾತುಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬೇಕಾದೆಡೆ ಕತ್ತರಿಸಿ ವಿಡಿಯೋ ತಯಾರಿಸಲಾಯಿತು. ಅದನ್ನು ಇದೇ ರಿಪಬ್ಲಿಕ್ ಟಿವಿಯಾದಿಯಾಗಿ ಭಕ್ತ ಮೀಡಿಯಾಗಳು ಪ್ರಸಾರ ಮಾಡಿದವು. ನಮ್ಮ (ದಲಿತರ) ಸಹಜ ಮಿತ್ರ ಎಡಪಂಥೀಯರಾಗಬೇಕೇ ಹೊರತು ಬಲಪಂಥೀಯರಲ್ಲ. ಈ ವಿಷಯದಲ್ಲಿ ಬಾಬಾಸಾಹೇಬರು ಅವರು ಭಿನ್ನ ನಿಲುವು ತಳೆದಿದ್ದರೂ ನಾನು ಅವರಿಗೆ ಭಿನ್ನ ನಿಲುವು ತಳೆಯಲು ಬಯಸುತ್ತೇನೆ. ಹೀಗೆ ಭಿನ್ನ ನಿಲುವು ತಳೆಯುವುದನ್ನೂ ನಮಗೆ ಬಾಬಾಸಾಹೇಬರೇ ಹೇಳಿಕೊಟ್ಟಿದ್ದಾರೆ ಎಂದಿದ್ದರು ಜಿಗ್ನೇಶ್. ಈ ಹೇಳಿಕೆಯಲ್ಲಿ ಆಕ್ಷೇಪಾರ್ಹವಾದದ್ದು ಏನೂ ಇಲ್ಲದೇ ಇದ್ದರೂ ಜಿಗ್ನೇಶ್ ಮೇಲೆ ನೂರೆಂಟು ಬಾಣಗಳನ್ನು ತೂರಲಾಯಿತು. ತಮಾಶೆಯೆಂದರೆ ಮನುವಾದಿ ಮೀಡಿಯಾ ತೋಡಿದ ಹಳ್ಳಕ್ಕೆ ಪ್ರಗತಿಪರರೆನಿಸಿದವರೂ ಬಿದ್ದಿದ್ದರು. ಇದಲ್ಲದೆ ಬಲಪಂಥೀಯರ ಸಹವಾಸ ಮಾಡಿ ಬಂದವರಿಗೆ ಜಿಗ್ನೇಶ್ ಮಾತು ಮರ್ಮಕ್ಕೆ ತಾಕಿಬಿಟ್ಟಿತ್ತು. ಹೀಗಾಗಿ ಎಲ್ಲ ಕಡೆ ಮಾತಿನ ಕೂರಂಬುಗಳು, ಕೊಳಕು ಬೈಗುಳ.

ಕೊನೇಮಾತು

ಇದೆಲ್ಲವನ್ನೂ ಗಮನಿಸುತ್ತಿದ್ದರೆ ದೇಶಕ್ಕೊಬ್ಬ ಹೊಸ ನಾಯಕ ಸಿಕ್ಕಿದ್ದಾನೆ ಎಂದೇ ಭಾವಿಸಬೇಕಾಗುತ್ತದೆ. ಜಿಗ್ನೇಶ್ ಗೆ ಈ ತಲೆಮಾರಿನ ತಲ್ಲಣಗಳು ಸರಿಯಾಗಿಯೇ ಅರ್ಥವಾಗಿದೆ. ಫ್ಯಾಸಿಸ್ಟ್ ವಿರೋಧಿ ಶಕ್ತಿಗಳು ತಮ್ಮತಮ್ಮ ಮಡಿವಂತಿಕೆ, ಸಣ್ಣತನಗಳನ್ನು ಬಿಟ್ಟು ಒಂದಾದರಷ್ಟೆ ಈ ದೇಶಕ್ಕೆ ಉಳಿಗಾಲ ಎಂದು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದಾರೆ. ತನ್ನ ಚುನಾವಣಾ ಕ್ಷೇತ್ರದಲ್ಲಿ ಜಿಗ್ನೇಶ್ ಮಾಡಿ ಗೆದ್ದಿದ್ದು ಇದೇ ಪ್ರಯೋಗವನ್ನು. ಜಿಗ್ನೇಶ್ ವಿರುದ್ಧ ಈ ಮಟ್ಟದಲ್ಲಿ ಅಸಹನೆಗಳು ಬೆಳೆಯುತ್ತಿರುವುದನ್ನು ಗಮನಿಸಿದರೆ ಆತ ಹಿರಿದಾಗಿ ಬೆಳೆಯುತ್ತಿದ್ದಾನೆ ಎಂದು ಅರ್ಥಮಾಡಿಕೊಳ್ಳಬೇಕು. ಈ ಕಾಲದ ಜನರ ಆತಂಕ, ಸಂಕಟಗಳನ್ನು ಅರ್ಥಮಾಡಿಕೊಳ್ಳದ ಔಟ್ ಡೇಟೆಡ್ ರಾಜಕಾರಣಿಗಳಿಗಿಂತ, ವಯೋ ಸಹಜ ಸಿಟ್ಟುಸೆಡವಿನ, ಎಲ್ಲರನ್ನು ಒಳಗೊಳ್ಳುವ ರಾಜಕಾರಣದ ಮಾದರಿಯನ್ನು ಇಷ್ಟಪಡುವ, ಆಗಾಗ ತುಂಟತನ ತೋರುವ ಫೈರ್ ಬ್ರಾಂಡ್ ಜಿಗ್ನೇಶ್ ನನಗಿಷ್ ಉರ್ಕೊಳ್ಳೋರು ಉರ್ಕೊಳ್ಳಲಿ. ಈತ ರಾಷ್ಟ್ರನಾಯಕನಾಗಿ ಬೆಳೆಯಲಿ. ಹೊಸಕಾಲದ ಜನರ ತಲ್ಲಣಗಳಿಗೆ ಧ್ವನಿಯಾಗಲಿ, ಲವ್ ಯೂ ಬ್ರೊ.

– ದಿನೇಶ್ ಕುಮಾರ್ ಎಸ್.ಸಿ.

ಕಡಲ ಕಡೆ

ಕೊಲೆಗಳನ್ನು ಮತೀಯ ರಾಜಕಾರಣಕ್ಕೆ ಬಳಕೆ : ಡಿವೈಎಫ್‌ಐ ಪ್ರತಿಭಟನೆ

ವಾಸುದೇವ ಉಚ್ಚಿಲ

ಕಳೆದ 6 ತಿಂಗಳುಗಳಿಂದ ದ.ಕ.ಜಿಲ್ಲೆಯಲ್ಲಿ ಮತೀಯವಾದಿ ಸಂಘಟನೆಗಳ ಕಾರ್ಯಕರ್ತರು ಹತ್ಯಾ ವಿನೋದದಲ್ಲಿ ತೊಡಗಿದ್ದಾರೆ. ಬಂಟ್ವಾಳದ ಶರತ್ ಮಡಿವಾಳನ ಕೊಲೆಯ ಬೆನ್ನಲ್ಲಿ ಅಶ್ರಫ್ ಎಂಬಾತನ ಕೊಲೆಯಾಯಿತು. ಮೊದಲನೆಯವನು ಆರೆಸ್ಸೆಸ್ ಕಾರ್ಯಕರ್ತನಾಗಿದ್ದರೆ, ಇನ್ನೊಬ್ಬಾತ ಎಸ್‌ಡಿಪಿಐ ಪಕ್ಷದ ಸ್ಥಳಿಯ ಕಾರ್ಯಕರ್ತ. ಶರತ್ ಎಸ್‌ಡಿಪಿಐ–ಪಿಎಫ್‌ಐ ಬಳಗದ ಕಾರ್ಯಕರ್ತರಿಂದ ಹತನಾಗಿದ್ದರೆ, ಅಶ್ರಫ್ ಸಂಘ ಪರಿವಾರದ ಕಾರ್ಯಕರ್ತರಿಂದ ಹತ್ಯೆಗೀಡಾಗಿದ್ದಾನೆ. ಎರಡೂ ಕಡೆಯ ಮತೀಯ ಸಂಘಟನೆಗಳು ಜನರ ಮಧ್ಯೆ ದ್ವೇಷವನ್ನು ಬೆಳೆಸುತ್ತಾ ಹೋಗಿವೆ.

ಬಂಟ್ವಾಳ ತಾಲೂಕಿನಲ್ಲಿ ನಡೆದ ಮತೀಯ ಹಿಂಸೆ, ದ್ವೇಷವನ್ನು ಶಮನಗೊಳಿಸಲು ಅಲ್ಲಿನವರೇ ಆದ ಸಚಿವ ಬಿ.ರಮಾನಾಥ ರೈಯವರ ನೇತೃತ್ವದಲ್ಲಿ ತಿಂಗಳ ಹಿಂದೆ ನಡೆದ ಸಾಮರಸ್ಯ ನಡಿಗೆ ಯಶಸ್ವೀ ಮುಕ್ತಾಯ ಕಂಡಿದೆ ಎನ್ನುತ್ತಿರುವಾಗಲೇ ಮಂಗಳೂರು ತಾಲೂಕಿನ ಸುರತ್ಕಲ್ ಮತ್ತು ಕೊಟ್ಟಾರದಲ್ಲಿ ನಡೆದ ಕೊಲೆಗಳು ಜಿಲ್ಲೆಯಲ್ಲಿ ಮತ್ತೆ ಕೋಮು ಧ್ರುವೀಕರಣಕ್ಕೆ ಎಣ್ಣೆ ಹೊಯ್ಯುತ್ತಿವೆ. ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಇಂಥದೊಂದು ಧ್ರುವೀಕರಣ ನಡೆಯಬೇಕೆಂದು ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನಿಸುತ್ತಿದೆ. ಅದಕ್ಕೆ ಅಲ್ಪಸಂಖ್ಯಾತ ಮುಸ್ಲಿಂ ಮತೀಯವಾದಿ ಸಂಘಟನೆಗಳೂ ಪ್ರಚೋದನೆ ನೀಡುತ್ತಿವೆ.

ಜನವರಿ 3 ರಂದು ನಡೆದ 2 ಕೊಲೆಗಳೂ ಅಮಾಯಕರ ಕೊಲೆಗಳು ಎಂಬುದು ವಿಷಾದದ ವಿಚಾರ. ಈಗ ತಿಳಿದು ಬಂದಿರುವಂತೆ ಬೆಳಿಗ್ಗೆ ಸುರತ್ಕಲ್ ಬಳಿ ಕೊಲೆಯಾದ ದೀಪಕ್ ರಾವ್ ಎಂಬ 23 ವರ್ಷದ ಯುವಕ ಯಾವ ಸಂಘಟನೆಗಳಲ್ಲೂ ಗುರುತಿಸಿಕೊಂಡಿಲ್ಲ. ಈತ ಎಲೆಕ್ಟ್ರಾನಿಕ್ಸ್ ಅಂಗಡಿಯೊಂದರಲ್ಲಿ ಮಾರಾಟಗಾರನಾಗಿದ್ದ. ಆತನ ಕೊಲೆಗೈದ ಪಾತಕಿಗಳಲ್ಲಿ ಸೆರೆ ಸಿಕ್ಕಿದ ನಾಲ್ವರು ಮುಸ್ಲಿಂ ಯುವಕರು, ಆದರೆ ಅವರು ಯಾವುದೇ ಮತೀಯ ಸಂಘಟನೆಗಳಲ್ಲಿ ಭಾಗಿಯಾಗಿಲ್ಲ ಎಂದು ತಿಳಿದು ಬರುತ್ತದೆ. ಈ ಕೊಲೆ ಒಂದು ಅಪರಾಧ ಕೃತ್ಯ. ಬೇರೆಯೇ ಕಾರಣಗಳಿಗಾಗಿ ನಡೆದುದು. ಆದರೆ ಅದನ್ನು ಮುಸ್ಲಿಂ ಭಯೋತ್ಪಾದಕ ಸಂಘಟನೆಗಳು ನಡೆಸಿದ ಕೃತ್ಯ ಎಂದು ಅದೇ ದಿನ ಸಾಮಾಜಿಕ ಜಾಲ ತಾಣಗಳಲ್ಲೂ, ದೃಶ್ಯ ಮಾಧ್ಯಮಗಳಲ್ಲೂ ಪ್ರಚಾರ ನಡೆಯಿತು. ಇದರಿಂದ ಪ್ರಚೋದನೆ ಪಡೆದ ಸಂಘ ಪರಿವಾರದ ನಾಲ್ವರು ಪಾತಕಿಗಳು ಅದೇ ದಿನ ರಾತ್ರಿ ಯಾವನಾದರೊಬ್ಬ ಮುಸ್ಲಿಮನನ್ನು ಕೊಂದೇ ತೀರಬೇಕೆಂಬ ನಿರ್ಧಾರಕ್ಕೆ ಬಂದಂತೆ ಕಾಣುತ್ತದೆ. ಮಂಗಳೂರು ಆಕಾಶಭವನದಲ್ಲಿ ಮನೆ ಮಾಡಿದ್ದ ಕೊಟ್ಟಾರ ಬಳಿ ಫಾಸ್ಟ್‌ಫುಡ್ ಹೋಟೇಲ್ ನಡೆಸುತ್ತಿದ್ದ ಸಂಸಾರಿಗ 47 ವರ್ಷ ಪ್ರಾಯದ ಅಮಾಯಕ ಬಶೀರ್ ಬಲಿಯಾದರು.

ಜನವರಿ 9 ರ ಸಾಯಂಕಾಲ ಸುರತ್ಕಲ್ ಬಳಿಯ ಕಾನದಲ್ಲಿ ದೀಪಕ್‌ನ ಮನೆಗೆ ಅನತಿ ದೂರದಲ್ಲಿ ಡಿವೈಎಫ್‌ಐ ವತಿಯಿಂದ ದುರ್ದೈವಿಗಳಾದ ಇಬ್ಬರು ಮೃತ ನಾಗರಿಕರಿಗೆ ಮೊಂಬತ್ತಿ ಹಚ್ಚಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಜಿಲ್ಲಾಡಳಿತ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಬೇಕೆಂದು ಆಗ್ರಹಿಸಲಾಯಿತು. ಜಿಲ್ಲೆಯಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಪಾಡಬೇಕೆಂದು ಜಿಲ್ಲೆಯ ಜನತೆಗೆ ಕರೆಕೊಡಲಾಯಿತು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು.

ಜನವರಿ 10ರ ಸಾಯಂಕಾಲ ಡಿವೈಎಫ್‌ಐ ಉಳ್ಳಾಲ ಸಮಿತಿ ನೇತೃತ್ವದಲ್ಲಿ ತೊಕ್ಕೊಟ್ಟು ಬಸ್ ನಿಲ್ದಾಣದಲ್ಲಿ ಮೊಂಬತ್ತಿ ಹಚ್ಚಿ ಹತ್ಯೆಗೀಡಾದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭೆಯನ್ನುದ್ದೇಶಿಸಿ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಉಳ್ಳಾಲ ವಲಯಾಧ್ಯಕ್ಷ ಜೀವನ್‌ರಾಜ್ ಕುತ್ತಾರ್, ಕಾರ್ಯದರ್ಶಿ ರಜಾಕ್ ಮೊಂಟೆಪದವು ಮಾತನಾಡಿದರು.

ಜನವರಿ 10ರ ಸಾಯಂಕಾಲ ಇನ್ನೊಂದೆಡೆ ಬಜಾಲು ಪಕ್ಕಲಡ್ಕದಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ಮೊಂಬತ್ತಿ ಹಚ್ಚಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭೆಯನ್ನುದ್ದೇಶಿಸಿ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಿಪಿಐ(ಎಂ)ನ ಅಶೋಕ್ ಸಾಲ್ಯಾನ್ ಮಾತನಾಡಿದರು. ●

ಎಸ್‌ಎಫ್‌ಐ ನಾಯಕಿಗೆ ಮಾನಸಿಕ ಕಿರುಕುಳ ವಿರುದ್ಧ ದೂರು ದಾಖಲು:



ಎಂ.ಕಾಂ.ವಿದ್ಯಾರ್ಥಿಯೂ ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿಯೂ ಆಗಿರುವ ಮಾಧುರಿ ಬೋಳಾರ್ ಇವರನ್ನು ಸಂಘ ಪರಿವಾರದ ಕೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಮಾನಸಿಕ ಬೆದರಿಕೆ ಒಡ್ಡುತ್ತಿದ್ದಾರೆ.

ಮುಸ್ಲಿಂ ಯುವಕರು ಹಿಂದೂ ಯುವತಿಯರೊಂದಿಗೆ ಮಾತು ಆಡುವುದನ್ನು ಆಕ್ಷೇಪಿಸುವ ಸಂಘ ಪರಿವಾರದ ಕೇಡಿಗಳಿಗೆ ಮಾಧುರಿ ಅವರು ಎಸ್‌ಎಫ್‌ಐನ ಸಂಗಾತಿಗಳಾದ ಹಂಝಾ ಕಿನ್ಯಾ, ಸುಹಾಸ್ ಅಡಿಗ, ಗಣೇಶ್ ಬೋಳಾರ್ ಇವರೊಂದಿಗೆ ಯಾವತ್ತೋ ಸೆಲ್ಫಿ ಚಿತ್ರ ತೆಗೆಸಿಕೊಂಡದ್ದು ಸಿಕ್ಕಿ ಬಿಟ್ಟಿದೆ. ಫೇಸ್‌ಬುಕ್ ಮೂಲಕ ದೊರೆತ ಈ ಚಿತ್ರವನ್ನು ಹಿಂದುತ್ವದ ಕೇಡಿಗಳು ಸಾಮಾಜಿಕ ತಾಣಗಳಲ್ಲಿ ತೇಲಿಬಿಟ್ಟು ಅಪಪ್ರಚಾರ ಮಾಡುತ್ತಿದ್ದಾರೆ. ಹಿಂದೂ ಹುಡುಗಿಯರ ಜೊತೆ ಹಂಝಾ ಕಿನ್ಯಾ ಬೈಕ್‌ನಲ್ಲಿ ಓಡಾಡುತ್ತಿದ್ದಾನೆ, ಈತನ ಬಗ್ಗೆ ಹಿಂದೂ ಕಾರ್ಯಕರ್ತರು ನಿಗಾ ಇಡಬೇಕು ಎಂಬ ಅಡಿಬರಹದೊಂದಿಗೆ ಈ ಚಿತ್ರ ವಾಟ್ಸಾಪ್, ಫೇಸ್‌ಬುಕ್ ಮತ್ತಿತರ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಇದನ್ನು ಲವ್‌ಜಿಹಾದ್ ಎಂಬಂತೆ ಹಿಂದೂತ್ವದ ಕೇಡಿಗಳು ನಿರೂಪಿಸುತ್ತಿದ್ದಾರೆ. ಎಸ್‌ಎಫ್‌ಐ ಡಿವೈಎಫ್‌ಐಗಳ ಸಕ್ರಿಯ ಕಾರ್ಯಕರ್ತರಾಗಿರುವ ಹಂಝಾ ಕಿನ್ಯಾ ಇವರನ್ನು ಹಿಂದುತ್ವದ ಪಡೆಗಳು ಗುರಿ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ.

ಮಾಧುರಿ ಅವರ ತಾಯಿ ಭಾರತಿ ಬೋಳಾರ ಸಿಪಿಐ(ಎಂ) ಪ್ರಮುಖ ಕಾರ್ಯಕರ್ತೆ ಹಾಗೂ ಮಂಗಳೂರು ಬೀಡಿ ಕೆಲಸಗಾರರ ಸಂಘದ (ಸಿಐಟಿಯು) ಕಾರ್ಯದರ್ಶಿ. ಅವರ ಮೂವರು ಹೆಣ್ಣು ಮಕ್ಕಳೂ ಎಸ್‌ಎಫ್‌ಐನಲ್ಲಿ ಸಕ್ರಿಯವಾಗಿ ಕೆಲಸ ಮಾಡಲು ಅವರು ಪ್ರೋತ್ಸಾಹಿಸುತ್ತಿದ್ದಾರೆ. ಭಾರತಿ ಬೋಳಾರ ಅವರು ಮಗಳು ಮಾಧುರಿಯೊಂದಿಗೆ ಮಂಗಳೂರು ನಗರ ಪೋಲೀಸು ಕಮೀಷನರನ್ನು ಜನವರಿ 9 ರಂದು ಭೇಟಿ ಮಾಡಿ ಸಾಮಾಜಿಕ ತಾಣಗಳಲ್ಲಿ ಅಪಪ್ರಚಾರ ಗೈಯುವವರ ವಿರುದ್ಧ ತ್ವರಿತ ಕ್ರಮಕ್ಕೆ ಆಗ್ರಹಿಸಿದರು. ಬಳಿಕ ಸೈಬರ್ ಅಪರಾಧ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪೋಲೀಸರು ಕಾರ್ಯಾಚರಣೆ ಆರಂಭಿಸಿದ್ದು, ದೂರನ್ನು ಆಧರಿಸಿ ದಾಕ್ಷಾಯಿಣಿ, ಶೈಲೇಶ್ ಸಾಲಿಯಾನ್ ಮತ್ತು ಶ್ರೀಹರಿ ಎಂಬವರ ವಿರುದ್ಧ ಜನವರಿ 10 ರಂದು ಎಫ್‌ಐಆರ್ ದಾಖಲು ಮಾಡಿದ್ದಾರೆ. ●

ಡಿವೈಎಫ್‌ಐ ದ.ಕ. ಜಿಲ್ಲಾ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಹಿಂಬಾಲಿಸಿದ ಅಪರಿಚಿತರು:



ಮತೀಯವಾದಿಗಳಿಗೆ ಡಿವೈಎಫ್‌ಐ ಮತ್ತು ಎಡಪಂಥೀಯರು ಮಾತ್ರವೇ ಅಡ್ಡಿಯಾದಂತಿದೆ. ಹೇಗಾದರೂ ಎಡಪಂಥೀಯರ ಧ್ವನಿ ನಿಲ್ಲಿಸಬೇಕೆಂದು ಹಿಂದೂ ಮತೀಯವಾದಿಗಳು ಪ್ರಯತ್ನಿಸುತ್ತಿದ್ದಾರೆ.

ಜನವರಿ 9ರ ಸಾಯಂಕಾಲ ಸುರತ್ಕಲ್‌ನಲ್ಲಿ ದೀಪಕ್ ಮತ್ತು ಬಶೀರ್ ಅವರಿಗೆ ಶ್ರದ್ಧಾಂಜಲಿ ಸಭೆ ನಡೆಸಿದ ಬಳಿಕ, ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಂಗಳೂರಿನ ತಮ್ಮ ಮನೆಗೆ ಕಾರಿನಲ್ಲಿ ವಾಪಾಸ್ಸಾಗುತ್ತಿದ್ದರು. ರಾತ್ರಿ 9.15ರ ವೇಳೆಗೆ ಬಲ್ಲಾಳ್‌ಬಾಗ್ ಬಳಿ ಬರುತ್ತಿದ್ದಾಗ, ಹಿಂದಿನಿಂದ ಬುಲೆಟ್ ಬೈಕಿನಲ್ಲಿ ಬಂದ ಒಬ್ಬ ಅವರ ಕಾರಿಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದಾನೆ. ಬಳಿಕ ಇನ್ನೊಬ್ಬ ಬುಲೆಟ್ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ಇಮ್ತಿಯಾಜ್‌ರನ್ನು ಪದೇ ಪದೇ ದಿಟ್ಟಿಸಿ ನೋಡಿ ಮೊದಲು ಹೋಗಿದ್ದವ ಸಾಗಿದ ರಸ್ತೆಯಲ್ಲೇ ಸಾಗಿದ್ದಾನೆ.

ಘಟನೆಯ ಬಳಿಕ ಇಮ್ತಿಯಾಜ್ ಪೋಲೀಸ್ ಠಾಣೆಗೆ ಬಂದು ದೂರು ನೀಡಿರುತ್ತಾರೆ. ಡಿವೈಎಫ್‌ಐ, ಎಸ್‌ಎಫ್‌ಐ ಹಾಗೂ ಎಡಪಂಥೀಯ ಸಂಘಟನೆಗಳ ಕಾರ್ಯಕರ್ತರಿಗೆ ನಿರಾಳವಾಗಿ ಕೆಲಸ ಮಾಡಲು ಎಷ್ಟೊಂದು ಕಷ್ಟ ಇದೆ ಎಂಬುದಕ್ಕೆ ಈ ಎರಡು ಘಟನೆಗಳು ಸಾಕ್ಷಿಯಾಗಿವೆ. ●

ಲವ್_ಜಿಹಾದ್ ಕಿರುಕುಳಕ್ಕೆ ಪ್ರತಿಭಟನೆ

ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯೆ ಮಾದುರಿ ಬೋಳಾರ ಮತ್ತು ಎಸ್.ಎಫ್.ಐ. ಮುಖಂಡ ಹಂಜಾ ರವರ ಪೋಟೋಗಳು ಬಳಸಿ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಸುತ್ತಿರುವ ಹಿಂದೂ ಜಾಗರಣ ವೇದಿಕೆ ಗೂಂಡಾ ಗಳ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಹಾಗೂ ರಾಜ್ಯದಲ್ಲಿ ಲವ್_ಜಿಹಾದ್ ಹೆಸರಿನಲ್ಲಿ ಯುವಕ ಯುವತಿಯರ ಮೇಲೆ ಭಜರಂಗದಳ, ಹಿಂದೂ ಜಾಗರಣ ವೇದಿಕೆ ಗಳ ನೈತಿಕ ಪೋಲಿಸ್ (ಗೂಂಡಾಗಿರಿ) ಖಂಡಿಸಿ ಇಂದು ಹಾವೇರಿ ಜಿಲ್ಲೆಯ ಶಿಗ್ಗಾವ್ ನಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿಯಿಂದ ಪ್ರತಿಭಟನೆ. ಪ್ರತಿಭಟನೆಯನ್ನು ಉದ್ದೇಶಿಸಿ ಎಸ್.ಎಫ್.ಐ. ಅಖಿಲ ಭಾರತ ಅಧ್ಯಕ್ಷರು ವಿ.ಪಿ.ಸಾನು ಮಾತಾಡಿದರು. ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷರು ಅಂಬರೀಷ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ರಾಜ್ಯ ಉಪಾಧ್ಯಕ್ಷರು ವಾಸುದೇವರೆಡ್ಡಿ, ಅಮರೇಶ್ ಕಡಗದ್ ಪದಾಧಿಕಾರಿಗಳು ಸುಭಾಷ್, ಆಶಾ, ಗಾಯತ್ರಿ, ಶಿವಾನಂದಾ ಬೋಸ್ಲೆ, ಶಿವಕುಮಾರ್ ಹಾಗೂ ರಾಜ್ಯ ಸಮಿತಿ ಸದಸ್ಯರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಳಬಾಗಿಲಿನಲ್ಲಿ ಕೋಮುಗಲಭೆ ಸೃಷ್ಟಿಯ ಹುನ್ನಾರ ಖಂಡನೆ

ಮುಳಬಾಗಿಲಿನಲ್ಲಿರುವ ಅಂಜನಾದ್ರಿ ಬೆಟ್ಟದ ಮೇಲೆ ಇತ್ತೀಚೆಗೆ ಹತ್ತಿದ ಒಂದು ಕೋಮಿನ ಯುವಕತರ ಮೇಲೆ ಇನ್ನೊಂದು ಕೋಮಿನಯುವಕರು ಹಲ್ಲೆ ನಡೆಸಿ ಕೋಮು ಸೌಹಾರ್ದತೆ ಕೆಡಿಸಲು ನಡೆಸಿದ ಪ್ರಯತ್ನವನ್ನು ಸಿಪಿಐ(ಎಂ) ಕೋಲಾರ ಜಿಲ್ಲಾ ಕಾರ್ಯದರ್ಶಿ ಖಂಡಿಸಿದ್ದಾರೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾ ಆಡಳಿತ ಮತ್ತು ಉಸ್ತುವಾರಿ ಸಚಿವರು ಇಂತಹ ಪ್ರಯತ್ನಗಳನ್ನು ಮಟ್ಟ ಹಾಕಬೇಕು ಎಂದು ಒತ್ತಾಯಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಸಾಲಮನ್ನಾಕ್ಕೆ ಒತ್ತಾಯ

ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳ ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಎಲ್ಲಾ ಸಾಲವನ್ನು ಮನ್ನಾ ಮಾಡಲು ಒತ್ತಾಯಿಸಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಸಮಾವೇಶ ನಡೆಸಲಾಯಿತು.

ಹಾಲಿನ ದರ ಕಡಿತಕ್ಕೆ ಪ್ರತಿಭಟನೆ

ಹಾಲಿನ ದರ ಕಡಿತಗೊಳಿಸಿರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಕ್ರಮ ಖಂಡಿಸಿ ಮತ್ತು ಕೂಡಲೇ ಲೀಟರ್ ಹಾಲುಗೆ ಕನಿಷ್ಠ –30 ನಿಗದಿ ಮಾಡಲು ಒತ್ತಾಯಿಸಿ ಮಂಡ್ಯ ಉಪವಿಭಾಗದ ಕಛೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘದಿಂದ ಪ್ರತಿಭಟನೆ ಮಾಡಲಾಯಿತು.

ಸ್ಕೀಮ್ ನೌಕರರ ಜನವರಿ 17 ಮುಷ್ಕರದ ನಂತರ ಜನವರಿ 30ರಂದು ದೇಶವ್ಯಾಪಿ ಕಾರ್ಮಿಕರ ಜೈಲ್ ಭರೋ

ಜನವರಿ 6ರಂದು ದಿಲ್ಲಿಯಲ್ಲಿ ಸೇರಿದ್ದ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶ ಜನವರಿ 17ರಂದು ಅಂಗನವಾಡಿ, ಮಧ್ಯಾಹ್ನದ ಊಟ ಮತ್ತಿತರ ಸರಕಾರೀ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 50ಲಕ್ಷ ಕಾರ್ಮಿಕರು ಮತ್ತು ನೌಕರರ ಮುಷ್ಕರವನ್ನು ಬೆಂಬಲಿಸುತ್ತ, **ಈ ಸರಕಾರದ ಕಾರ್ಮಿಕ-ವಿರೋಧಿ ಧೋರಣೆಗಳ ವಿರುದ್ಧ ಚಳುವಳಿಯನ್ನು ಮತ್ತಷ್ಟು ಬಲಗೊಳಿಸಲು ಜನವರಿ 30ರ ಹುತಾತ್ಮ ದಿನದಂದು ದೇಶವ್ಯಾಪಿಯಾಗಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್‌ಪ್ರಮಾಣದ ಜೈಲ್ ಭರೋ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿದೆ.**

ಕಾರ್ಮಿಕ ಸಂಘಗಳ ಕೇಂದ್ರಸಮಿತಿ ಕರೆಯಂತೆ ಅನಿರ್ದಿಷ್ಟ ಅವಧಿಯ ಸಾರ್ವತ್ರಿಕ ಮುಷ್ಕರದ ಮೊದಲು ಇಂತಹ ಹಲವು ಪ್ರತಿಭಟನೆಗಳು ಮತ್ತಷ್ಟು ಮುಷ್ಕರಗಳು ದೇಶದೆಲ್ಲೆಡೆಗಳಲ್ಲಿ ನಡೆಯಲಿವೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳಿದ್ದಾರೆ.

ರಾಷ್ಟ್ರಗೀತೆ ಕಡ್ಡಾಯವಲ್ಲ –ಸುಪ್ರಿಂ ಕೋರ್ಟ್ ಆದೇಶಕ್ಕೆ ಎನ್‌ಪಿಆರ್‌ಡಿ ಸ್ವಾಗತ

ಸಿನೆಮಾ ಮಂದಿರಗಳಲ್ಲಿ ಚಲನಚಿತ್ರಗಳ ಆರಂಭದ ಮೊದಲು ರಾಷ್ಟ್ರಗೀತೆಯನ್ನು ನುಡಿಸುವುದು ಕಡ್ಡಾಯವಲ್ಲ ಎಂದು ಸುಪ್ರಿಂ ಕೋರ್ಟ್ ಆದೇಶ ನೀಡಿರುವುದನ್ನು ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಸ್ವಾಗತಿಸಿದೆ.

ಈ ಕುರಿತು ಒಂದು ಹೇಳಿಕೆ ನೀಡಿರುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ಮುರಳೀಧರನ್ ರಾಷ್ಟ್ರಪ್ರೇಮವನ್ನು ಹೇರಲು ಸಾಧ್ಯವಿಲ್ಲ, ಅದನ್ನು ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳನ್ನು ಬೆಳೆಸುವ ಮೂಲಕ ಉಂಟು ಮಾಡಬೇಕು ಎಂದಿದ್ದಾರೆ. ಈ ಹಿಂದೆ ಸಿನೆಮಾ ಮಂದಿರಗಳಲ್ಲಿ ರಾಷ್ಟ್ರಗೀತೆಯನ್ನು ಕಡ್ಡಾಯಗೊಳಿಸಿದ್ದ ಸುಪ್ರಿಂ ಕೋರ್ಟಿನ 2016ರ ನವಂಬರ್30 ಮತ್ತು ಡಿಸೆಂಬರ್9 ರ ಆದೇಶಗಳ ಅಡಿಯಲ್ಲಿ ಗೃಹ ಇಲಾಖೆ ರೂಪಿಸಿದ ಮಾರ್ಗದರ್ಶಕ ಸೂತ್ರಗಳನ್ನು ಪ್ರಶ್ನಿಸಿ ಎನ್‌ಪಿಆರ್‌ಡಿ ಸವಾಲು ಹಾಕಿತ್ತು.

ಬಲಪಂಥೀಯ ಕಾವಲುಖೋರ ಗುಂಪುಗಳು ಈ ಆದೇಶವನ್ನು ದುರುಪಯೋಗ ಪಡಿಸಿಕೊಂಡು ರಾಷ್ಟ್ರಗೀತೆ ನುಡಿಸುವ ವೇಳೆಗೆ ಎದ್ದು ನಿಲ್ಲಲಾರದ ಯಾವುದೇ ವಿಕಲಾಂಗನನ್ನು ರಾಷ್ಟ್ರ-ವಿರೋಧಿ ಎಂದು ಹಣೆಪಟ್ಟಿ ಹಚ್ಚಬಹುದು ಎಂಬ ಭೀತಿಯನ್ನು ಎನ್ಪಿಆರ್‌ಡಿ ವ್ಯಕ್ತಪಡಿಸಿತ್ತು. ಅವು ಹಲವೆಡೆ ನಿಜವಾಗಿದೆ ಕೂಡ.

ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ವಿಕಲಾಂಗರಿಗೆ ತನ್ನ ಹಿಂದಿನ ಆದೇಶದಲ್ಲಿ ವಿನಾಯ್ತಿ ನೀಡಿತ್ತು. ಈ ವಿನಾಯ್ತಿ ಈಗಲೂ ಜಾರಿಯಲ್ಲಿರುತ್ತದೆ ಎಂದು ಸುಪ್ರಿಂ ಕೋರ್ಟ್ ಸ್ಪಷ್ಟಪಡಸಿರುವುದಾಗಿ ಮುರಳೀಧರನ್ ಹೇಳಿದ್ದಾರೆ. ರಾಷ್ಟ್ರಗೀತೆಯನ್ನು ನುಡಿಸುವುದು ಕಡ್ಡಾಯವಲ್ಲ, ಆದರೆ ಎಲ್ಲಾದರೂ ನಡಿಸಿದರೆ ಎದ್ದು ನಿಲ್ಲುವುದು ಕಡ್ಡಾಯ ಎಂದು ಸುಪ್ರಿಂ ಕೋಟ ಹೇಳಿರುವುದನ್ನು ಇಲ್ಲಿ ಗಮನಿಸಬಹುದು.

ಕೇಂದ್ರ ಸರಕಾರ ಈಗ ಈಗ ವಿವಿಧ ಇಲಾಖೆಗಳ ಅಧಿಕಾರಿಗಳಿರುವ ಒಂದು ಸಮಿತಿಯನ್ನು ರಚಿಸಿದ್ದು ಅದರ ಮುಂದೆ ತನ್ನ ಅಭಿಪ್ರಾಯಗಳನ್ನು ಎನ್‌ಪಿಆರ್‌ಡಿ ಮಂಡಿಸಲಿದೆ ಎಂದೂ ಮುರಳೀಧರನ್ ಹೇಳಿದ್ದಾರೆ.

100% ಎಫ್‌ಡಿಐ: ಮತ್ತೊಮ್ಮೆ ಮೋದಿ ಸರಕಾರದ ಕಪಟತನ ಬಯಲು

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಕೇಂದ್ರ ಸಂಪುಟ ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಅಟೊಮ್ಯಾಟಿಕ್ ಮಾರ್ಗದಲ್ಲಿ 100ಶೇ. ನೇರ ವಿದೇಶಿ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ನೀಡಲು ನಿರ್ಧರಿಸಿದೆ. ಇದುವರೆಗೆ ಈ ಮಾರ್ಗದಲ್ಲಿ 49ಶೇ. ಎಫ್‌ಡಿಐ ಗೆ ಮಾತ್ರ ಅವಕಾಶ ಕೊಡಲಾಗಿತ್ತು. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ವಿರೋಧಿಸಿದೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐನ್ನು ಉದಾರೀಕರಿಸುವ ಈ ಕ್ರಮ ದೇಶೀ ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಅಂಗಡಿ ಇಟ್ಟುಕೊಂಡವರಿಗೆ ಹಾನಿಯುಂಟು ಮಾಡುತ್ತದೆ ಎಂದು ಅದು ಹೇಳಿದೆ.

ಮೋದಿ ಸರಕಾರ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲೂ ಎಫ್‌ಡಿಐಗೆ ಅವಕಾಶ ನೀಡುವತ್ತ ಸಾಗುತ್ತಿದೆ ಎಂಬುದರ ಸಂಕೇತವನ್ನು ಇದು ಕೊಡುತ್ತಿದೆ. ಬಿಜೆಪಿ ಪ್ರತಿಪಕ್ಷವಾಗಿದ್ದಾಗ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಕಂಪನಿಗಳ ಪ್ರವೇಶವನ್ನು ವಿರೋಧಿಸುತ್ತಿತ್ತು. ಈಗ ಸರಕಾರಕ್ಕೆ ಬಂದ ಮೇಲೆ ತನ್ನ ನಿಲುವನ್ನು ಬದಲಿಸುವ ಕಪಟತನವನ್ನು ಪ್ರದರ್ಶಿಸಿದೆ ಎಂದು ಸಿಪಿಐ(ಎಂ) ಗೇಲಿ ಮಾಡಿದೆ.



ಏರ್‌ಇಂಡಿಯಾ: ಈಗ ವಿದೇಶಿ ಕಂಪನಿಗೆ ವಹಿಸುವ ಹುನ್ನಾರ

ಏರ್‌ಇಂಡಿಯಾದಲ್ಲಿ ವಿದೇಶಿ ಏರ್‌ಲೈನ್‌ಗಳಿಗೆ 49ಶೇ. ದ ವರೆಗೆ ಹೂಡಿಕೆ ಮಾಡಲು ಅವಕಾಶ ಕೊಡುವ ನಿರ್ಧಾರವನ್ನೂ ಕೇಂದ್ರ ಸಂಪುಟ ಮಾಡಿದೆ. ಮೊದಲಿಗೆ ಈ ಸರಕಾರ ಏರ್‌ಇಂಡಿಯಾವನ್ನು ಖಾಸಗೀಕರಿಸುವ ನಿರ್ಧಾರವನ್ನು ಮಾಡಿತ್ತು. ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಯ ಸ್ಥಾಯೀ ಸಮಿತಿ ಸರಕಾರ

ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು, ಏರ್‌ಇಂಡಿಯಾಕ್ಕೆ ಪುನರುಜ್ಜೀವನಕ್ಕೆ ಐದು ವರ್ಷಗಳನ್ನು ಕೊಡಬೇಕು, ಅದರ ಸಾಲವನ್ನು ರೈಟ್‌ಆಫ್ ಮಾಡಬೇಕು ಎಂದು ಶಿಫಾರಸು ಮಾಡಿದೆ. ಆದರೆ ಮೋದಿ ಸರಕಾರ ಈಗ ಅದನ್ನು ಖಾಸಗಿಯವರಿಗೆ ವಹಿಸಿಕೊಡುವ ದಾರಿಯಲ್ಲಿ ಸಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯರೊ ಮೋದಿ ಸರಕಾರ ಸ್ಥಾಯೀ ಸಮಿತಿಯ ಶಿಫಾರಸಿನತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದೆ.

ರಾಷ್ಟ್ರೀಯ ಆಸ್ತಿಗಳ ಖಾಸಗೀಕರಣವಷ್ಟೇ ಅಲ್ಲ, ವಿದೇಶೀಕರಣವೇ ಮುಖ್ಯ ಗುರಿಯಾಗಿರುವ ಸರಕಾರದ ವಿನಾಶಕಾರಿ ಕ್ರಮಗಳು: ಸಿಐಟಿಯು ಖಂಡನೆ

ದೇಶದ ಪ್ರಮುಖ ಕಾರ್ಮಿಕ ಸಂಘಟನೆಗಳಲ್ಲಿ ಒಂದಾದ ಸಿಐಟಿಯು ಕೂಡ ಕೇಂದ್ರ ಸಂಪುಟದ ಈ ಎರಡು ಕ್ರಮಗಳನ್ನು ಖಂಡಿಸಿದೆ. ಅದಾಗಲೇ ಮೋದಿ ಸರಕಾರ ಏರ್ ಇಂಡಿಯಾವನ್ನು ಸಾರಾಸಗಟು ಖಾಸಗೀಕರಣದತ್ತ ತಳ್ಳಿತ್ತು. ಇದನ್ನು ತ್ವರಿತಗೊಳಿಸಲು ಈಗ 49% ಎಫ್‌ಡಿಐಗೆ ಅನುಮತಿ ನೀಡಲಾಗುವುದು ಎಂದು ಪ್ರಕಟಿಸಿದೆ, ಇದಕ್ರೀ ರಾಷ್ಟ್ರೀಯ ವಾಹಕದ, ಅಗಾಧ ಆಸ್ತಿನೆಲೆ ಮತ್ತು ಉನ್ನತ ಪ್ರಮಾಣದ ಆದಾಯ ತರುವ ಅಂತರ್ರಾಷ್ಟ್ರೀಯ ಸೇವಾ ಜಾಲ ಇರುವ ಒಂದು ಸಾರ್ವಜನಿಕ ವಲಯದ ಕಂಪನಿಯ ಸಂಪೂರ್ಣ ವಿದೇಶೀಕರಣವಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ವರ್ಣಿಸಿದೆ.

ಖಾಸಗೀಕರಣವನ್ನು ಸಮರ್ಥಿಸಿಕೊಳ್ಳಲು ಈ ಸರಕಾರ ಏರ್ ಇಂಡಿಯಾ ಮೇಲೆ ಅಪಾರ ಸಾಲಗಳ ಹೊರೆಗಳಿವೆ ಎನ್ನುತ್ತಿದೆ. ಆದರೆ ಅದನ್ನು ಈ ಪರಿಸ್ಥಿತಿಗೆ ನೂಕಿರುವುದು ಅದನ್ನು ನಡೆಸುತ್ತಿರುವವರ ವಿಫಲತೆಗಳಲ್ಲ, ಬದಲಾಗಿ ಕೇಂದ್ರದಲ್ಲಿ ಆಳುತ್ತ ಬಂದಿರುವ ಸರಕಾರಗಳು ಅದರ ಮೇಲೆ ಹೇರಿದ ವಿನಾಶಕಾರಿ ನಿರ್ಣಯಗಳು- ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯಾದ ಬಲವಂತದ ವಿಲೀನ, ಅಕಾಲದಲ್ಲಿ ವಿದೇಶಿ ಕಂಪನಿಗಳ ದೊಡ್ಡ ವಿಮಾನ ಪಡೆಯನ್ನು ಖರೀದಿಸುವಂತೆ ಮಾಡಿದ್ದು ಇತ್ಯಾದಿ. ಸರಕಾರ ಎಷ್ಟೆಲ್ಲ ಅಡೆ-ತಡೆಗಳನ್ನು ಒಡ್ಡಿದರೂ ಕಳೆದ ಮೂರು ವರ್ಷಗಳಲ್ಲಿ ಈ ಸಂಸ್ಥೆ ಕಾರ್ಯನಿರ್ವಹಣೆಯಲ್ಲಿ ಲಾಭ ಗಳಿಸಲಾರಂಭಿಸಿದೆ.

ಈ ಹಿನ್ನೆಲೆಯಲ್ಲಿ ಸಂಸದೀಯ ಸ್ಥಾಯೀ ಸಮಿತಿ ಖಾಸಗೀಕರಣ/ ಶೇರು ಮಾರಾಟ ಬಿಟ್ಟು ಪರ್ಯಾಯ ಮಾರ್ಗವನ್ನು ಶೋಧಿಸುವಂತೆ ಶಿಫಾರಸು ಮಾಡಿದೆ. ಆದರೆ ಈಗ ರಾಷ್ಟ್ರೀಯ ಆಸ್ತಿಗಳ ಖಾಸಗೀಕರಣ, ಅದಕ್ಕಿಂತಲೂ ಹೆಚ್ಚಾಗಿ ವಿದೇಶೀಕರಣವೇ ಸರಕಾರದ ಮುಖ್ಯ ಗುರಿಯಾಗಿದ್ದು ಅದು ದೇಶದ ಹಿತಾಸಕ್ತಿಗಳ ಕನಿಷ್ಟ ಕಾಳಜಿಯೂ ಇಲ್ಲದೆ ಇಂತಹ ವಿನಾಶಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 100% ಎಫ್‌ಡಿಐ ಕೂಡ ಇನ್ನೊಂದು ಇಂತಹುದೇ ವಿನಾಶಕಾರಿ ನಡೆ. ಇದು ಕೃಷಿಯ ನಂತರ ಅತಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸುವ ಪಾರಂಪರಿಕ ಚಿಲ್ಲರೆ ವ್ಯಾಪಾರ ವಲಯದ ಸಂಕಟಗಳನ್ನು ಉಲ್ಬಣಗೊಳಿಸುವ ಕ್ರಮ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಎಫ್‌ಡಿಐ ಕುರಿತಂತೆ ಈ ವಿನಾಶಕಾರಿ ಮತ್ತು ದುಡುಕಿನ ಕ್ರಮಗಳು ರಾಷ್ಟ್ರೀಯ ಆರ್ಥಿಕತೆಗೆ ಹಾನಿ ತರುತ್ತವೆ, ಉದ್ಯೋಗಾವಕಾಶಗಳನ್ನು ಕುಂಠಿತಗೊಳಿಸುತ್ತವೆ ಎಂದಿರುವ ಸಿಐಟಿಯು ಇಂತಹ ರಾಷ್ಟ್ರೀಯ ಆರ್ಥಿಕತೆ ಮತ್ತು ಜನಗಳ ಜೀವನಾ ಧಾರಗಳನ್ನು ಹದಗೆಡಿಸುವ ಕ್ರಮಗಳ ವಿರುದ್ಧ ಕಾರ್ಮಿಕ ವರ್ಗ ದೃಢ ಪ್ರತಿರೋಧವನ್ನು ಕಟ್ಟಿ ಬೆಳೆಸಬೇಕು ಎಂದು ಕರೆ ನೀಡಿದೆ.

ಇಸ್ರೇಲ್ ಪ್ರಧಾನಿಯ ಭೇಟಿ ಸ್ವಾಗತ ಯೋಗ್ಯವಲ್ಲ- ಸಿಪಿಐ(ಎಂ)

ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಜನವರಿ 14ರಂದು ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಅವರ ಈ ಅಧಿಕೃತ ಭೇಟಿ ಸ್ವಾಗತಯೋಗ್ಯವೇನೂ ಅಲ್ಲ. ಅವರ ನೇತೃತ್ವದ ಮೈತ್ರಿ ಸರಕಾರ ಇಸ್ರೇಲ್ ಕಂಡಿರುವ ಅತ್ಯಂತ ಬಲಪಂಥೀಯ ಸರಕಾರ. ಅದರಲ್ಲಿ ಉಗ್ರ ಬಲಪಂಥೀಯ ಯೆಹೂದಿ ಪಕ್ಷಗಳಿವೆ. ಒಂದು ಸ್ವತಂತ್ರ ಪ್ಯಾಲೆಸ್ತೀನೀ ಪ್ರಭುತ್ವ ಮೂಡಿ ಬರುವ ಎಲ್ಲ ಸಾಧ್ಯತೆಗಳನ್ನು ತಡೆಯಲು ಈ ಸರಕಾರ ಪ್ರಯತ್ನಿಸುತ್ತಿದೆ.

ನೆತನ್ಯಾಹು ಭಾರತಕ್ಕೆ ಭೇಟಿ ನೀಡುತ್ತಿರುವ ಎರಡನೇ ಇಸ್ರೇಲಿ ಪ್ರಧಾನಿ. ಮೊದಲ ಪ್ರಧಾನಿ ಎಂದರೆ ಅರಿಯಲ್ ಶರೋನ್. ಆತನೂ 2003 ರಲ್ಲಿ ಬಿಜೆಪಿ ಸರಕಾರದಲ್ಲಿದ್ದಾಗ ಭೇಟಿ ನೀಡಿದ್ದು.

ಮೋದಿ ಸರಕಾರದ ಆಹ್ವಾನದ ಮೇರೆಗೆ ಬರುತ್ತಿರುವ ನೆತನ್ಯಾಹು ಮತ್ತು ಮೋದಿ ಸಮಾನ ಮನಸ್ಕರು. ಒಬ್ಬರು ಬಲಪಂಥೀಯ ಅತಿ ಉಗ್ರ ಹೆಹೂದಿ ರಾಷ್ಟ್ರವಾದವನ್ನು ಪ್ರತಿನಿಧಿಸುತ್ತಿದ್ದರೆ, ಇನ್ನೊಬ್ಬರು ಬಲಪಂಥೀಯ ಹಿಂದುತ್ವ ರಾಷ್ಟ್ರವಾದವನ್ನು ಪ್ರತಿಪಾದಿಸುವವರು. ಕಳೆದ ಬಾರಿ ಭೇಟಿ ನೀಡಿ ಇಸ್ರೇಲಿಗೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನ ಮಂತ್ರಿ ಎನಿಸಿಕೊಂಡ ಮೋದಿಯವರು ಪ್ಯಾಲೆಸ್ತೀನೀ ಪ್ರಾಧಿಕಾರಕ್ಕೆ ಭೇಟಿ ನೀಡದೆ, ಇಸ್ರೇಲಿ ಆಕ್ರಮಣಕ್ಕೆ ಬೆಂಬಲದ ಸಂಕೇತ ನೀಡಿದ್ದರು. ಆದರೆ ಬಿಜೆಪಿ ಸರಕಾರದ ಇಸ್ರೇಲಿ-ಪರ ನಿಲುವಿಗೆ ತದ್ವಿರುದ್ಧವಾಗಿ ಭಾರತ ಮತ್ತು ಜನತೆ ಸದಾ ಇಸ್ರೇಲಿ ಆಕ್ರಮಣವನ್ನು ವಿರೋಧಿಸಿದ್ದಾರೆ. ಪ್ಯಾಲೆಸ್ತೀನೀ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಿದ್ದಾರೆ. ಆಕ್ರಮಣಕಾರಿ ಪ್ಯಾಲೆಸ್ತೀನಿ-ವಿರೋಧಿ ಧೋರಣೆಗಳನ್ನು ಭಾರತದ ಜಾತ್ಯತೀತ ಪ್ರಜಾಪ್ರಭುತ್ವ ಮನೋಭಾವದ ಜನಗಳು ವಿರೋಧಿಸುತ್ತಾರೆ ಎಂದು ನೆತನ್ಯಾಹು ತಿಳಿಯಬೇಕಾಗಿದೆ ಎಂದು ಸಿಪಿಐ(ಎಂ)ನ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಹೇಳಿದೆ.

ಸುಪ್ರಿಂ ಕೋರ್ಟಿನ ಸಮಗ್ರತೆ ಮತ್ತು ಸ್ವಾತಂತ್ರ್ಯದ ವಿಷಯದಲ್ಲಿ ಚೌಕಾಸಿ ಇರಬಾರದು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜನವರಿ 12 ರಂದು ದೇಶದ ಸರ್ವೋಚ್ಚ ನ್ಯಾಯಾಲಯದ ನಾಲ್ವರು ಹಿರಿಯ ನ್ಯಾಯಾಧೀಶರುಗಳು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿದ್ದಾರೆ. ಇದೊಂದು ಅಭೂತಪೂರ್ವ ಘಟನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ವ್ಯಕ್ತಪಡಿಸಿದೆ.ಅವರು ಹಲವು ಮಹತ್ವದ ಪ್ರಶ್ನೆಗಳನ್ನು ಎತ್ತಿದ್ದಾರೆ. ಇವು ಒಂದು ಸಂಸ್ಥೆಯಾಗಿ ಸುಪ್ರಿಂ ಕೋರ್ಟಿನ ಮೇಲೆ ಮಹತ್ವದ ಪರಿಣಾಮ ಬೀರುವಂತವು. ಉದಾಹರಣೆಗೆ ಮೊಕದ್ದಮೆಗಳ ವಿಚಾರಣೆಗಳಿಗೆ ಸರದಿ ಪಟ್ಟಿ ಇತ್ಯಾದಿ.

ನ್ಯಾಯಾಂಗದ, ಅದರಲ್ಲೂ ಸುಪ್ರಿಂ ಕೋರ್ಟಿನ ಸಮಗ್ರತೆ ಮತ್ತು ಸ್ವಾತಂತ್ರ್ಯ ಸಂವಿಧಾನದ ಒಂದು ಮಹತ್ವದ ಸ್ಥಂಭ. ಅದರಲ್ಲಿ ಚೌಕಾಸಿ ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಎಲ್ಲ ಪ್ರಶ್ನೆಗಳನ್ನು ದೇಶದಲೀ ಸರ್ವೋಚ್ಚ ನ್ಯಾಯಾಲಯದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಮತ್ತು ಪಾರದರ್ಶಕತೆಯನ್ನು ಗಮನದಲ್ಲಿಟ್ಟುಕೊಂಡು ಪರಿಹರಿಸಲಾಗುವುದು ಎಂಬ ಆಶಯವನ್ನು ವ್ಯಕ್ತಪಡಿಸಿದೆ.

ವಿದೇಶಿ ಹೂಡಿಕೆದಾರರಿಗೆ ಮತ್ತಷ್ಟು ಒಳ್ಳೆಯ ದಿನಗಳನ್ನು ಕೊಡಮಾಡುವ ಗೀಳು-ದೇಶೀ ಬೆಂಬಲಿಗರಿಗೂ ಆತಂಕ



2018ರ ಬಜೆಟ್ ಮತ್ತು 2019ರ ಚುನಾವಣೆಗಳು ಸಮೀಪಿಸುತ್ತಿರುವಾಗ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರ ಒಳ್ಳೆಯ ದಿನಗಳು ಮತ್ತಷ್ಟು ಜ್ವಾಜಲ್ಯಮಾನವಾಗುತ್ತಿರುವಂತೆ ಕಾಣುತ್ತಿದೆ. ಎಫ್‌ಆರ್‌ಡಿಐ ಮಸೂದೆಯ ನಂತರ ಕೇಂದ್ರ ಸಂಪುಟ ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 100% ಎಫ್‌ಡಿಐಗೆ ಇನ್ನು ಮುಂದೆ ತನ್ನ ಸರಕಾರದ ಅನುಮತಿ ಬೇಕಿಲ್ಲ ಎಂದಿದೆ. ಇದು ಎಡ ಮತ್ತು ಪ್ರಜಾಪ್ರಭುತ್ವವಾದಿಗಳಿಗೆ ಮಾತ್ರವಲ್ಲ, 'ಅಚ್ಛೇ ದಿನ್'ನ ಮೂಲ ಬೆಂಬಲಿಗರಲ್ಲೂ ಆತಂಕ ಮೂಡಿಸಿದೆ ಎಂಬುದು ಪತ್ರಿಕೆಗಳಲ್ಲಿನ ಸುದ್ದಿಗಳಲ್ಲಿ ಕಾಣುತ್ತಿದೆ.

ಸಂಘ ಪರಿವಾರಕ್ಕೆ ಸೇರಿದ 'ಸ್ವದೇಶಿ ಜಾಗರಣ ಮಂಚ್' ಈಗ ಜಾಗೃತಗೊಂಡಿದೆಯಂತೆ. ಇದು ದೇಶದ ಹಿತಗಳಿಗೆ ವಿರುದ್ಧವಾದದ್ದು, ಜನಗಳು ಇದನ್ನು ಪ್ರತಿರೋಧಿಸಬೇಕು ಎಂದಿದೆಯಂತೆ. ಅದರ ರಾಷ್ಟ್ರೀಯ ಸಂಯೋಜಕರು ಐದು ವರ್ಷಗಳ ವರೆಗೆ ಭಾರತದೊಳಗಿಂದಲೇ 30% ಅಗತ್ಯಗಳನ್ನು ಪೂರೈಸಿಕೊಳ್ಳಬೇಕು ಎಂಬ ಅಂಶವನ್ನೂ ಕೈಬಿಟ್ಟಿರುವುದು ಇನ್ನಷ್ಟು ಆತಂಕದ ವಿಷಯ ಎಂದಿದ್ದಾರಂತೆ.

ಈ ಸಂಘಟನೆಯ ವಿರೋಧ ಕೇವಲ ಸುದ್ದಿಗಾಗಿ ಎಂದು ಕೆಲವರು ಹೇಳುತ್ತಾರೆ, ಇರಬಹುದು.

'ಅಚ್ಛೇದಿನ್' ಬೆಂಬಲಕ್ಕೆ ನಿಂತಿರುವ ಅಖಿಲ ಭಾರತ ವ್ಯಾಪಾರಿಗಳ ಮಹಾಒಕ್ಕೂಟ(ಸಿಎಐಟಿ) ಕೂಡ ಸರಕಾರದ ಈ ಕ್ರಮದಿಂದ ಆತಂಕಕ್ಕೆ ಒಳಗಾಗಿದೆಯಂತೆ. ಇದು ವಿವಿಧ ವ್ಯಾಪಾರೀ ವಲಯಗಳ ಪ್ರತಿನಿಧಿಗಳಿರುವ ಒಂದು ಸಂಸ್ಥೆ. 2010ರಲ್ಲಿ ಯುಪಿಎ ಸರಕಾರ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ತಂದಾಗ ಅದನ್ನು ಆಗ ಪ್ರತಿಪಕ್ಷವಾಗಿದ್ದ ಬಿಜೆಪಿ ವಿರೋಧಿಸಿದಾಗ ಅವರ ಜೊತೆಗೆ ಕೈಜೋಡಿಸಿದ ಸಂಘಟನೆ. ಇದರ ಪ್ರಮುಖ ಮುಖಂಡರು ಬಿಜೆಪಿಯ ಸಕ್ರಿಯ ಬೆಂಬಲಿಗರಾಗಿರುವವರು. ಇವರೀಗ ತಮ್ಮ ಸರಕಾರದ ಈ ಕ್ರಮ ದೇಶೀ ಉತ್ಪಾದಕರನ್ನು, 'ಮೇಕ್ ಇಂಡಿಯಾ'ವನ್ನು ಮತ್ತು ಸಣ್ಣ ವ್ಯಾಪಾರಿಗಳನ್ನು ಬಾಧಿಸುತ್ತದೆ, ಇದನ್ನು ಹೇಗೆ ಎದುರಿಸಬೇಕು ಎಂದು ಚರ್ಚಿಸಲು ಜನವರಿ 9ರಂದು ದಿಲ್ಲಿಯಲ್ಲಿ ಸಭೆ ಸೇರಲಿದ್ದಾರೆ ಎಂದು ವರದಿಯಾಗಿದೆ. (ದಿ ಹಿಂದು, ಜನವರಿ12)

"2010 ರಿಂದ 2014 ರ ವರೆಗೆ ಎಫ್‌ಡಿಐ ವಿರುದ್ಧ ಬಲವಾದ ತರ್ಕ ಹೂಡುತ್ತಿದ್ದವರೇ ಈ ಬಾರಿ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ತರುವ ಉಪಕರಣಗಳಾಗುತ್ತಿದ್ದಾರೆ ಎಂಬುದು ಹೆಚ್ಚು ಬೇಸರದ ಸಂಗತಿ" ಎಂದು ಈ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷರು ಹೇಳಿದ್ದಾರೆ.

ಇದು ಬಹುಬ್ರಾಂಡ್ ಚಿಲ್ಲರೆ ವ್ಯಾಪಾರವನ್ನೂ ಎಫ್‌ಡಿಐಗೆ ತೆರೆಯುವತ್ತ ಮೊದಲ ಹೆಜ್ಜೆ, ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಚಿಲ್ಲರೆ ವ್ಯಾಪಾರವನ್ನು ಮಣಿಸಲು ಪ್ರವಾಹ ದ್ವಾರವನ್ನು ತೆರೆದು ಕೊಡುತ್ತಿದೆ, ಆಮೂಲಕ ದೇಶದ ಕೋಟ್ಯಂತರ ಸಣ್ಣ ವ್ಯಾಪಾರಿಗಳ ಜೀವನಾಧಾರದದ ಮೇಲೆ ಪರಿಣಾಮ ಬೀರಲಿದೆ ಎಂದೂ ಹೇಳಿರುವುದಾಗಿ ವರದಿಯಾಗಿದೆ.

'ರಾಷ್ಟ್ರ'ದ ಹೆಮ್ಮೆ'ಎಂಬ ವಲಯಗಳನ್ನೂ ವಿದೇಶೀಯರಿಗೆ ವಹಿಸುವ 'ರಾಷ್ಟ್ರಪ್ರೇಮಿ' ಹುನ್ನಾರ!

ಚಿಲ್ಲರೆ ವ್ಯಾಪಾರದಲ್ಲಿ 100% ಎಫ್‌ಡಿಐಗೆ ಬೇಷರತ್ತು ಅವಕಾಶ ನೀಡಿರುವ ಸಂಪುಟ ದೇಶದ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಏರ್ ಇಂಡಿಯಾದಲ್ಲಿ 49% ಎಫ್‌ಡಿಐಗೆ ಅವಕಾಶ ನೀಡಲು ನಿರ್ಧರಿಸಿ ಅದನ್ನು ವಿದೇಶೀಯರಿಗೆ ಕೊಡಮಾಡುವ ಮೊದಲ ಹೆಜ್ಜೆ ಇಟ್ಟಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಇತ್ತೀಚೆಗಷ್ಟೇ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಕುರಿತ ಸಂಸದೀಯ ಸ್ಥಾಯೀ ಸಮಿತಿ 'ನಮ್ಮ ರಾಷ್ಟ್ರೀಯ ಹೆಮ್ಮೆಯಾದ ನಮ್ಮ ರಾಷ್ಟ್ರೀಯ ವಿಮಾನಯಾನ ಸಂಸ್ಥೆಯಿಂದ ಶೇರು ಹಿಂಪಡಿಕೆಯ ಯೋಚನೆಯ ಬದಲು ಒಂದು ಪರ್ಯಾಯ ಕ್ರಮದ ಸಾಧ್ಯತೆಯನ್ನು ಹುಡುಕಬೇಕು" ಎಂದು ಶಿಫಾರಸು ಮಾಡಿದೆ ಎಂಬುದು ಗಮನಾರ್ಹ. ಏರ್ ಇಂಡಿಯಾವನ್ನು ಖಾಸಗೀಕರಿಸುವ ತನ್ನ ನಿರ್ಧಾರದ ಮರುವಿಮರ್ಶೆ ನಡೆಸಬೇಕು, ಅದರ ಸಾಲಗಳನ್ನು ಮನ್ನಾ ಮಾಡಬೇಕು, ಅದರ ಪುನರುಜ್ಜೀವನಕ್ಕೆ ಐದು ವರ್ಷಗಳ ಅವಧಿ ನೀಡಬೇಕು ಎಂದು ಕೂಡ ಈ ಸ್ಥಾಯೀ ಸಮಿತಿ ವರದಿ ಮಾಡಿದ್ದರೂ ಅದನ್ನು ವಿದೇಶೀಯರಿಗೆ ವಹಿಸಿ ಕೊಡಲು ದಿನಬೆಳಗಾದರೆ ತನ್ನ ಧೋರಣೆಗಳನ್ನು ಒಪ್ಪದವರನ್ನು 'ರಾಷ್ಟ್ರ ದ್ರೋಹಿ'ಗಳೆನ್ನುವವವರ ಸರಕಾರ ಮುಂದೊತ್ತುತ್ತಿದೆ ಎಂಬುದು ಕೇವಲ ಎಡಪಂಥೀಯರ ಆತಂಕವಾಗಿ ಉಳಿದಿಲ್ಲ, ಈಗ ಅದು ಎಲ್ಲ ವಿಚಾರವಂತರ ಆತಂಕವಾಗುತ್ತಿದೆ.

ಏರ್‌ಇಂಡಿಯಾದ ಮೇಲೆ ಅಗಾಧವಾದ ಸಾಲಗಳ ಹೊರೆಯಿದೆ, ಸರಕಾರ ಇನ್ನೇನು ಮಾಡಲು ಸಾಧ್ಯ ಎಂದು ಮಧ್ಯಮ ವರ್ಗದ ಹಲವರೂ ಕೇಳಬಹುದು. ಆದರೆ ಈ ಸಾಲಗಳ ಹೊರೆ ಬಿದ್ದಿರುವುದು ಏರ್ ಇಂಡಿಯಾದ ನಿರ್ವಾಹಕರಿಂದ ಅಲ್ಲ, ಬದಲಾಗಿ ಕೇಂದ್ರ ಸರಕಾರಗಳ ನಿರ್ಣಯಗಳಿಂದಾಗಿಯೇ ಎಂಬುದನ್ನು ಜನಗಳಿಂದ ಮರೆಮಾಚಲಾಗಿದೆ.


'ಖಾಸಗೀಕರಣವಾಲಾಗಳಿಗೂ ಇನ್ನಷ್ಟು 'ಅಚ್ಛೇದಿನ್'ಗಳ ಆಶಯ

ಏರ್ ಇಂಡಿಯಾ ಮಾತ್ರವಲ್ಲ ಇನ್ನೂ ಸುಮಾರು 30 ಸಾರ್ವಜನಿಕ ವಲಯದ ಸಂಸ್ಥೆಗಳನ್ನು, ಕಂಪನಿಗಳನ್ನು ಖಾಸಗೀಕರಿಸುವ ನಿರ್ಧಾರವನ್ನು ಕೇಂದ್ರ ಸಂಪುಟ ಮಾಡಿರುವುದಾಗಿ ವರದಿಯಾಗಿದೆ. ಜನವರಿ 9–10ರಂದು 2016–17ರಲ್ಲಿ 2589.14 ಕೋಟಿ ರೂ.ಗಳ ಲಾಭವನ್ನು ತೋರಿಸಿರುವ 'ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ'(ಎನ್‌ಎಂಡಿಸಿ)ದ 2.52% ಶೇರುಗಳ ಮಾರಾಟವನ್ನು ಆರಂಭಿಸಲಾಗಿದೆ.

ಡ್ರೆಡ್ಜಿಂಗ್ ಕಾರ್ಪೊರೇಶನ್, ಇಂಡಿಯನ್ ಮೆಡಿಸಿನ್ಸ್ ಫಾರ್ಮಸುಟಿಕಲ್ಸ್, ಮಿಶ್ರಧಾತು ನಿಗಮ್, ಮಜಗಾಂವ್ ಡಾಕ್, ಐಆರ್‌ಸಿಟಿಸಿ, ಐಆರ್‌ಸಿಒಎನ್ ಮೂಮತಾದ ಘಟಕಗಳಲ್ಲೂ ಶೇರು ಹಿಂಪಡಿಕೆಯ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯಂತೆ. 2019ರ ಚುನಾವಣಾ ಬಿಸಿ ಏರುವ ಮೊದಲು ಇಂತಹ ಇನ್ನಷ್ಟು ಕ್ರಮಗಳು ಬರಬಹುದೆಂದು ಖಾಸಗೀ ಕುಳಗಳು ನಿರೀಕ್ಷಿಸುತ್ತಿದ್ದಾರೆ.

ಬಿಇಎಂಎಲ್ ಖಾಸಗೀಕರಣ ಸದ್ಯಕ್ಕಿಲ್ಲ

ಕಳೆದ ವರ್ಷ ಕೊನೆಯಾಗುತ್ತಿದ್ದಂತೆ ಖಾಸಗೀಕರಣದ ಕುಳಗಳಿಗೆ ಒಂದು ನಿರಾಸೆ ಉಂಟಾಗಿತ್ತು. ಸಾರ್ವಜನಿಕ ವಲಯದಲ್ಲಿರುವ ಬಿಇಎಂಎಲ್‌ನ ಖಾಸಗೀಕರಣದ ನಡೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ ಎಂದು ಕೇಂದ್ರ ಸರಕಾರವೇ ದೃಢಪಡಿಸಬೇಕಾಗಿ ಬಂದಿತು. ಸಿಪಿಐ(ಎಂ) ಸಂಸದ ಎಂ ಬಿ ರಾಜೇಶ್ ಕೇಳಿದ ಪ್ರಶ್ನೆ ಉತ್ತರಿಸುತ್ತ ರಕ್ಷಣಾ ರಾಜ್ಯಮಂತ್ರಿಗಳು ಇದನ್ನು ಲೋಕಸಭೆಯಲ್ಲಿ ದೃಢಪಡಿಸಿದ್ದಾರೆ. ಇದು ರಾಷ್ಟ್ರೀಯ ಭದ್ರತೆಮತ್ತು ಸ್ವಾವಲಂಬನೆಗೆ ಮಾರಕವಾದ ಕ್ರಮ ಎಂಬ ಟೀಕೆಗೆ ಒಳಗಾಗಿತ್ತು. ನೌಕರರು ಈ ಖಾಸಗೀಕರಣವನ್ನು ವ್ಯಾಪಕ ಹೋರಾಟ ನಡೆಸುತ್ತಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು.



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಸಿನೆಮಾಮಂದಿರಗಳಲ್ಲಿ ರಾಷ್ಟ್ರಗೀತೆ: 12 ಉನ್ನತ ಸರಕಾರೀ ಅಧಿಕಾರಿಗಳ ಸಮಿತಿಯಿಂದ ಪರಿಶೀಲನೆ!

ಜನಗಳು ದೇಶಪ್ರೇಮವನ್ನು ತೊಟ್ಟುಕೊಂಡೇ ಓಡಾಡುವಂತೆ ಬಲವಂತ ಮಾಡಲು ಸಾಧ್ಯವಿಲ್ಲ, ರಾಷ್ಟ್ರಗೀತೆ ಹಾಡುವಾಗ ನಿಂತಿರದಿರುವ ಒಬ್ಬ ವ್ಯಕ್ತಿಯನ್ನು ಅದಕ್ಕಾಗಿ ಕಡಿಮೆ ದೇಶಪ್ರೇಮಿ ಎಂದು ಭಾವಿಸಲಾಗದು ಎಂದು ಈಗ ದೇಶದ ಸರ್ವೋಚ್ಚ ನ್ಯಾಯಾಲಯ ಹೇಳಿದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಮಂತ್ರಾಲಯ ಈ ಪ್ರಶ್ನೆಯನ್ನು ಕಳೆದ ಡಿಸೆಂಬರ್ 5ರಂದು ನೇಮಿಸಿರುವ ಒಂದು 12 ಸದಸ್ಯರಿರುವ ಸಮಿತಿಯ ಪರಿಶೀಲನೆಗೆ ವಹಿಸಿದೆಯಂತೆ. ಇದು ಸಿನೆಮಾ ಮಂದಿರಗಳಲ್ಲಿ ಮತ್ತು ಇತರ ಸಾರ್ವಜನಿಕ ಸಥಳಗಳಲ್ಲಿ ರಾಷ್ಟ್ರಗೀತೆಯನ್ನು ಹಾಡುವ ಬಗ್ಗೆ ಅಂತಿಮ ನಿರ್ಣಯಕ್ಕೆ ಬರುತ್ತದಂತೆ. 11 ಇಲಾಖೆಗಳ ಜಂಟಿ ಕಾರ್ಯದರ್ಶಿಗಳಿರುವ ಈ ಸಮಿತಿಯ ಮುಖ್ಯಸ್ಥರು ಗೃಹ ಇಲಾಖೆಯ ಅಡಿಶನಲ್ ಕಾರ್ಯದರ್ಶಿ!

ರಾಷ್ಟ್ರಗೀತೆಗೆ ಜನಗಳು ಗೌರವ ಕೊಡುತ್ತಿದ್ದಾರೆ. ಆ ಬಗ್ಗೆ ಪರಿಶೀಲಿಸಬೇಕು ಎಂದು ಯಾವ ಜನವಿಭಾಗವೂ ಬೇಡಿಕೆ ಇಟ್ಟಿಲ್ಲ. ದೇಶ ಆರ್ಥಿಕ ಮಂದಗತಿ, ನಿರುದ್ಯೋಗ ಮುಂತಾದ ಹಲವು ಪ್ರಶ್ನೆಗಳನ್ನು ದೇಶ ಎದುರಿಸುತ್ತಿದೆ. ಲಕ್ಷಾಂತರ ಕಾರ್ಮಿಕರು, ರೈತರು, ಯುವಜನರು ದಿಲ್ಲಿಗೆ ಬಂದು ತಮ್ಮ ಅಹವಾಲುಗಳನ್ನು ಸರಕರದ ಮುಂದಿಟ್ಟಿದ್ದಾರೆ. ಅವನ್ನೆಲ್ಲ ಪರಿಶೀಲಿಸುವ ಕಾಳಜಿಯನ್ನೂ ತೋರದ ಸರಕಾರ ರಾಷ್ಟ್ರಗೀತೆಯನ್ನು ಹಾಡುವ ಸಮಸ್ಯೆಯೇ ಅಲ್ಲದ ವಿಷಯದ ಮೇಲೆ 12 ಉನ್ನತ ಅಧಿಕಾರಿಗಳನ್ನು ತೊಡಗಿಸುವ ಅಗತ್ಯವಾದರೂ ಏನು ಎಂಬ ಪ್ರಶ್ನೆ ಸಹಜ. ಬಹುಶಃ ಅಚ್ಛೇ ದಿನ್‌ಗಳಲ್ಲಿ ಈಗ ಉತ್ತರವೂ ಅಷ್ಟೇ ಸುಲಭವಾಗಿದೆ–ಎಲ್ಲವೂ ಒಳ್ಳೆಯ ದಿನಗಳಿಗಾಗಿ, ಸ್ವಾಮೀ!

ಅಸ್ಪೃಶ್ಯತೆಯ ಆಚರಣೆ ಯುಪಿ, ರಾಜಸ್ತಾನ ಮತ್ತು ದಿಲ್ಲಿಯ ನಗರಪ್ರದೇಶಗಳಲ್ಲೂ ಹೆಚ್ಚು

ಇದು ಇತ್ತೀಚೆಗೆ ನಡೆಸಿದ ಒಂದು ಸರ್ವೆಯಲ್ಲಿ ಕಂಡು ಬಂದ ಸಂಗತಿ ಎಂದು 'ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯಲ್ಲಿ ಪ್ರಕಟವಾದ ವರದಿ ಹೇಳಿದೆ.

ಅಸ್ಪೃಶ್ಯತೆಯನ್ನು ಒಮದು ಅಪರಾಧವಾಗಿ ಪರಿಗಣಿಸಿದ್ದರೂ, ಇದರ ವಿರುದ್ಧ ದಶಕಗಳ ಚಳುವಳಿ ನಡೆದಿದ್ದರೂ ಈಗಲೂ 50%ದಷ್ಟು ಜನಗಳು ಅಂತಹ ಆಚರಣೆಗಳಲ್ಲಿ ತಾವು ಅಥವ ತಮ್ಮ ಕುಟುಂಬದವರು ತೊಡಗಿದ್ದಾರೆ. ಎಂದು ಒಪ್ಪಕೊಂಡಿದ್ದಾರಂತೆ. ಗ್ರಾಮೀಣ ಉತ್ತರಪ್ರದೇಶದಲ್ಲಿ 64% ಮತ್ತು ಗ್ರಾಮೀಣ ರಾಜಸ್ತಾನದಲ್ಲಿ 66% ಮಂದಿ ಇದನ್ನು ಒಪ್ಪಿಕೊಂಡಿದ್ದಾರೆ. ನಗರಪ್ರದೇಶಗಳಲ್ಲೂ ಇದು ಬಹಳ ಕಡಿಮೆಯೇನಿಲ್ಲ. ರಾಜಸ್ತಾನ 50%, ಉ.ಪ್ರ. 48% ,ದಿಲ್ಲಿಯಲ್ಲೂ 39%!

ಈ ಪ್ರದೇಶಗಳಲ್ಲಿ ಅಚ್ಛೇದಿನ್ ಪ್ರಭಾವಕ್ಕೂ ಇದಕ್ಕೂ ಏನಾದರೂ ಸಂಬಂಧವಿರಬಹುದೇ?

ಫಲಾಫಲಭರಿತ ಕರ್ಮಗಳು: ಕಳೆದ ನವಂಬರ್‌ನಲ್ಲಿ ಹರ್ಯಾಣದಲ್ಲಿ ನಡೆಸಿದ ಅಂತರ್ರಾಷ್ಟ್ರೀಯ ಗೀತಾ ಮಹೋತ್ಸವಕ್ಕೆ ಹರ್ಯಾಣ ಬಿಜೆಪಿ ಸರಕಾರ 10 ಭಗವದ್ಗೀತೆಯ ಪ್ರತಿಗಳನ್ನು ಖರೀದಿಸಿತ್ತು. ಇದಕ್ಕೆ ಅದು ತೆತ್ತ ಬೆಲೆ ರೂ. 3,79,500.

ಅಂದರೆ ಒಂದು ಪ್ರತಿಗೆ 37,950ರೂ. ಹಿಸ್ಸಾರ್‌ನ ರಾಹುಲ್ ಸೆಹ್ರಾವತ್ ಎಂಬವರು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ದೊರೆತಿರುವ ಉತ್ತರದಿಂದ ಇದು ಬಯಲಿಗೆ ಬಂದಿದೆ. ಇಷ್ಟೊಂದು ದುಬಾರಿ ಬೆಲೆಗೆ ಕಾರಣ ಅದನ್ನು ಹಸ್ತಪ್ರತಿಯಂತೆ ಕಾಣಲೆಂದು ವಿಶೇಷ ಕಾಗದದ ಮೇಲೆ ಮುದ್ರಿಸಿರುವುದರಿಂದಾಗಿ, ಎನ್ನಲಾಗಿದೆ.

ಇದಲ್ಲದೆ, ಈ ಮಹೋತ್ಸವದ ಇತರ ಗಮನ ಸೆಳೆದಿರುವ ಖರ್ಚುಗಳೆಂದರೆ, ಬಿಜೆಪಿ ಸಂಸದೆ ಹೇಮಾಮಾಲಿನಿ ಮತ್ತು ಬಿಜೆಪಿ ದಿಲ್ಲಿ ಅಧ್ಯಕ್ಷ ಮನೋಜ್ ತಿವಾರಿಗೆ ಅವರು ಈ ಮಹೋತ್ಸವದಲ್ಲಿ ಕೊಟ್ಟ ಕಾರ್ಯಕ್ರಮಕ್ಕಾಗಿ ಅನುಕ್ರಮವಾಗಿ 15ಲಕ್ಷ ರೂ. ಮತ್ತು 10ಲಕ್ಷ ರೂ. ತೆರಲಾಗಿದೆ. ಅಂದರೆ ಕರ್ಮ ಮಾಡಿ ಫಲವನ್ನೂ ಪಡೆಯಲಾಗಿದೆ.

ಅಲ್ಲದೆ ಮಹೋತ್ಸವ ನಡೆದ ಸ್ಥಳದಲ್ಲಿ ಒಂದು ಕೊಳದ 'ರಿಪೇರಿ'ಗೆ 1.1 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದು ಕರ್ಮ ಮಾಡದೇ ಪಡೆದ ಫಲ ಇರಬಹುದು ಎನ್ನಲಾಗಿದೆ–ಏಕೆಂದರೆ ಅದು ಮೊದಲೇ ಸುಸ್ಥಿತಿಯಲ್ಲಿದ್ದ ಕೊಳವಂತೆ.

ಇವೆಲ್ಲ 'ಸಾರ್ವಜನಿಕ ಹಿತದೃಷ್ಟಿ'ಯಿಂದ ಮಾಡಿದ ಖರ್ಚುಗಳು ಎಂದು ಅಲ್ಲಿಯ ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡಿದ್ದಾರೆ.



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿಹಿಂದಿ. ಕಾಂ.

ಚುನಾವಣಾ ಬಾಂಡ್ ಎಂದರೆ ಸಂದೇಹಾಸ್ಪದ ನಿಧಿಗಳನ್ನು ಸಾರ್ವಜನಿಕರ ಕಣ್ಣಿಗೆ ಬೀಳದಂತೆ ಒದಗಿಸುವ ಮಾರ್ಗ



ಹಣಕಾಸು ಮಂತ್ರಿಗಳಿಗೆ ಸೀತಾರಾಮ್ ಯೆಚುರಿ ಪತ್ರ

ಕಳೆದ ಬಜೆಟ್‌ನಲ್ಲಿ ಹೇಳಿದ್ದ 'ಚುನಾವಣಾ ಬಾಂಡ್'ಗಳನ್ನು ಜಾರಿಗೊಳಸಬಯಸುವ ಮೋದಿ ಸರಕಾರದ ಹಣಕಾಸು ಮಂತ್ರಿಗಳು ಈ ಬಗ್ಗೆ ಪ್ರತಿಕೂಲ ಪತ್ರಿಕ್ರಿಯೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೆ ಈ ಕುರಿತಂತೆ ಸಲಹೆ-ಸೂಚನೆಗಳನ್ನು ತಿಳಿಸಬೇಕೆಂದು ಕೇಳಿದ್ದರು. ಅದಕ್ಕೆ ಸ್ಪಂದಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಬರೆದಿರುವ ಪತ್ರದಲ್ಲಿ ರಾಜಕೀಯ ಪಕ್ಷಗಳಿಗೆ ನಿಧಿ ನೀಡಿಕೆಯನ್ನು ಹಿಂದಿಗಿಂತಲೂ ಇನ್ನಷ್ಟು ಅಪಾರದರ್ಶಕಗೊಳಸುವ ಕ್ರಮಗಳಲ್ಲಿ ಇದು ಇನ್ನೊಂದು, ಅದು ಮಾಡುತ್ತಿರುವುದು ನಿರ್ದಿಷ್ಟ ರಾಜಕೀಯ ಪಕ್ಷಗಳಿಗೆ ಸಂದೇಹಾಸ್ಪದ ನಿಧಿಗಳನ್ನು, ದಾಖಲಾಗದೆ, ಘೋಷಿಸದೆ ಸಾರ್ವಜನಿಕ ವೀಕ್ಷಣೆಯಿಂದ ರಕ್ಷಿಸಿ ವರ್ಗಾಯಿಸಲು ಒಂದು ಮಾರ್ಗವನ್ನು ಒದಗಿಸುವ ಕೆಲಸವನ್ನು ಎಂದು ವಿಷಾಧದಿಂದ ಹೇಳಿದ್ದಾರೆ.

ಈ ಚುನಾವಣಾ ಬಾಂಡಿನೊಂದಿಗೆ, ಇದಕ್ಕೆ ಮೊದಲು ಈ ಸರಕಾರ ಕೈಗೊಂಡಿರುವ ಎಫ್‌ಆರ್‌ಸಿಎ ತಿದ್ದುಪಡಿ ಮೂಲಕ ವಿದೇಶಿ ನಿಧಿ ನೀಡಿಕೆಗೆ ಅವಕಾಶ ಕಲ್ಪಿಸಿರುವುದು ಮತ್ತು ಕಾರ್ಪೊರೇಟ್ ದೇಣಿಗೆಗಳ ಮೇಲಿನ ಗರಿಷ್ಟ ಮಿತಿಯನ್ನು ತೆಗೆಯುವ ಕ್ರಮಗಳು ರಾಜಕೀಯ ನಿಧಿನೀಡಿಕೆಯನ್ನು ಸಾರ್ವಜನಿಕ ಪರೀಕ್ಷಣೆಗೆ ಅವಕಾಶವಿಲ್ಲದ ಒಂದು 'ಕರಿ ಪೆಟ್ಟಿಗೆ'(ಬ್ಲಾಕ್ ಬಾಕ್ಸ್) ಯಾಗಿಸಿವೆ, ಇವುಗಳ ಪರಾಮರ್ಶೆ ಮತ್ತು ತಕ್ಷಣವೇ ಮರುಪರಿಶೀಲನೆ ನಡೆಸಬೇಕು, ಎಂದು ಮೋದಿ ಸರಕಾರವನ್ನು ಆಗ್ರಹಿಸಿದ್ದಾರೆ. ಅವರ ಈ ಪತ್ರವನ್ನು ಸಿಪಿಐ(ಎಂ) ಬಿಡುಗಡೆ ಮಾಡಿದ್ದು ಅದರ ಪೂರ್ಣಪಾಟವನ್ನು ಇಲ್ಲಿ ಕೊಡಲಾಗಿದೆ. ಇಲ್ಲಿ ಕಾಣುತ್ತಿರುವರುವ ಒತ್ತುಗಳು ಮೂಲ ಪತ್ರದಲ್ಲಿಲ್ಲ, ನಾವು ಸೇರಿಸಿದ್ದು.

ಪ್ರಿಯ ಶ್ರೀ ಅರುಣ್ ಜೇಟ್ಲಿಜೀ,

ನೀವು ಚುನಾವಣಾ ನಿಧಿನೀಡಿಕೆಯ 'ಸುಧಾರಣೆ'ಗಳ ಬಗ್ಗೆ ಸಲಹೆ-ಸೂಚನೆಗಳನ್ನು ಕೇಳಿರುವುದರಿಂದ ಈ ಪತ್ರ ಬರೆಯುತ್ತಿದ್ದೇನೆ.

ಸಿಪಿಐ(ಎಂ) ಸದಾ ಮತ್ತು ನಿರಂತರವಾಗಿ ಸ್ವಚ್ಛ ಚುನಾವಣಾ ನಿಧಿ ನೀಡಿಕೆಯ ಅಗತ್ಯವಿದೆ ಎಂದು ಹೇಳುತ್ತಾ ಬಂದಿದೆ ಮತ್ತು ವರ್ಷಕಳೆದಂತೆ ಈ ವ್ಯವಸ್ಥೆ ಹೆಚ್ಚೆಚ್ಚು ಹಣವಿರುವವರ ಪರವಾಗುತ್ತಿರುವುದರ ಬಗ್ಗೆ ಆಳವಾದ ಆತಂಕ ಉಂಟಾಗಿದೆ. **ಚುನಾವಣೆಗಳಲ್ಲಿ ಸ್ಪರ್ಧಿಸುವುದು ಈಗ ಒಂದು ವ್ಯಾಪಾರೋದ್ದಿಮೆಯಂತಾಗಿದೆ, ಸಂಪತ್ತಿರುವವರಿಗೆ ಮಾತ್ರ ಸಾಧ್ಯವೆನ್ನುವಂತಾಗಿದೆ. ಇದರಲ್ಲಿ ಕಟ್ಟುನಿಟ್ಟಾದ ಸುಧಾರಣೆ ಅಗತ್ಯವಾಗಿದೆ.**

ಆರಂಭದಲ್ಲಿ, ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ನಿಧಿಗಳನ್ನು ನಿಷೇಧಿಸುವುದು ಒಂದು ಉತ್ತಮ ನಡೆಯಾಗಬಲ್ಲದು. ಕಾರ್ಪೊರೇಟ್‌ಗಳು, ಅದರಲ್ಲೂ ದೊಡ್ಡ ಕಾರ್ಪೊರೇಟ್‌ಗಳು, ರಾಜಕೀಯ ಪಕ್ಷಗಳಿಗೆ ನಿಧಿ ನೀಡಿಕೆಯನ್ನು ಒಂದು ಹೂಡಿಕೆಯಾಗಿ ಕಾಣುತ್ತಾರೆ, ಧೋರಣೆಯನ್ನು ತಮಗೆ ಅನುಕೂಲಕರವಾದ ದಿಕ್ಕುಗಳಲ್ಲಿ ಮುಂದೊತ್ತುವ ಒಂದು ಪರಿಣಾಮಕಾರಿ ಮತ್ತು ಸುಲಭ ಮಾರ್ಗವಾಗಿ ಕಾಣುತ್ತಾರೆ ಎಂಬುದು ನಮ್ಮ ನಂಬಿಕೆ. **ಕಾರ್ಪೊರೇಟ್ ನಿಧಿಗಳನ್ನು ಪಡೆವ ರಾಜಕೀಯ ಪಕ್ಷಗಳು ಕೂಡ ಸರಕಾರದಲ್ಲಿ ಇರುವ ಅವಧಿಯನ್ನು ತಮ್ಮ 'ಸ್ನೇಹಪರ' ಕಾರ್ಪೊರೇಟ್‌ಗಳಿಗೆ ಅನುಕೂಲವಾಗುವ ಧೋರಣೆಗಳನ್ನು ತರಲು ಬಳಸುತ್ತಾರೆ. ಈ ಕಾರ್ಪೊರೇಟ್‌ಗಳು ನಮ್ಮ ವ್ಯವಸ್ಥೆಯನ್ನು ಕೊರೆಯುತ್ತಿರುವ ಭ್ರಷ್ಟಾಚಾರದ 'ಪೂರೈಕೆದಾರರು'.** ಕಾರ್ಪೊರೇಟ್ ನಿಧಿ ನೀಡಿಕೆಯನ್ನು ನಿಷೇಧಿಸದೆ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. 1968ರಿಂದ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ನಿಧಿನೀಡಿಕೆಯ ಮೇಲೆ ಇದ್ದ ನಿಷೇಧವನ್ನು ಸರಕಾರ 1985ರಲ್ಲಿ ತೆಗೆಯಿತು; ಆದರೆ ಅದು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ಅಥವ ಕಪ್ಪು ಹಣದ ಸಮಸ್ಯೆಯನ್ನು ಗುಣಪಡಿಸಲಿಲ್ಲ, ಬದಲಿಗೆ ಸಮಸ್ಯೆ ಇನ್ನಷ್ಟು ಹದಗೆಟ್ಟಿತು.

ಈಗ, ಚುನಾವಣಾ ಪ್ರಚಾರಗಳಲ್ಲಿ ಒಬ್ಬ ಅಭ್ಯರ್ಥಿ ಮಾಡಬಹುದಾದ ವೆಚ್ಚದ ಮೇಲೆ ಮಿತಿ ಇದೆ, ಆದರೆ ರಾಜಕೀಯ ಪಕ್ಷಗಳು ಮಾಡುವ ವೆಚ್ಚದ ಮೇಲೆ ಯಾವುದೇ ಮಿತಿಯಿಲ್ಲ. ಇದು, ನಿಮಗೆ ತಿಳಿದಿರುವಂತೆ, **ಚುನಾವಣಾ ಪ್ರಚಾರದ ವೆಚ್ಚದ ಮೇಲೆ ಮಿತಿ ಹಾಕುವ ವಿಚಾರವನ್ನೇ ಅಪಹಾಸ್ಯಕ್ಕೇ ಈಡುಮಾಡಿದೆ. ರಾಜಕೀಯ ಪಕ್ಷಗಳ ಖರ್ಚುಗಳನ್ನು ಒಂದು ಕಾನೂನು ಮಿತಿಗೆ ಒಳಪಡಿಸಬೇಕು, ಅದರ ಉಲ್ಲಂಘನೆ ಕಠಿಣ ಶಿಕ್ಷೆಗೆ ಗುರಿಯಾಗಬೇಕು.**

ಕಾರ್ಪೊರೇಟ್‌ಗಳು, ಭಾರತೀಯ ಸಮಾಜದ ಎಲ್ಲ ಶಕ್ತಿಶಾಲಿ ವಿಭಾಗಗಳಂತೆ, ಭಾರತೀಯ ಪ್ರಜಾಪ್ರಭುತ್ವವನ್ನು ಬಲಪಡಿಸಲು ತಮ್ಮ ಕೊಡುಗೆಯನ್ನೂ ನೀಡುವಂತೆ ಹೇಳಬೇಕಾಗಿದೆ. ಇದು ಅವರ ಲಾಭಗಳ ಒಂದಂಶವನ್ನು ಚುನಾವಣಾ ನಿಧಿ ನೀಡಿಕೆಗೆಂದು ಇರಿಸಿದ ಒಂದು ಪ್ರಭುತ್ವ ನಿಧಿಗೆ ಕೊಡುವ ಸ್ವರೂಪದಲ್ಲಿ ಇರಬೇಕು ಎಂಬುದು ನಮ್ಮ ವಿಚಾರ.

ಚುನಾವಣೆಗಳಲ್ಲಿ ಪ್ರಭುತ್ವ ನಿಧಿ ನೀಡಿಕೆ ಗಮನಾರ್ಹ ಪ್ರಮಾಣದಲ್ಲಾದರೂ ಇರದೆ, ರಾಜಕೀಯ ನಿಧಿ ನೀಡಿಕೆಯ 'ಶುದ್ಧೀಕರಣ' ಸಾಧ್ಯವಿಲ್ಲ ಈ ವಿಷಯವನ್ನು ಸವಿಸ್ತಾರವಾಗಿ ಪರಿಶೀಲಿಸಿರುವ ದಿನೇಶ್ ಗೋಸ್ವಾಮಿ ಸಮಿತಿ ಮತ್ತು ಇಂದರ್ಜಿತ್ ಗುಪ್ತ ಸಮಿತಿ ಕೂಡ ಇದನ್ನು ಶಿಫಾರಸು ಮಾಡಿವೆ. 'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ' (ಸಿಎಸ್‌ಆರ್) ಎಂದಿರುವಂತೆ ತಮ್ಮ ಗಳಿಕೆಗಳ ಒಂದು ಭಾಗವನ್ನು ಒಂದು ಸಂಗ್ರಹಕ್ಕೆ ದೇಣಿಗೆಯಾಗಿ ನೀಡುವಂತೆ ಕಾರ್ಪೊರೇಟ್‌ಗಳನ್ನು ಕೇಳಬಹುದು. ಇದನ್ನು ಕೆಲವು ಮಾರ್ಗದರ್ಶಿ ನಿಯಮಗಳಂತೆ (ಅಂದರೆ ರಾಜಕೀಯ ಪಕ್ಷಗಳು ಹಿಂದಿನ ಚುನಾವಣೆಯಲ್ಲಿ ಪಡೆದ ಬೆಂಬಲ, ಮತಗಳಿಕೆಯ ಪಾಲು ಅಥವ ಗೆದ್ದ ಸೀಟುಗಳ ಅನುಪಾತದಲ್ಲಿ) ನೀಡಬಹುದು. ಇದು ಭಾರತೀಯ ಪ್ರಜಾಪ್ರಭುತ್ವದ ಆರೋಗ್ಯಕರ ನಿರ್ವಹಣೆಗೆ ಕೊಡುಗೆ ನೀಡುವ, ಈಗಿರುವುದಕ್ಕಿಂತ ಬಹಳಷ್ಟು ಹೆಚ್ಚು ನ್ಯಾಯಯುತವಾದ ಮತ್ತು ಪಾರದರ್ಶಕವಾಗಿರುವ ದಾರಿಯಾಗುತ್ತದೆ.

ಉದಾಹರಣೆಗೆ, ಜರ್ಮನಿಯಲ್ಲಿ ಪಕ್ಷಗಳಿಗೆ ಪ್ರಭುತ್ವದ ನಿಧಿನೀಡಿಕೆ ಇದೆ. ಒಂದು ಧನಸಂಗ್ರಹದಿಂದ ಇದನ್ನು ಹಿಂದಿನ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಪಡೆದ ಸೀಟುಗಳು ಮತ್ತು ಮತಗಳಿಕೆಯ ಅನುಪಾತದಲ್ಲಿ ಹಂಚಲಾಗುತ್ತದೆ. ಪ್ರತಿವರ್ಷ ರಾಜಕೀಯ ಪಕ್ಷಗಳು ಘೋಷಿಸುವ ಸಂಗ್ರಹಗಳನ್ನು ಪ್ರಭುತ್ವವು ಪಕ್ಷಗಳಿಗೆ ಕೊಡುವ ಹಣದಿಂದ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಹೊಂದಿಸಲಾಗುತ್ತದೆ. (ಇದಲ್ಲದೆ ಟೆಲಿವಿಶನ್ ಸುದ್ದಿಗಳಲ್ಲಿ ರಾಜಕೀಯ ಪಕ್ಷಗಳಿಗೆಲ್ಲ ಅನುಪಾತಕ್ಕೆ ಅನುಗುಣವಾಗಿ ಮತ್ತು ನ್ಯಾಯಯುತವಾಗಿ ಸಮಯವನ್ನು ಲಭ್ಯಗೊಳಿಸುವುದು ಇತ್ಯಾದಿ ಪರೋಕ್ಷ ಸಬ್ಸಿಡಿಗಳೂ ಇವೆ).

ನಮ್ಮ ಪರಿಸ್ಥಿತಿಗಳಿಗೆ ಸರಿಹೊಂದಿಸಿಕೊಂಡ ಇಂತಹ ಕ್ರಮಗಳು ರಾಜಕೀಯ ಪಕ್ಷಗಳಿಗೆ ನಿಧಿ ನೀಡಿಕೆಯ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕಗೊಳಿಸಲು ಅಗತ್ಯವಾಗಿದೆ ಎಂಬುದು ನಮ್ಮ ದೃಢವಾದ ನಂಬಿಕೆ.

ನೀವು ಇತ್ತೀಚೆಗೆ ಪರಿಚಯಿಸಿರುವ ಕ್ರಮಗಳು ರಾಜಕೀಯ ನಿಧಿನೀಡಿಕೆಯನ್ನು ಸ್ವಚ್ಛಗೊಳಿಸ ಬಹುದಾಗಿರುವ ಯಾವುದೇ ನಡೆಯನ್ನು ತಿರುಗುಮುರುಗುಗೊಳಿಸಿದೆ ಎಂದು ಹೇಳಲು ನನಗೆ ವಿಷಾದವಾಗುತ್ತಿದೆ. ಚುನಾವಣಾ ಬಾಂಡುಗಳು ಒಂದು ಅತ್ಯಂತ ಪ್ರತಿಗಾಮಿ ನಡೆ. ಅವು ದೇಣಿಗೆದಾರ, ದೇಣಿಗೆ ಪಡೆಯುವಾತ ಮತ್ತು ಮೊತ್ತ ಇವು ಮೂರೂ ಮಹತ್ವದ ಅಂಶಗಳನ್ನು ಅಕ್ಷರಶಃ ಒಂದು ಪ್ರಭುತ್ವ ರಹಸ್ಯವಾಗಿ ಮಾಡಿವೆ. ಇದು ದೇಣಿಗೆದಾರರನ್ನು ಮತದಾರರ ನೆಟ್ಟ ನೋಟದಿಂದ, ಕೆಲವು ಪ್ರಭಾವೀ ದೇಣಿಗೆದಾರರಿಗೆ ನೆರವಾಗುತ್ತದೆಂದೇ ಧೋರಣೆಗಳನ್ನು ಮಾಡಲಾಗುತ್ತಿದೆಯೇ ಎಂದು ತಿಳಿಯಬೇಕಾದ ಮತದಾರರ ನೆಟ್ಟ ನೋಟದಿಂದ ರಕ್ಷಿಸುತ್ತದೆ.

ರಾಜಕೀಯ ದೇಣಿಗೆಗಳಿಗೆ ಕಂಪನಿಗಳಿಗೆ ಇರುವ ಗರಿಷ್ಟ ಮಿತಿಯನ್ನು ತೆಗೆದು, ನೀವು, ಕೇವಲ ರಾಜಕೀಯ ಪಕ್ಷಗಳಿಗೆ ನಿಧಿ ನೀಡಿಕೆಗಾಗಿಯೇ ರಚಿಸುವ 'ಚಿಪ್ಪು'(ಶೆಲ್) ಕಂಪನಿಗಳಿಗೆ ಅವಕಾಶ ಕಲ್ಪಿಸುವ ಸಂಭವಗಳನ್ನು ಹೆಚ್ಚಿಸಿದ್ದೀರಿ. ಇದು ನಮ್ಮ ಪ್ರಜಾಪ್ರಭುತ್ವದ ಸ್ಥಿತಿ-ಗತಿಗೆ ಗಂಭೀರವಾಗಿ ಕೆಡಕುಂಟು ಮಾಡುವ ಒಂದು ಕ್ರಮ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ)ಯನ್ನು ಹಣಕಾಸು ಮಸೂದೆಯ ಮೂಲಕ ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡಿರುವ ಈ ಸರಕಾರ ರಾಜಕೀಯ ಪಕ್ಷಗಳ ಖಜಾನೆಗಳು ವಿದೇಶಿ ದೇಣಿಗೆಗಳಿಂದ ಉಕ್ಕಿ ಹೋಗುವಂತೆ ಸಾಧ್ಯಗೊಳಿಸಿದೆ, ಆಮೂಲಕ ಭಾರತೀಯ ಪ್ರಜಾಪ್ರಭುತ್ವದ ಸ್ಥಿರತೆಗೆ ಒಂದು ಅಪಾಯಕಾರಿ ಆಯಾಮವನ್ನು ಸೇರಿಸಿದೆ.

ರಾಜಕೀಯ ಪಕ್ಷಗಳಿಗೆ ನಿಧಿ ನೀಡಿಕೆಯನ್ನು ಹಿಂದಿಗಿಂತಲೂ ಇನ್ನಷ್ಟು ಅಪಾರದರ್ಶಕಗೊಳಿಸುವ ಕ್ರಮಗಳನ್ನು ಈ ಸರಕಾರ ತಂದಿರುವ ಬಗ್ಗೆ ನಮಗೆ ಆಳವಾದ ಆತಂಕ ಉಂಟಾಗಿದೆ. ಅದು ಮಾಡುತ್ತಿರುವುದು ನಿರ್ದಿಷ್ಟ ರಾಜಕೀಯ ಪಕ್ಷಗಳಿಗೆ ಸಂದೇಹಾಸ್ಪದ ನಿಧಿಗಳನ್ನು, ದಾಖಲಾಗದೆ, ಘೋಷಿಸದೆ ಸಾರ್ವಜನಿಕ ವೀಕ್ಷಣೆಯಿಂದ ರಕ್ಷಿಸಿ ವರ್ಗಾಯಿಸಲು ಒಂದು 'ಚುನಾವಣಾ ಬಾಂಡು'ಗಳ ಮಾರ್ಗವನ್ನು ಒದಗಿಸುವುದು.

ಚುನಾವಣಾ ಬಾಂಡುಗಳು, ಎಫ್‌ಸಿಆರ್ ಕಾಯ್ದೆಯ ಪೂರ್ವಾನ್ವಯ ವಾಗುವಂತಹ (ವಿದೇಶಿ ಕಂಪನಿಗಳಿಂದ ಪರೋಕ್ಷ ನಿಧಿ ನೀಡಿಕೆಗೆ ಅವಕಾಶ ಕೊಡುವ)ತಿದ್ದುಪಡಿ ಮತ್ತು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್‌ಗಳಿ ಕೊಡಬಹುದಾದ ದೇಣಿಗೆಗಳ ಗರಿಷ್ಟ ಮಿತಿಯನ್ನು ತೆಗೆಯುವುದರೊಂದಿಗೆ ಭಾರತದಲ್ಲಿ ರಾಜಕೀಯ ನಿಧಿ ನೀಡಿಕೆಯತ್ತಕೈಗೊಂಡಿರುವ ಅತ್ಯಂತ ಪ್ರತಿಗಾಮಿ ಕ್ರಮಗಳು. ಇವನ್ನು ಹಿಂದಕ್ಕೆ ತಳ್ಳಲೇ ಬೇಕು.

ಈ ಕ್ರಮಗಳು ರಾಜಕೀಯ ನಿಧಿನೀಡಿಕೆಯನ್ನು ಸಾರ್ವಜನಿಕ ಪರೀಕ್ಷಣೆಗೆ ಅವಕಾಶವಿಲ್ಲದ ಒಂದು 'ಕರಿ ಪೆಟ್ಟಿಗೆ'(ಬ್ಲಾಕ್ ಬಾಕ್ಸ್) ಯಾಗಿಸಿವೆ, ಇವುಗಳ ಪರಾಮರ್ಶೆ ಮತ್ತು ತಕ್ಷಣವೇ ಮರುಪರಿಶೀಲನೆ ನಡೆಸಬೇಕು, ಎಂದು ನಾವು ನಿಮ್ಮ ಸರಕಾರವನ್ನು ಆಗ್ರಹಿಸುತ್ತೇವೆ.


ಚುನಾವಣಾ ನಿಧಿ ನೀಡಿಕೆಯನ್ನು ಕುರಿತಂತೆ ಈ ಸಂವಾದ ಇನ್ನೂ ಆಳವಾದ ಚರ್ಚೆಯತ್ತ ಒಯ್ಯುತ್ತದೆ, ಬಹು ಅಗತ್ಯವಾದ ಮತ್ತು ಸಮಗ್ರವಾದ ಚುನಾವಣಾ ಸುಧಾರಣೆಗಳನ್ನು ತರುವಂತೆ ನಿಮ್ಮ ಸರಕಾರವನ್ನು ತಳ್ಳುತ್ತದೆ ಎಂಬುದು ನಮ್ಮ ಆಶಯ. **(ಪ್ರತಿಪಕ್ಷದಲ್ಲಿದ್ದಾಗ ನೀವು ಭಾಗಶಃ ಅನುಪಾತಿಕ ಪ್ರಾತಿನಿಧ್ಯವನ್ನು ತರುವ ನಮ್ಮ ಪ್ರಸ್ತಾವವನ್ನು ಬೆಂಬಲಿಸಿದ್ದೀರಿ, ಆದರೆ ಈಗ ಮೊದಲು ಗೆಲುವಿನ ಗೆರೆ ದಾಟಿದವರು ಗೆಲ್ಲುವ ವ್ಯವಸ್ಥೆಯ ಫಲಗಳನ್ನು ಸವಿದ ಮೇಲೆ ನಿಮ್ಮ ಹುರುಪು ಅಡಗಿ ಹೋಗಿರುವಂತೆ ಕಾಣುತ್ತದೆ).**

ಈ ಹೊಸ ವರ್ಷದಲ್ಲಿ, ನಮ್ಮ ಪ್ರಜಾಪ್ರಭುತ್ವವನ್ನು ಹೆಚ್ಚು ಆರೋಗ್ಯವಂತಗೊಳಿಸುವ, ಹೆಚ್ಚು ಪಾರದರ್ಶಕಗೊಳಿಸುವ ಮತ್ತು ಒಬ್ಬ'ಸಾಮಾನ್ಯ ನಾಗರಿಕ ಒಬ್ಬ ಹಣವಂತನಷ್ಟೇ ಸುಲಭವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಬಹುದಾದಂತಹ ನಿಜವಾಗಿಯೂ ಸಮಾನವಾದ ನೆಲೆಯನ್ನು ಲಭ್ಯಗೊಳಿಸುವಂತಹ ಹೊಸ ಕ್ರಮಗಳನ್ನು ಕೈಗೊಳ್ಳುವಂತೆ ನಿಮ್ಮ ಸರಕಾರವನ್ನು ಆಗ್ರಹಿಸಲಾಗುವುದು ಎಂದು ನಾನು ನಿರೀಕ್ಷಿಸುತ್ತೇನೆ.



ರಾಜಕೀಯ ಪಕ್ಷಗಳಿಗೆ ಯಾರು ದೇಣಿಗೆ ಕೊಡುತ್ತಿದ್ದಾರೆ ಎಂದು ಸಾರ್ವಜನಿಕರಿಗೆ ತಿಳಿಯಬಾರದು ಎಂದೇಕೆ ಬಿಜೆಪಿ ಬಯಸುತ್ತಿದೆ?
ಅಪಾರದರ್ಶಕ ಬಾಂಡ್‌ಗಳು = ಕಪ್ಪು ಹಣ.
ಇದು ಬಾಂಡ್ ಅಲ್ಲ, ಭ್ರಷ್ಟ ಆಚರಣೆಗಳಿಗೆ ಬಂಧಿಯಾಗುವುದು.

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್





ನಾಗರಾಜ ನಂಜುಂಡಯ್ಯ

ಇರಾನ್ ಪ್ರತಿಭಟನೆಗಳು : ಅಮೆರಿಕನ್, ಇಸ್ರೇಲಿ ಹಸ್ತಕ್ಷೇಪ ಸಲ್ಲದು

ಪ್ರಸ್ತುತ ಪ್ರತಿಭಟನಕಾರರು ಎತ್ತಿರುವ ಪ್ರಶ್ನೆಗಳು 1979 ರ ಕ್ರಾಂತಿಯ ಸಂದರ್ಭದಲ್ಲಿ ಎದ್ದಿದ್ದ ಪ್ರಶ್ನೆಗಳನ್ನೇ ಹೆಚ್ಚು-ಕಡಿಮೆ ಹೋಲುತ್ತಿವೆ. ಇರಾನಿನಲ್ಲಿನ ನಿರುದ್ಯೋಗ ಶೇ. 12ಕ್ಕಿಂತ ಹೆಚ್ಚಾಗಿದೆ. ಯುವಕರಲ್ಲಿ ಇದು ಎರಡು ಪಟ್ಟಿಗಿಂತಲೂ ಹೆಚ್ಚು ಅಂದರೆ, ಶೇ. 28.8ರಷ್ಟು ಹೆಚ್ಚಾಗಿದೆ. ಬಡತನ, ಹಸಿವು ತಾಂಡವವಾಡುತ್ತಿದೆ. ಇವೆಕ್ಕೆಲ್ಲಾ ಮೂಲಕಾರಣ ಅಗತ್ಯ ಸರಕುಗಳ ಬೆಲೆಗಳ ಹೆಚ್ಚಳ, ಮತ್ತು ದೀರ್ಘಕಾಲದ ನಿರುದ್ಯೋಗದ ಸಮಸ್ಯೆ ಯುವಜನರನ್ನೂ ಹತಾಶರನ್ನಾಗಿ ಮಾಡಿದೆ. ಹಾಗೆಯೇ, ಇರಾನಿನ ಮೇಲೆ ಹೇರಿರುವ ಆರ್ಥಿಕ ನಿರ್ಬಂಧನೆಗಳು – ಇವೆಲ್ಲಾ ಒಟ್ಟಾರೆಯಾಗಿ ದೇಶದ ಆರ್ಥಿಕತೆಯ ದುಸ್ಥಿತಿಗೆ ಕಾರಣವಾಗಿ, ಸ್ಫೋಟಕ ಪರಿಸ್ಥಿತಿ ಉದ್ಭವಗೊಂಡಿದೆ.

ಇರಾನ್ ದೇಶವು ಕಳೆದ ಒಂದೆರೆಡು ವಾರಗಳಿಂದ ಭಾರೀ ದೊಡ್ಡ ಪ್ರಮಾಣದ ಪ್ರತಿಭಟನಾ ಪ್ರದರ್ಶನಕ್ಕೆ ಸಾಕ್ಷಿಯಾಗಿದೆ. ಸಾವಿರಾರು ಜನರು ಉತ್ತಮ ಜೀವನಕ್ಕಾಗಿ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. 2009ರ ಚುನಾವಣೆಯಲ್ಲಿ ನಡೆದ ಅಕ್ರಮ-ವಂಚನೆಯ ವಿರುದ್ಧ ಇರಾನಿನಲ್ಲಿ ಆಗ ಭಾರೀ ಪ್ರತಿಭಟನೆ ನಡೆದಿತ್ತು. ಅದರ ನಂತರ ಇದೀಗ ಮೊದಲ ಬಾರಿಗೆ ಅಂತಹದ್ದೆ ಮಹಾ ಪ್ರತಿಭಟನೆ ನಡೆಯುತ್ತಿದೆ. ಸರ್ಕಾರ ಬಿಡುಗಡೆ ಮಾಡಿದ ಅಧಿಕೃತ ಅಂಕಿ-ಅಂಶಗಳ ಪ್ರಕಾರ, ಈ ಪ್ರತಿಭಟನೆಯಲ್ಲಿ ಈವರೆಗೂ 20 ಕ್ಕೂ ಹೆಚ್ಚು ಜನರು ಮೃತ ಪಟ್ಟಿದ್ದಾರೆ ಮತ್ತು ನೂರಾರು ಮಂದಿ ಗಾಯಗೊಂಡಿದ್ದಾರೆ. ಭದ್ರತಾ ಪಡೆಗಳು ಸಾವಿರಾರು ಜನರನ್ನು ಬಂಧಿಸಿದ್ದಾರೆ. ಇರಾನಿನ ಆಂತರಿಕ ಸಚಿವಾಲಯದ ಹೇಳಿಕೆಯಂತೆ, ಬಂಧನಕ್ಕೆ ಒಳಗಾದವರ ಸರಾಸರಿ ವಯಸ್ಸು 20 ರಿಂದ 25 ವರ್ಷಗಳ ನಡುವೆ ಇದೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರಲ್ಲಿ ಬಹುತೇಕರು 25 ವರ್ಷದ ಕೆಳಗಿನ ಯುವಕರು.

2009 ರಲ್ಲಿ ಇರಾನಿನಲ್ಲಿ ನಡೆದ ಪ್ರತಿಭಟನೆಗಳಿಗೂ ಹಾಗೂ ಪ್ರಸ್ತುತ ನಡೆಯುತ್ತಿರುವ ಪ್ರತಿಭಟನೆಗಳಿಗೂ ಇರುವ ಹಲವು ಪ್ರಮುಖ ವ್ಯತ್ಯಾಸಗಳನ್ನು ಗುರುತಿಸಬೇಕಾದ ಅಗತ್ಯವಿದೆ. ಮೊದಲಿಗೆ 2009 ರ ಪ್ರತಿಭಟನೆಗಳು ಹೆಚ್ಚಾಗಿ ಇರಾನಿನ ಪ್ರಮುಖ ನಗರಗಳಿಗೆ ಮಾತ್ರ ಸೀಮಿತಗೊಂಡಿದ್ದವು. ಆದರೀಗ, ಪ್ರತಿಭಟನೆಗಳು ಹಲವು ಗ್ರಾಮೀಣ ಪ್ರದೇಶಗಳಿಗೂ ಆವರಿಸಿಕೊಂಡು ಸಹಜವಾಗಿಯೇ ವ್ಯಾಪಕವಾಗಿ ಇತರೆ ಪ್ರದೇಶಗಳಿಗೂ ಹಬ್ಬುತ್ತಿರುವುದು ಪ್ರಮುಖ ಅಂಶವಾಗಿದೆ. ಇನ್ನೊಂದು ಅಂಶವೆಂದರೆ, 2009 ರಲ್ಲಿ ನಡೆದ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ-ವಂಚನೆಯಿಂದಾಗಿ ಮತಗಳನ್ನು ಮರುಎಣಿಕೆ ಮಾಡಬೇಕೆಂಬ ಒತ್ತಾಯ ಪ್ರಮುಖವಾಗಿತ್ತು. ಆದರೆ ನಲವತ್ತು ವರ್ಷಗಳ ಹಿಂದೆ 1979 ರಲ್ಲಿ ನಡೆದ ಕ್ರಾಂತಿಯು ಕೂಡ 'ಇಂತಹ ಆರ್ಥಿಕ ಪ್ರಶ್ನೆಗಳ' ಮೇಲೆಯೇ ನಡೆದಿತ್ತು ಎಂಬುದನ್ನು ಇಲ್ಲಿ ನೆನಮು ಮಾಡಿಕೊಳ್ಳಬೇಕಾದ ಅಗತ್ಯವಿದೆ.

40 ವರ್ಷಗಳ ನಂತರದ ಪ್ರಸ್ತುತ ಪ್ರತಿಭಟನೆಯಲ್ಲಿಯೂ, ಹೆಚ್ಚು ಯುವ ಜನಾಂಗ ಪಾಲ್ಗೊಂಡಿರುವುದನ್ನು ಗಮನಿಸಬೇಕು. ನವ-ಉದಾರವಾದದ ಪರಿಣಾಮದಿಂದಾಗಿ, ಹೆಚ್ಚಾಗಿರುವ ಆರ್ಥಿಕ ಅಸಮಾನತೆ ಕೆಲವೇ ಶ್ರೀಮಂತ ವರ್ಗದವರ ಕೈಯಲ್ಲಿ ಆದಾಯ ಮತ್ತು ಸಂಪತ್ತಿನ ಕ್ರೋಢೀಕರಣ, ನಿರುದ್ಯೋಗದ ಹೆಚ್ಚಳದಿಂದ ವಿಪರೀತ ನೊಂದಿರುವ ಯುವ ಜನತೆಯನ್ನು ಕಳವಳಕ್ಕೆ ದೂಡಿದೆ. ಇದರಿಂದಾಗಿ "ಆಡಳಿತ ಬದಲಾವಣೆಗೆ" ಪ್ರತಿಭಟನಕಾರರು ಘೋಷಣೆ ಕೂಗುವಂತಾಗಿದೆ.

ಆರ್ಥಿಕ ಅಸಮಾನತೆಯಿಂದಾಗಿ – ಸ್ಫೋಟಕ ಪರಿಸ್ಥಿತಿ ಉದ್ಭವ

ಪ್ರಸ್ತುತ ಪ್ರತಿಭಟನಕಾರರು ಎತ್ತಿರುವ ಪ್ರಶ್ನೆಗಳು 1979 ರ ಕ್ರಾಂತಿಯ ಸಂದರ್ಭದಲ್ಲಿ ಎದ್ದಿದ್ದ ಪ್ರಶ್ನೆಗಳನ್ನೇ ಹೆಚ್ಚು-ಕಡಿಮೆ ಹೋಲುತ್ತಿವೆ. ಇರಾನಿನಲ್ಲಿನ ನಿರುದ್ಯೋಗ ಶೇ. 12ಕ್ಕಿಂತ ಹೆಚ್ಚಾಗಿದೆ. ಯುವಕರಲ್ಲಿ ಇದು ಎರಡು ಪಟ್ಟಿಗಿಂತಲೂ ಹೆಚ್ಚು ಅಂದರೆ, ಶೇ. 28.8ರಷ್ಟು ಹೆಚ್ಚಾಗಿದೆ. ಬಡತನ, ಹಸಿವು ತಾಂಡವವಾಡುತ್ತಿದೆ. ಇವೆಕ್ಕೆಲ್ಲಾ ಮೂಲಕಾರಣ ಅಗತ್ಯ ಸರಕುಗಳ ಬೆಲೆಗಳ ಹೆಚ್ಚಳ, ಮತ್ತು ದೀರ್ಘಕಾಲದ ನಿರುದ್ಯೋಗದ ಸಮಸ್ಯೆ ಯುವಜನರನ್ನೂ ಹತಾಶರನ್ನಾಗಿ ಮಾಡಿದೆ. ಹಾಗೆಯೇ, ಇರಾನಿನ ಮೇಲೆ ಹೇರಿರುವ ಆರ್ಥಿಕ ನಿರ್ಬಂಧನೆಗಳು – ಇವೆಲ್ಲಾ ಒಟ್ಟಾರೆಯಾಗಿ ದೇಶದ ಆರ್ಥಿಕತೆಯ ದುಸ್ಥಿತಿಗೆ ಕಾರಣವಾಗಿ, ಸ್ಫೋಟಕ ಪರಿಸ್ಥಿತಿ ಉದ್ಭವಗೊಂಡಿದೆ.

ಇತ್ತೀಚಿನ ಕಾಲಾವಧಿಯಲ್ಲಿ ವಿವಿಧ ಬಗೆಯ ಅಗತ್ಯ ಸರಕುಗಳ ಬೆಲೆಗಳು ಮುಗಿಲು ಮುಟ್ಟಿವೆ. ಉದಾಹರಣೆಗೆ: ಕಳೆದ ಒಂದು ವರ್ಷದೊಳಗೆ ಮೊಟ್ಟೆಗಳ ಬೆಲೆ ಎರಡು ಪಟ್ಟು ಏರಿಕೆಯಾಗಿರುವುದು. ಜನರಲ್ಲಿ ಕ್ರೋಢೀಕೃತಗೊಂಡಿರುವ ಅಸಮಾಧಾನವು ಪ್ರತಿಭಟನೆಯಾಗಿ ಬೀದಿ-ಬೀದಿಗಳಲ್ಲಿ ಆವರಿಸಿಕೊಂಡಿದೆ. ಜೊತೆಗೆ ಸರ್ಕಾರದ ಆಡಳಿತ ಏಜೆನ್ಸಿಗಳಾದ, ಇಸ್ಲಾಮಿಕ್ ಗಾರ್ಡ್ಸ್ ಕೋರ್, ಇಸ್ಲಾಮಿಕ್ ಧಾರ್ಮಿಕ ನಾಯಕತ್ವ, ಮಜ್ಲಿಸ್ (ಸಂಸತ್) ಮತ್ತು ನ್ಯಾಯಾಧೀಶರಂತಹ ವಿವಿಧ ಪ್ರಭುತ್ವ ಏಜೆನ್ಸಿಗಳ ದಬ್ಬಾಳಿಕೆಯ ನೀತಿಗಳು ಪ್ರತಿಭಟನೆಕಾರರನ್ನು ಮತ್ತಷ್ಟು ಕೆರಳಿಸಿದೆ.

ಆಡಳಿತ ಬದಲಾವಣೆಗಾಗಿ – ಉಗ್ರ ಘೋಷಣೆಗಳು

ಇರಾನಿನ ಆಡಳಿತದ ಕೆಟ್ಟ ವೈಖರಿಯಿಂದಾಗಿ ಜನರಲ್ಲಿ ಬೆಳೆದಿದ್ದ ಹತಾಶೆಯ ಮನೋಭಾವನೆಗಳು ಪ್ರತಿಭಟನೆಗಳಲ್ಲಿ ಸ್ಫೋಟಗೊಂಡಿವೆ. ಮಶ್ಹಾದ್ ಎಂಬ ನಗರದಲ್ಲಿ ಘೋಷಣೆಗಳು ಉಗ್ರರೂಪ ಹೊಂದಿದ್ದವು. "ಸರ್ವಾಧಿಕಾರಿ ಆಡಳಿತ ಸಾಯಲಿ", "ಇಸ್ಲಾಮಿಕ್ ರಿಪಬ್ಲಿಕ್‌ಗೆ ಧಿಕ್ಕಾರವಿರಲಿ" ಎಂಬ ಘೋಷಣೆಗಳು ಕೇಳಿ ಬಂದವು. ನಾವೆಲ್ಲರೂ ಉದ್ಯೋಗ ವಿಲ್ಲದೆ, ಹಣವಿಲ್ಲದೆ ಬದುಕುವುದು ಹೇಗೆ? ಜೀವನಾಧಾರಕ್ಕೆ ಏನು ಮಾಡುವುದು? ಎಂಬ ಹತಾಶೆಯೊಂದಿಗೆ ಪ್ರಭುತ್ವವನ್ನು ಪ್ರಶ್ನಿಸುತ್ತಿದ್ದರು. 'ಆರ್ಥಿಕ ನಿರ್ಬಂಧನೆಗಳು' ಪರಿಸ್ಥಿತಿಗೆ ಮೂಲ ಕಾರಣವೆನ್ನುವ ಆಡಳಿತಗಾರರ ಸಮರ್ಥನೆಗೆ, 'ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ ಹೇಗೆ? ಎಂಬ ಪ್ರತಿಭಟನೆಕಾರರ ಪ್ರಶ್ನೆಗೆ ಉತ್ತರ ಅವರಲ್ಲಿ ಇರಲಿಲ್ಲ. ಆಡಳಿತಗಾರರು, ಶ್ರೀಮಂತರು ಉತ್ತಮ ಜೀವನಶೈಲಿ ನಡೆಸುತ್ತಿದ್ದಾರೆ. ಆದರೆ ಸಾಮಾನ್ಯ ಜನರು, ಕಾರ್ಮಿಕರು-ಮಧ್ಯಮ ವರ್ಗದವರು ಮಾತ್ರ ಬಡತನಕ್ಕೆ ತಳ್ಳಲ್ಪಡುತ್ತಿದ್ದಾರೆ. ಆದ್ದರಿಂದ ಇವರು ಮಾತ್ರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ದೇಶದ ನೈಸರ್ಗಿಕ ಸಂಪನ್ಮೂಲಗಳಿಂದ ಹಾಗೂ ತೈಲ ಮಾರಾಟದಿಂದ ಬರುವ ಹೆಚ್ಚಿನ ಲಾಭಾಂಶವನ್ನು ಶ್ರೀಮಂತರ ಹಾಗೂ ಆಳುವ ವರ್ಗಗಳ ಏಳಿಗೆಗಾಗಿ ಬಳಸಿಕೊಂಡು, ಅವರ ಹಿತಾಸಕ್ತಿಯನ್ನು ಸರ್ಕಾರ ರಕ್ಷಿಸುತ್ತಿದೆ ಎಂಬ ಪ್ರತಿಭಟನಾಕಾರರ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ.

ಮಾರ್ಕ್ಸ್-ಲೆನಿನ್ ಸಿದ್ಧಾಂತದ – ಇರಾನಿನ ತುದೇ ಪಕ್ಷ (Tudeh party) ದ ಎಚ್ಚರಿಕೆ

ಮಾರ್ಕ್ಸ್-ಲೆನಿನ್ ಮತ್ತು ವೈಜ್ಞಾನಿಕ ಸಮಾಜವಾದದ ಸಿದ್ಧಾಂತಕ್ಕೆ ಅನುಗುಣವಾಗಿ – ಬದ್ಧತೆಯೊಂದಿಗೆ ತೊಡಗಿಸಿಕೊಂಡ ಕಾರಣ 'ತುದೇ ಪಕ್ಷ'ವನ್ನು ಇರಾನಿನಲ್ಲಿ ನಿಷೇಧಿಸಲಾಗಿದೆ. ಪ್ರಸ್ತುತ ನಡೆಯುತ್ತಿರುವ ಜನಪ್ರಿಯ ಪ್ರತಿಭಟನಾ ಪ್ರದರ್ಶನಗಳಲ್ಲಿ ಇದೀಗ ತೊಡಗಿಸಿಕೊಂಡಿರುವ ತುದೇ ಪಕ್ಷವು ಜನಸಾಮಾನ್ಯರ ಚಳುವಳಿಯಲ್ಲಿ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳಲು ಇರಾನಿನ ಪ್ರಗತಿಶೀಲ ಮತ್ತು ಸ್ವಾತಂತ್ರ್ಯವನ್ನು ಪ್ರೀತಿಸುವ ಜನರು, ಹಿಂದೆಂದಿಗಿಂತಲು ಹೆಚ್ಚಿನ ಮಟ್ಟದಲ್ಲಿ ಪಾಲ್ಗೊಳ್ಳಬೇಕೆಂಬ ಹೇಳಿಕೆ ನೀಡಿದೆ ಮತ್ತು ಪ್ರತಿಭಟನೆಕಾರರಿಗೆ ಪ್ರಗತಿಪರ ಮಾರ್ಗದರ್ಶನ ನೀಡುತ್ತಿದೆ. ಜನಸಮೂಹದ ಕಾನೂನು ಬದ್ಧ ಬೇಡಿಕೆಗಳನ್ನು ಈಡೇರಿಸಲು ಪ್ರಸ್ತುತ ಅಸ್ತಿತ್ವದಲ್ಲಿರುವ ದಬ್ಬಾಳಿಕೆಯ ಆಡಳಿತವನ್ನು ನಿರ್ಮೂಲನೆ ಮಾಡುವುದು ಮತ್ತು ರಾಷ್ಟ್ರದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಲೂಟಿ ಮಾಡುವುದನ್ನು ಕೊನೆಗೊಳಿಸುವುದರ ಕುರಿತಂತೆ 'ತುದೇ ಪಕ್ಷ ತೊಡಗಿಸಿಕೊಂಡಿದೆ. ಈ ಸಂದರ್ಭದಲ್ಲಿ ಪ್ರತಿಗಾಮಿ ಮತ್ತು ವಿಭಜನಾ ಘೋಷಣೆ ಕೂಗುವುದನ್ನೂ ನಿಲ್ಲಿಸಬೇಕೆಂಬ ಎಚ್ಚರಿಕೆಯ ಮಾರ್ಗದರ್ಶನವನ್ನು ಪ್ರತಿಭಟನೆಕಾರರಿಗೆ ನೀಡಿದೆ.

ತುದೇ ಪಕ್ಷವು ಸಮರಶೀಲ ಐತಿಹಾಸಿಕ ಹೋರಾಟಗಳ ಅನುಭವದಿಂದ ಶ್ರೀಮಂತಗೊಂಡಿರುವ ಪಕ್ಷವಾಗಿರುವುದರಿಂದ, ಜನರನ್ನೂ ಜಾಗರೂಕರಾಗಿರುವಂತೆ ಎಚ್ಚರಿಕೆ ನೀಡಿದೆ. ಪ್ರತಿಗಾಮಿ ಅವಕಾಶವಾದಿಗಳ ಗುಂಪು ಈ ಹಿಂದೆ ಜನರ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ರಾಷ್ಟ್ರದ ಸಮರಶೀಲ ಹೋರಾಟವನ್ನು ಹೈಜಾಕ್ ಮಾಡಿದ್ದರು. ಆ ರೀತಿ ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸುವಂತೆ, 'ತುದೇ ಪಕ್ಷ'ವು ಪ್ರತಿಭಟನೆಕಾರರಿಗೆ ಹೇಳಿದೆ. ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದನ್ನೂ ಅದು ಸ್ವಾಗತಿಸಿದೆ. ಗೆಲ್ಲಲು ಅಗತ್ಯವಿರುವ ಏಕೈಕ ಮಾರ್ಗವೆಂದರೆ, ಎಲ್ಲಾ ಸಾಮಾಜಿಕ ಪದರಗಳ ಸಂಘಟಿತ ಹೋರಾಟ ಮತ್ತು ಜಂಟೀ ಆಂದೋಲನದ ಮೂಲಕ, ಅದು ಕಾರ್ಮಿಕರ ಜೊತೆಗೆ, ವಿದ್ಯಾರ್ಥಿಗಳು ಮತ್ತು ಮಹಿಳೆಯರು, ಜನಸಾಮಾನ್ಯರು ರಾಷ್ಟ್ರವ್ಯಾಪಿ ಮುಷ್ಕರಗಳನ್ನು ನಡೆಸುವ ಮೂಲಕವಷ್ಟೆ ಯಶಸ್ಸು ಎಂಬ ಮಾರ್ಗದರ್ಶನ ಕೊಡುತ್ತಿದೆ.

ಬಾಹ್ಯ ಮಧ್ಯಪ್ರವೇಶ ಸಲ್ಲದು : 'ತುದೇ ಪಕ್ಷ' ಎಚ್ಚರಿಕೆ

ಅಮೆರಿಕ ಮತ್ತು ಇಸ್ರೇಲ್ ತಕ್ಷಣವೇ ಇರಾನಿನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ಬೆಂಬಲ ವ್ಯಕ್ತಪಡಿಸಿರುವುದರ ಬಗ್ಗೆ, ತುದೇ ಪಕ್ಷ, ಇರಾನಿನ ಜನರಿಗೆ ಎಚ್ಚರಿಕೆಯ ಮಾರ್ಗದರ್ಶನ ನೀಡಿದೆ. ಬಾಹ್ಯ ಮಧ್ಯಪ್ರವೇಶ ಸಲ್ಲದು ಎಂದಿದೆ. ಇರಾನಿನ ಬೆಳವಣಿಗೆಗಳ ಕುರಿತಂತೆ ಸಂತೋಷದಿಂದಿರುವ ಡೊನಾಲ್ಡ ಟ್ರಂಪ್, ಈ ರೀತಿ ಟ್ವೀಟ್ ಮಾಡಿದ್ದಾರೆ. "ಇರಾನ್ ಪ್ರತಿ ಮಟ್ಟದಲ್ಲಿಯೂ ವಿಫಲವಾಗಿದೆ. ಒಬಾಮ ಆಡಳಿತದಿಂದ ಮಾಡಿಕೊಂಡಿದ್ದ ಒಪ್ಪಂದದ ಹೊರತಾಗಿಯೂ, ಇರಾನಿನ ಜನರನ್ನು ಅನೇಕ ವರ್ಷಗಳಿಂದ ನಿಗ್ರಹಿಸಲಾಗಿದೆ. ಅಲ್ಲಿನ ಜನರು ಆಹಾರಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ದೀರ್ಘಕಾಲದಿಂದ ಹಸಿದಿದ್ದಾರೆ. ಮಾನವ ಹಕ್ಕುಗಳ ಜೊತೆಗೆ, ಇರಾನಿನ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. 'ಆಡಳಿತ ಬದಲಾವಣೆಗೆ ಇದು ಸೂಕ್ತವಾದ ಸಮಯ' ವಾಗಿದೆ ಎಂದಿದ್ದಾರೆ.

ಆದರೆ ಇದು ನಿಜವಾಗಿಯೂ ಅಶುಭವಾದದ್ದು, ಒಬ್ಬ ಆಡಳಿತಗಾರನಾಗಿ ಇರಾನಿನ ಪ್ರತಿಭಟನೆಗಳಿಗೆ ಸಂತೋಷ ವ್ಯಕ್ತಪಡಿಸುತ್ತಿರುವುದರ ಹಿನ್ನೆಲೆ ಸ್ವಾರ್ಥದ್ದು ಹಾಗೂ ವ್ಯತಿರಿಕ್ತವಾಗಿದೆ. ಆಫ್ರೋ-ಅಮೆರಿಕನ್ನರ ಪ್ರತಿಭಟನೆಗಳನ್ನು ಮತ್ತು ವಲಸೆಗಾರರ ಹಕ್ಕುಗಳನ್ನು ನಿರ್ದಯವಾಗಿ ನಿಗ್ರಹಿಸುವ ಇವರ ಹೇಳಿಕೆ ಬೂಟಾಟಿಕೆಯಾಗಿದೆ. ಅಮೆರಿಕನ್ ಆಡಳಿತವು ಒಂದು ಕಡೆ ಇರಾನ್ ಜೊತೆ ಅಣು ಒಪ್ಪಂದವನ್ನು ಉಲ್ಲಂಘಿಸಲು ಪ್ರಯತ್ನಿಸುತ್ತಿದೆ ಮತ್ತು ಆ ದೇಶದ ಸ್ವಾತಂತ್ರ್ಯವನ್ನು ಅಸ್ಥಿರಗೊಳಿಸಲು ಕೂಡ ಪಣತೊಟ್ಟಿದೆ. ಇದೀಗ ಅದರ ಮೂಲ ಉದ್ದೇಶಗಳನ್ನು ಸಾಧಿಸಿಕೊಳ್ಳಲು ನಡೆಯುತ್ತಿರುವ ಪ್ರತಿಭಟನೆಗಳನ್ನು ಬಳಸಿಕೊಳ್ಳಲು ಬಯಸುತ್ತಿದೆ.


ಇದೇ ರೀತಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸಹ ಇರಾನಿನ ಪ್ರತಿಭಟನೆಗಳನ್ನು ಬೆಂಬಲಿಸಿದ್ದಾರೆ. ಅವರು ಈ ರೀತಿ ಹೇಳಿಕೆ ನೀಡಿದ್ದಾರೆ. "ಧೈರ್ಯವಂತ ಇರಾನಿಯನ್ನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ನ್ಯಾಯಯುತ, ಸ್ವಾತಂತ್ರ್ಯವನ್ನು ಅವರು ಬಯಸುತ್ತಿದ್ದಾರೆ. ದಶಕಗಳಿಂದ ವಂಚಿಸಲ್ಪಟ್ಟ – ನಿರಾಕರಿಸಲ್ಪಟ್ಟಿದ್ದ ಸ್ವಾತಂತ್ರ್ಯವನ್ನು ಹುಡುಕುವ ಪ್ರಯತ್ನದ ಇವರ ಪ್ರತಿಭಟನೆ ಯಶಸ್ಸು ಕಾಣಲೆಂದು" ಆಶಿಸಿದ್ದಾರೆ. ಇದು ಎಷ್ಟು ವಿರೋಧಾಭಾಸ ಅಥವಾ ಹಾಸ್ಯಾಸ್ಪದವೆಂದರೆ, "ಇದೇ ಇಸ್ರೇಲ್ ಆಡಳಿತವು 'ದಶಕಗಳಿಂದ ಪ್ಯಾಲೆಸ್ತೀನಿಯರ ಸ್ವಾತಂತ್ರ್ಯವನ್ನು ಹರಣಗೊಳಿಸುತ್ತಿದ್ದಾರೆ. ಇವರು ಹೇಗೆ ಇರಾನಿಯನ್ನರ ಹೋರಾಟಗಳಿಗೆ ನೈಜ ಬೆಂಬಲ ಸೂಚಿಸಲು ಸಾಧ್ಯ?



'ತುದೇ ಪಕ್ಷ'ವು ಸಾಮ್ರಾಜ್ಯಶಾಹಿ ಅಮೆರಿಕದ ಬಾಹ್ಯ ಬೆಂಬಲದ ಬಗ್ಗೆ ಎಚ್ಚರಿಸಿದೆ. ಹಾಗೆಯೇ, ಇಸ್ರೇಲ್ ಮತ್ತು ಸೌದಿ ಅರೇಬಿಯಾದ ಬೆಂಬಲವು ಕೂಡ ಬೂಟಾಟಿಕೆ ಎಂದಿದೆ. ನಮ್ಮ ದೇಶ ಮತ್ತು ಪ್ರದೇಶಗಳನ್ನು ಅಸ್ಥಿರಗೊಳಿಸುವ ಅವಕಾಶಕ್ಕಾಗಿ ಕಾಯುತ್ತಿರುವ ಇವರ ಬಗ್ಗೆ ಪಕ್ಷವು ಎಚ್ಚರಿಸಿದೆ. ನಾವು ಆಳವಾಗಿ ನಂಬಿದ್ದೇವೆ ಮತ್ತು ಪುನರುಚ್ಚರಿಸುತ್ತೇವೆ. ಟ್ರಂಪ್‌ನಂತಹ ಜನಾಂಗೀಯ ಪ್ರತಿಗಾಮಿಗಳ ಬೂಟಾಟಿಕೆಯ ಬೆಂಬಲ, ಇರಾನಿನ ಜನರ ಹೋರಾಟಗಳನ್ನು ದಿಕ್ಕುತಪ್ಪಿಸುತ್ತವೆ. ಈಜಿಪ್ಟ್ ಮತ್ತು ಸಿರಿಯಾ ದೇಶಗಳಲ್ಲಿ ಅಮೆರಿಕ ಏನೆಲ್ಲಾ ಮಾಡಿತು. ಇರಾಕ್, ಲಿಬಿಯಾ ಮತ್ತು ಪ್ಯಾಲೇಸ್ತೀನಿಯನ್ ದೇಶಗಳಲ್ಲಿ ಹೇಗೆ ಅಪಾಯಕಾರಿಯಾಗಿತ್ತು ಎಂಬುದಕ್ಕೆ ಇಡೀ ಜಗತ್ತೇ ಸಾಕ್ಷಿಯಾಗಿದೆ. ಅಮೆರಿಕಾದ ಬೆಂಬಲದ ಅನುಭವಗಳು ಮತ್ತು ಸಾಮ್ರಾಜ್ಯಶಾಹಿ ಪಡೆಗಳ ಹಸ್ತಕ್ಷೇಪಗಳನ್ನು ನಿರ್ಲಕ್ಷಿಸಲು ಪ್ರತಿಭಟನಾಕಾರರಿಗೆ ಸೂಚಿಸಿತು. ಇರಾನಿನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ಬಾಹ್ಯ ಹಸ್ತಕ್ಷೇಪದ ವಿರುದ್ಧ ರಷ್ಯಾ ತಕ್ಷಣವೇ ಖಂಡಿಸಿದೆ ಹಾಗೂ ಎಚ್ಚರಿಕೆ ನೀಡಿದೆ.

ಇರಾನಿನಲ್ಲಿ ಪ್ರತಿಭಟನೆಗಳು ನವ ಉದಾರ ಆರ್ಥಿಕ ನೀತಿಗಳ ಮತ್ತಷ್ಟು ಪರಿಣಾಮವಾಗಿವೆ. ಆಳುವ ವರ್ಗಗಳು ಜಾಗತಿಕ ಬಿಕ್ಕಟ್ಟಿನಿಂದ ಹೊರಬರಲು ಸಾಧ್ಯವಾಗದೆ ಜನರ ಮೇಲೆ ನಿರಂತರವಾಗಿ ಹೊರೆಗಳನ್ನು ಹೇರುತ್ತಿದ್ದಾರೆ. ಇರಾನ್ ಪ್ರತಿಭಟನಕಾರರು ಅಂತಹ ದಾಳಿಯ ವಿರುದ್ಧ ಹೋರಾಡುವ ಇಚ್ಛೆ ಪ್ರದರ್ಶಿಸಿರುತ್ತಾರೆ. ಈ ಪ್ರತಿಭಟನೆಗಳನ್ನೂ ಬೆಂಬಲಿಸುವುದು ನಮ್ಮ ಬೌದ್ಧಿಕ ಕರ್ತವ್ಯವಾಗಿದೆ. ಆಂತರಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿಯ ಹಸ್ತಕ್ಷೇಪವನ್ನೂ ವಿರೋಧಿಸುವ ನಮ್ಮ ನಿಲುಮೆಯನ್ನು ವ್ಯಕ್ತಪಡಿಸಲು ಹಿಂಜರಿಕೆ ಬೇಡವೇ ಬೇಡ. ●

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆ – ಜಿ.ವಿ. ಶ್ರೀರಾಮರೆಡ್ಡಿ





ರಾಜ್ಯ ಸಮಿತಿ ಸದಸ್ಯರು

1. ಜಿ.ವಿ. ಶ್ರೀರಾಮರೆಡ್ಡಿ
2. ವಿಜೆಕೆ ನಾಯರ್
3. ಕೆ. ಶಂಕರ್
4. ವಸಂತಾಚಾರಿ
5. ಜೆ. ಬಾಲಕೃಷ್ಣ ಶೆಟ್ಟಿ
6. ಯು. ಬಸವರಾಜು
7. ಎಸ್. ವರಲಕ್ಷ್ಮಿ
8. ವಿ. ಗೀತಾ
9. ಎಂ. ಆರ್. ಶೆಣೈ
10. ಎನ್.ಕೆ. ವಸಂತರಾಜ
11. ಬಿ. ಜಯರಾಮ ರೆಡ್ಡಿ
12. ಕೆ. ಯಾದವ ಶೆಟ್ಟಿ
13. ಜಿ. ನಾಗರಾಜ
14. ಧರ್ಮೇಶ್
15. ಗೋಪಾಲಕೃಷ್ಣ ಅರಳಹಳ್ಳಿ
16. ಹೆಚ್.ಎಸ್. ಸುನಂದ
17. ಆರ್. ಶ್ರೀನಿವಾಸ್
18. ಚನ್ನರಾಯಪ್ಪ
19. ಹೆಚ್.ಪಿ. ಲಕ್ಷ್ಮಿನಾರಾಯಣ
20. ಸಿ.ಸಿ. ಅಶ್ವಥಪ್ಪ
21. ಶರಣಬಸಪ್ಪ ಮಮಶೆಟ್ಟಿ
22. ಪಿ. ಶ್ರೀನಿವಾಸ್
23. ಆರ್.ಎಸ್. ಬಸವರಾಜು

ಆಹ್ವಾನಿತರು

1. ಮಾರುತಿ ಮಾನಪಡೆ
2. ಯಮುನಾ ಗಾಂವ್ಕಾರ್
3. ಮಾಳಮ್ಮ
4. ಮುನೀರ್ ಕಾಟಿಪಳ್ಳ
5. ಗುರುರಾಜ ದೇಸಾಯಿ

ಕಂಟ್ರೋಲ್ ಕಮಿಷನ್

1. ಕೆ.ಆರ್. ಶ್ರೀಯಾನ್
2. ಟಿ. ನಾರಾಯಣಸ್ವಾಮಿ
3. ಎಸ್.ಕೆ. ಗೀತಾ

22ನೇ ಮಹಾಧೀವೇಶನಕ್ಕೆ ಪ್ರತಿನಿಧಿಗಳು

1. ವಿಜೆಕೆ ನಾಯರ್
2. ಜಿ.ಎನ್. ನಾಗರಾಜ
3. ಕೆ. ಶಂಕರ್
4. ನಿತ್ಯಾನಂದಸ್ವಾಮಿ
5. ವಸಂತಾಚಾರಿ
6. ಜೆ. ಬಾಲಕೃಷ್ಣ ಶೆಟ್ಟಿ
7. ಯು. ಬಸವರಾಜು
8. ಎಸ್. ವರಲಕ್ಷ್ಮಿ
9. ಮೀನಾಕ್ಷಿ ಸುಂದರಂ
10. ಕೆ.ಎನ್. ಉಮೇಶ್
11. ಬಿ. ಜಯರಾಮರೆಡ್ಡಿ

ಎಡಶಕ್ತಿಗಳು ಮಾತ್ರ ಜನತೆ ಮತ್ತು ದೇಶದ ಮೇಲಿನ.... ಪುಟ 14 ರಿಂದ

ರಾಜಕೀಯ ಪರಿಸ್ಥಿತಿ, ಪಕ್ಷದ ಮಧ್ಯಪ್ರವೇಶ, ಪಕ್ಷದ ಸಂಘಟನಾ ಬೆಳವಣಿಗೆ, ಸಾಮೂಹಿಕ ರಂಗಗಳು, ಜಿಲ್ಲೆಗಳಲ್ಲಿ ತಕ್ಷಣ ಗಮನಿಸಬೇಕಾದ ಅಂಶಗಳು, ನಮ್ಮ ಮುಂದಿನ ಕರ್ತವ್ಯಗಳು, ಅನುಬಂಧಗಳು – ಎಂಬ 9 ವಿಭಾಗಗಳು ಇದ್ದವು. ವರದಿಯಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿ ವಿಶ್ಲೇಷಿಸುತ್ತಾ ನವ–ಉದಾರವಾದಿ ನೀತಿಗಳನ್ನು ಮುಂದುವರೆಸುತ್ತಾ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ ಕಾಂಗ್ರೆಸ್ ಆಡಳಿತ, ಅದರಲ್ಲೂ ವಿಶೇಷವಾಗಿ – ಬರ ನಿರ್ವಹಣೆಯಲ್ಲಿ, ರೈತರ ಆತ್ಮಹತ್ಯೆಗಳನ್ನು ತಡೆಯುವಲ್ಲಿ, ಕಾರ್ಪೊರೆಟ್ ಅಥವಾ ವಿದೇಶೀ ಬಂಡವಾಳಕ್ಕೆ ಕಾಯುತ್ತಾ ಕೈಗಾರಿಕಾ ಸ್ಥಗಿತತೆಗೆ ಎಡೆಮಾಡಿಕೊಟ್ಟ ನೀತಿಗಳಲ್ಲಿ, ಕಾರ್ಮಿಕರಿಗೆ ಕನಿಷ್ಟ ವೇತನ ಮತ್ತು ಹಲವು ಖಾಯಮೇತರ ರೂಪಗಳಲ್ಲಿ ಅವರ ಗುಲಾಮಗಿರಿ ತಡೆಯುವಲ್ಲಿ, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ತಡೆಯುವಲ್ಲಿ, ಶಿಕ್ಷಣದ ಕೋಮುವಾದೀಕರಣ ವ್ಯಾಪಾರೀಕರಣ ಖಾಸಗೀಕರಣ ತಡೆಯುವಲ್ಲಿ, ಆರೋಗ್ಯ ಸೇವೆಯ ವ್ಯಾಪಾರೀಕರಣ ಖಾಸಗೀಕರಣ ತಡೆಯುವಲ್ಲಿ, ಕೋಮುವಾದೀ ಧ್ರುವೀಕರಣ ಹಾಗೂ ಡಾ.ಎಂ. ಎಂ.ಕಲಬುರ್ಗಿ ಗೌರಿ ಲಂಕೇಶ್ ಕೊಲೆಗಳನ್ನು ತಡೆಯುವಲ್ಲಿ, – ಅದರ ವೈಫಲ್ಯಗಳ ಬಗೆಗೆ ವಿವರಿಸಿದೆ. ಜನರ ಸಮಸ್ಯೆಗಳನ್ನು ಎತ್ತಿಕೊಳ್ಳುವಲ್ಲಿ ಬಿಜೆಪಿ ಮತ್ತು ಜೆಡಿ(ಎಸ್) ಗಳ ವೈಫಲ್ಯದ ಬಗೆಗೂ ವರದಿ ವಿವರಿಸಿದೆ.

ಸಂಘಟನಾ ರಂಗದಲ್ಲಿ ಹಿಂದೆಂದೂ ಕಾಣದ ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಭಾರೀ ಹೋರಾಟಗಳನ್ನು ಸಂಘಟಿಸಿದರೂ ಅವುಗಳನ್ನು ರಾಜಕೀಯ ಪ್ರಭಾವವಾಗಿ, ಪಕ್ಷದ ಸದಸ್ಯತ್ವದ ಹಾಗೂ ರಾಜಕೀಯ ಶಕ್ತಿಯ ವಿಸ್ತರಣೆಗೆ ಬಳಸಿಕೊಳ್ಳುವಲ್ಲಿನ ವೈಫಲ್ಯಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಇದಲ್ಲದೆ, ಸದಸ್ಯತ್ವದ ಗುಣಮಟ್ಟ ಹೆಚ್ಚಿಸುವಲ್ಲಿ, ಶಾಖಾ ಕೆಲಸಗಳನ್ನು ಉತ್ತಮಪಡಿಸುವಲ್ಲಿ, ರಾಜ್ಯ ಕೇಂದ್ರದ ಸಾಮೂಹಿಕ ಕಾರ್ಯಾಚರಣೆ ಮತ್ತು ಐಕ್ಯತೆಯನ್ನು ಹೆಚ್ಚಿಸುವಲ್ಲಿ, ಪೂರ್ಣಾವಧಿ ಕಾರ್ಯಕರ್ತರ ನೇಮಕ, ಅವರಿಗೆ ಜೀವನಾವಶ್ಯಕ ವೇತನ ನಿಗದಿ ಮಾಡಿ ನಿಯಮಿತವಾಗಿ ಅದನ್ನು ಕೊಡುವಲ್ಲಿ ಮತ್ತು ಅವರ ಕಾರ್ಯವಿಧಾನ ಉತ್ತಮಪಡಿಸುವಲ್ಲಿ, ಪಕ್ಷದ ಸದಸ್ಯತ್ವದ ವರ್ಗ ಮತ್ತು ಸಾಮಾಜಿಕ ಸಂಯೋಜನೆ ಅಖಿಲ ಭಾರತ ಪಕ್ಷದ ಸರಾಸರಿಗಿಂತ ಹೆಚ್ಚಿನ ಆಯಾಮಗಳಲ್ಲಿ ಉತ್ತಮವಾಗಿದ್ದರೂ ಕೆಲವು ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು, ವಿದ್ಯಾರ್ಥಿ/ಯುವರಂಗಗಳಲ್ಲಿ ಸ್ಥಗಿತತೆ, ಪಕ್ಷದ ಸಾಮಾಜಿಕ ಮಾಧ್ಯಮದ ಪ್ರಸಾರ ತೃಪ್ತಿಕರವಾಗಿದ್ದರೂ ಪಕ್ಷದ ಪತ್ರಿಕೆ ಪ್ರಕಟಣೆಗಳ ಪ್ರಸಾರದಲ್ಲಿ ಸ್ಥಗಿತತೆ, ಜಿಲ್ಲಾ ಮತ್ತು ಇತರ ಸಮಿತಿಗಳು ಸ್ಥಳೀಯ ವಿಷಯಗಳ ಮೇಲೆ ಸ್ವತಂತ್ರ ಹೋರಾಟ ರೂಪಿಸುವಲ್ಲಿ – ಗಮನಾರ್ಹ ಪ್ರಗತಿ ಸಾಧಿಸದಿರುವುದು ಅಥವಾ ಹಿನ್ನಡೆಯಾಗಿರುವುದು ಮುಂತಾದ ಸಂಘಟನಾ ದೌರ್ಬಲ್ಯಗಳ ಬಗ್ಗೆ ವರದಿ ವಿಶ್ಲೇಷಿಸಿದೆ.

ವರದಿ ಮಂಡನೆಯ ನಂತರ ಜಿಲ್ಲಾ/ರಂಗವಾರು ಪ್ರತಿನಿಧಿಗಳ ಚರ್ಚೆಗೆ ಸಮಯ ನಿಗದಿ ಮಾಡಲಾಯಿತು. ಜಿಲ್ಲಾ/ರಂಗವಾರು ಪ್ರತಿನಿಧಿಗಳಿಗೆ ವರದಿಯ ಓದು ಮತ್ತು ಗುಂಪು ಚರ್ಚೆಗೆ ಕಾಲಾವಕಾಶ ಕೊಡಲಾಯಿತು. ಜನವರಿ 3ರ 11.30ರಿಂದ ಮರುದಿನ ಸಂಜೆಯವರೆಗೆ ಪ್ರತಿನಿಧಿಗಳಿಂದ ವರದಿಯ ಮೇಲೆ ಪ್ರತಿಕ್ರಿಯೆ ಚರ್ಚೆಗಳೂ ನಡೆದವು. ಚರ್ಚೆಯಲ್ಲಿ 249 ಪ್ರತಿನಿಧಿಗಳಲ್ಲಿ 26 ಜಿಲ್ಲೆಗಳ 10 ಮಹಿಳೆಯರು ಸೇರಿದಂತೆ 71 ಪ್ರತಿನಿಧಿಗಳು ಭಾಗವಹಿಸಿದರು. 15 ಲಿಖಿತ ಪ್ರತಿಕ್ರಿಯೆಗಳನ್ನು ಕೊಡಲಾಯಿತು. ಪ್ರತಿನಿಧಿಗಳು ಮೇಲೆ ಹೇಳಿದ ರಾಜಕೀಯ ಪರಿಸ್ಥಿತಿ, ಸಂಘಟನಾ ಸಮಸ್ಯೆಗಳೂ ದೌರ್ಬಲ್ಯಗಳ ಬಗ್ಗೆ ಹಾಗೂ ತಮ್ಮ ಹೋರಾಟಗಳ ಮಧ್ಯಪ್ರವೇಶಗಳ ಬಗ್ಗೆ ತಮ್ಮ ಪ್ರತಿಕ್ರಿಯೆ, ಅಭಿಪ್ರಾಯ, ಸಲಹೆ–ಸೂಚನೆಗಳನ್ನು ನೀಡಿದರು. ವಿವರಣೆಗಳನ್ನು ಕೇಳಿದರು. ಬಿಟ್ಟು ಹೋಗಿರುವ ಅಂಶಗಳನ್ನು ಎತ್ತಿ ತೋರಿಸಿದರು. ಚರ್ಚೆ ಮುಗಿದ ಮೇಲೆ ಕಾರ್ಯದರ್ಶಿ ಚರ್ಚೆಗೆ ಉತ್ತರ ನೀಡಿ ಪ್ರತಿನಿಧಿಗಳ ಹಲವು ಸಲಹೆ–ಸೂಚನೆ ಅಭಿಪ್ರಾಯಗಳನ್ನು, ಸೇರಿಸಬಹುದಾದ ವಿಷಯಗಳ ಬಗ್ಗೆ ತಿಳಿಸಿದರು. ಇತರ ಹಲವು ವಿಷಯಗಳ ಬಗ್ಗೆ ವಿವರಣೆ ನೀಡಿದರು. ಕಾರ್ಯದರ್ಶಿಯ ಉತ್ತರದ ನಂತರ ಸಮ್ಮೇಳನ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

ನಿರ್ಣಯಗಳು

ಸಮ್ಮೇಳನ 18 ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಿತು. ಈ ನಿರ್ಣಯಗಳ ಪೂರ್ಣಪಠ್ಯವನ್ನು ಈ ಸಂಚಿಕೆಯ ಪುಟ 2 ಮತ್ತು 4–8 ಪುಟಗಳಲ್ಲಿ ಕೊಡಲಾಗಿದೆ. ಕಾ.ಕೆ. ಶಂಕರ್ ಅವರು ಅರ್ಹತಾ ಸಮಿತಿ ತಯಾರಿಸಿದ ವರದಿಯನ್ನು ಮಂಡಿಸಿದರು. ಅರ್ಹತಾ ವರದಿಯನ್ನು ಪುಟ 9 ರಲ್ಲಿ ಕೊಡಲಾಗಿದೆ.

ಕಾ. ಸೀತಾರಾಂ ಯೆಚುರಿ ಮತ್ತು ಕಾ. ಎಂ.ಎ.ಬೇಬಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಸಮ್ಮೇಳನ 23 ಸದಸ್ಯರ ರಾಜ್ಯ ಸಮಿತಿಯನ್ನೂ, ರಾಜ್ಯ ಸಮಿತಿಗೆ 5 ಶಾಶ್ವತ ಆಹ್ವಾನಿತರನ್ನೂ ಆರಿಸಿತು. ರಾಜ್ಯ ಸಮಿತಿಯಲ್ಲಿ 12 ಸ್ಥಾನಗಳನ್ನು ಮುಂದೆ ತುಂಬಲು ಖಾಲಿ ಬಿಡಲು ಸಮ್ಮೇಳನ ಅನುಮೋದಿಸಿತು. ಪಕ್ಷದ ರಾಷ್ಟ್ರೀಯ ಮಹಾಧಿವೇಶನಕ್ಕೆ 11 ಪ್ರತಿನಿಧಿಗಳನ್ನು ಸಹ ಆರಿಸಿತು. ಸಮ್ಮೇಳನ 3 ಸದಸ್ಯರ ಹಿಂದೆ ಇದ್ದ ರಾಜ್ಯ ಕಂಟ್ರೋಲ್ ಕಮಿಶನನ್ನು ಪುನರಾಯ್ಕೆ ಮಾಡಿತು. ಆ ಮೇಲೆ ನೂತನ ರಾಜ್ಯ ಸಮಿತಿ ಸಭೆ ಸೇರಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಅವರನ್ನು ಕಾರ್ಯದರ್ಶಿಯಾಗಿ ಮತ್ತೆ ಚುನಾಯಿಸಿತು. ಕಾ. ಜಿ.ವಿ.ಶ್ರೀರಾಮರೆಡ್ಡಿ ಸಮ್ಮೇಳನ ವಿಧಿಸಿರುವ ಮುಂದಿನ ಕರ್ತವ್ಯಗಳ ಬಗ್ಗೆ ಮಾತನಾಡಿದರು. ಸಮ್ಮೇಳನ ಆಯ್ಕೆ ಮಾಡಿದ ರಾಜ್ಯ ಸಮಿತಿ, ಆಹ್ವಾನಿತರು, ಮಹಾಧಿವೇಶನಕ್ಕೆ ಪ್ರತಿನಿಧಿಗಳು, ಕಂಟ್ರೋಲ್ ಕಮಿಶನ್ ಸದಸ್ಯರ ಪಟ್ಟಿಯನ್ನು ಪುಟ 23ರಲ್ಲಿ ಕೊಡಲಾಗಿದೆ.

ಸಮ್ಮೇಳನವನ್ನು ಸಂಘಟಿಸಿದ ದ.ಕ. ಜಿಲ್ಲಾ ಸಮಿತಿ ಪರವಾಗಿ ಕಾ. ವಸಂತ ಆಚಾರಿ ಮಾತನಾಡಿ ವಂದನಾರ್ಪಣೆ ಮಾಡಿದರು. ಭಾರೀ ಕರತಾಡನಗಳೊಂದಿಗೆ ದ.ಕ. ಜಿಲ್ಲಾ ಸಮಿತಿಗೆ ಅಧ್ಯಕ್ಷೀಯ ಮಂಡಳಿ ಪ್ರತಿನಿಧಿಗಳ ಪರವಾಗಿ ಧನ್ಯವಾದಗಳನ್ನು ಅರ್ಪಿಸಿತು. ಸಮ್ಮೇಳನಕ್ಕೆ ಹಗಲಿರುಳು ದುಡಿದ ಕಾರ್ಯಕರ್ತರನ್ನು ಭಾರೀ ಕರತಾಡನಗಳೊಂದಿಗೆ ಸನ್ಮಾನಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾಂ ಯೆಚುರಿ ಹಾಗೂ ಪೊಲಿಟ್ ಬ್ಯುರೊ ಸದಸ್ಯರಾದ ಕಾ. ಎಸ್. ರಾಮಚಂದ್ರ ಪಿಳ್ಳೆ, ಕಾ. ಎಂ.ಎ. ಬೇಬಿ, ಕಾ. ಬಿ.ವಿ. ರಾಘವುಲು ಪ್ರತಿನಿಧಿ ಅಧಿವೇಶನದಲ್ಲಿ ಉಪಸ್ಥಿತರಿದ್ದು ಸಮ್ಮೇಳನಕ್ಕೆ ಮಾರ್ಗದರ್ಶನವಿತ್ತರು.





JANASHAKTHI KANNADA VARA PATRIKE January 15-21, 2018 Price: Rs. 10/- Date of Publication: 12 January 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಮೂಡುಬಿದಿರೆಯಲ್ಲೇನು ವಿಶೇಷ?

ಮೂಡುಬಿದಿರೆಯ 22ನೇ ಸಮ್ಮೇಳನದ ಕಲಾಪಗಳ ಒಳಗೂ ಹೊರಗೂ ಕೆಲವು ವಿಶೇಷವಾದ ಕ್ಷಣಗಳನ್ನು ಇಲ್ಲಿ ಕೊಟ್ಟಿರುವ ಫೊಟೊಗಳಲ್ಲಿ ಹಿಡಿಯಲಾಗಿದೆ. ಇವುಗಳಿಲ್ಲದೆ ಈ ಸಮ್ಮೇಳನದ ಚಿತ್ರಣ ಪೂರ್ಣವಾಗದು


ಹುತಾತ್ಮರ ಸ್ತಂಭಕ್ಕೆ ಕಾ. ಯೆಚುರಿ ಕೆಂಪು ವಂದನೆ



ಬಹಿರಂಗ ಸಭೆಯಲ್ಲಿ ಪುಸ್ತಕಗಳ ಬಿಡುಗಡೆ


ಮಾರ್ಕ್ಸ್200–ಕ್ಯಾಪಿಟಲ್150 ಯೋಜನೆಯ ಡಿಸ್ಕೌಂಟ್ ಕೂಪನ್ ಬಿಡುಗಡೆ



ಮಾರ್ಕ್ಸ್ ಕ್ಯಾಲೆಂಡರ್ ಬಿಡುಗಡೆ


ಕ್ರಿಯಾ ಪುಸ್ತಕ ಮಾರಾಟದ ಮಳಿಗೆ


ಸಮ್ಮೇಳನಕ್ಕೆ ಹಗಲಿರುಳು ದುಡಿದ ಸ್ವಯಂಸೇವಕರಿಗೆ ಸನ್ಮಾನ


ಯೆಚುರಿ ಬಾಲಕನೊಂದಿಗೆ


ಹಿರಿಯ ಪ್ರತಿನಿಧಿ ಕಾ. ಶ್ರೀಯಾನ್ ಅವರಿಗೊಂದು ಕಿರೀಟ!


ಹಿರಿಯ ಪ್ರತಿನಿಧಿಗಳಲ್ಲಿ ಒಬ್ಬರಾದ ಕಾ. ಕೋದಂಡರಾಮ್


ಹುತಾತ್ಮರ ಸ್ತಂಭ


ಸ್ತ್ರೀಶಕ್ತಿಗೆ ಬೆದರಿ ಹಿಂದೆ ಸರಿದ ಮುನೀರ್


ಇನ್ನೊಬ್ಬ ಹಿರಿಯ ಸಂಗಾತಿ


ಸಮ್ಮೇಳನದಲ್ಲಿ ಬಾಲಕಿ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**